ಗೌರಿ ಲಂಕೇಶರ

ಲಂಕೇಶ್

ಸೆಪ್ಟೆಂಬರ್ 6, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಗೌಡರ ಕುಟುಂಬದಲ್ಲಿ ಯಾವ

ಬಿರುಕು?



ಮಾರನ ಅಧಿಕಾರ ಹೋದರೆ ನಾನು ಹ್ಯಾಪಿ-ಡಾ. ರಮೇಶ್



ಕಪ್ಪುಹಣ: ಸಾಬೀತಾದರೆ ಕವಿತಾಗೆ ಜೈಲು!



ಗೌಡರ ಲೂಟಿಗೆ ಬಿಜೆಪಿ ನೆರವು'-ಯತ್ನಾಳ್

ಕರಾವಳಿ: ಬೀಡಿ ಹಣವಾದ ಹಿತೇಂದ್ರ!

ಲಂಕೇಶ್

ಪೆಪ್ಸಿಯ ಸೀರೆ ಇಂದ್ರಮ್ಮ ಮತ್ತು ಡಾಲರ್ ಧರ್ಮ..

ಪೆಪ್ಸಿ ಮತ್ತು ಕೊಕೊ ಕೋಲಾಗಳಲ್ಲಿ ಕೀಟನಾಶಕಗಳಿವೆ ಎಂದು ವರದಿಗಳು ಬಂದು ಭಾರತದ ಎಲ್ಲೆಡೆ ಪೆಪ್ಸಿ ಮತ್ತು ಕೋಲಾಗಳ ವಿರುದ್ಧ ಪ್ರತಿಭಟನೆ ನಡೆಯುತ್ತಿದ್ದಂತೆ ಪೆಪ್ಸಿ ಕಂಪನಿ ತನ್ನ ಕಂಪನಿಯ ಜಾಗತಿಕ ಮುಖ್ಯಸ್ಥೆಯನ್ನಾಗಿ ಇಂದ್ರ ಮೇಡಮ್ಮನ್ನು ನೇಮಿಸಿದೆ. ಅಷ್ಟಕ್ಕೆ ಕಾಯುತ್ತಿದ್ದ ಪೆಪ್ಸಿ ಫಲಾನುಭವಿ ಪತ್ರಿಕೆಗಳು ಇಂದ್ರ ಮೇಡಮ್ಮನ ಸ್ತುತಿ ಪ್ರಾರಂಭಿಸಿದ್ದಾವೆ. ಇದು ಭಾರತ ವಿಶ್ವಕಪ್ ಗೆದ್ದಷ್ಟೆ ಪ್ರಮುಖ ಸಂಗತಿಯೆಂದೂ ಮತ್ತು ಭಾರತದ ಮಾನವ ಸಂಪನ್ಮೂಲದ ಬಗ್ಗೆ ವಿದೇಶಿಯರಿಗಿರುವ ಗೌರವದ ದ್ಯೋತಕವೆಂದೂ ಬಣ್ಣಿಸಲಾಗುತ್ತಿದೆ.



ಈ ಇಂದ್ರಮ್ಮ ಸೀರೆ ಉಟ್ಟು ಭಾರತದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರಂತೆ. ಆದರೆ ಪೆಪ್ಸಿ ಮುಖ್ಯಸ್ಥೆಯಾಗಿ ಸೀರೆ ಉಟ್ಟುಕೊಂಡೇ ಕೀಟನಾಶಕ ತುಂಬಿರುವ ಪೆಪ್ಸಿ ಮಾರಾಟವನ್ನು ಹೆಚ್ಚಿಸಿ ಭಾರತದ ಜನತೆಯ ಆರೋಗ್ಯದ ಮೇಲೆ ತೀವ್ರವಾಗಿ ದಾಳಿ ಇಟ್ಟರೆ ಅದು ಸಾಧನೆ ಹೇಗಾಗುತ್ತದೆ? ಹಾಗೂ ಅದು ಭಾರತದ ಹೆಮ್ಮೆ ಹೇಗಾಗುತ್ತದೆ? ವಾಸ್ತವವೇನೆಂದರೆ ಈ ಇಂದ್ರಮ್ಮನ ಆಬ್ಬರದಲ್ಲಿ ಈ ದೇಶದ ಜನತೆಯ ಹಿತಾಸಕ್ತಿಯಿಂದ ಪೆಪ್ಸಿಯಲ್ಲಿರುವ ಕೀಟನಾಶಕ ಅಂಶಗಳನ್ನು ಬಯಲಿಗೆ ತಂದ ಭಾರತದ ನಿಜವಾದ ಹೆಮ್ಮೆಯ ಹೆಣ್ಣು ಮಗಳು ಸುನಿತಾ ನಾರಾಯಣ್‌ರ ಕೂಗು ಮೂಲೆ ಸೇರಿಬಿಟ್ಟಿತು.

ಈ ಇಂದ್ರ ಮೇಡಮ್ಮು ಪತ್ರಿಕೆಯಲ್ಲಿ ತನ್ನ ಹಲವಾರು ಹವ್ಯಾಸಗಳ ಬಗ್ಗೆ ಹೇಳಿ ಕೊಳ್ಳುತ್ತಾ ತನಗೆ ತನ್ನ ಜೀವನದಲ್ಲಿ ಯಾವುದೇ ನೈತಿಕ ಗೊಂದಲ ಬಂದರೂ ಧರ್ಮದ ಮೊರೆಹೋಗುತ್ತೇನೆಂದು ಹೇಳಿದ್ದಾರೆ. ಸಂತೋಷ. ಈಗ ತಾನು ಜಗತ್ತಿನ ಜನರಿಗೆಲ್ಲಾ ಕುಡಿಸುತ್ತಿರುವ ಪೆಪ್ಸಿಯಲ್ಲಿ ಕೀಟನಾಶಕಗಳಿದ್ದು ಅದು ಜನರ ಆರೋಗ್ಯವನ್ನು ಹಾಳು ಮಾಡುತ್ತಿರುವುದು, ಅಥವಾ ಈ ಪೆಪ್ಸಿ ಬಂದು ಸ್ಥಳೀಯ ಜನ ಕುಡಿಯುತ್ತಿದ್ದ ಎಳನೀರು, ಕಬ್ಬಿನ ರಸ ಮತ್ತು ಅವುಗಳ ವ್ಯಾಪಾರ ಮಾಡುತ್ತಾ ಹೊಟ್ಟೆ ಹೊರೆದುಕೊಳ್ಳುತ್ತಿದ್ದವರ ಆರ್ಥಿಕತೆ ಸರ್ವನಾಶವಾಗಿರುವುದು ಇವೆಲ್ಲಾ ನಿಮಗೆ ನೈತಿಕ ಪ್ರಶ್ನೆಯಲ್ಲವೆ ಇಂದ್ರ ಮೇಡಮ್ಮು? ಅಥವಾ ಇದನ್ನು ನೈತಿಕ ಪ್ರಶ್ನೆ ಮಾಡದ, ನೀವು ಅನುಸರಿಸುವ ಧರ್ಮದ ನೀತಿ ಸಂಹಿತೆ ಏನು?

ಅದು ಡಾಲರ್ ಧರ್ಮ.. ಅದಕ್ಕೆ ಲೌಕಿಕ ಬದುಕಿನ ನೈತಿಕತೆಗಿಂತ ಹೆಚ್ಚಾಗಿ ಪರಲೋಕದಲ್ಲೂ ಎಕ್ಸಿಕ್ಯುಟೀವ್ ಕ್ಲಾಸಿನಲ್ಲಿ ರಿಸರ್‌ವೇಷನ್ ಮಾಡಿಟ್ಟುಕೊಳ್ಳುವುದೇ ಆ ಧರ್ಮದ ತಿರುಳು..ಸೀರೆ ಉಟ್ಟ ಮಾತ್ರಕ್ಕೆ ಭಾರತದ ಜನತೆಯ ಹೆಮ್ಮೆಯೂ ಅಲ್ಲ. ಧಾರ್ಮಿಕಳು ಎಂದ ಮಾತ್ರಕ್ಕೆ ನ್ಯಾಯಪರಳು ಎಂದೂ ಅಲ್ಲ. ಏಕೆಂದರೆ ಈಗ ಧರ್ಮ ಕೂಡ ಪೆಪ್ಸಿಯಂತೆ ಸರಕು..

ಚಾರ್ವಾಕ - ಶಿವಸುಂದರ್-

ಕಮ್ಯುನಿಸ್ಟ್ ಸಿಪಿಎಮ್ಮು ಬಂಡವಾಳಶಾಹಿ ಅಸೊಚೆಮ್ಮಿನ ಅತಿಥಿಯಾದದ್ದೇಕೆ?



ನಮಗೆಲ್ಲರಿಗೂ ಗೊತ್ತಿರುವ ಹಾಗೆ CPI(M) ಪಕ್ಷದ ಆ ಅಕ್ಷರಗಳ ವಿಸ್ತರಣೆ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ- ಮಾರ್ಕ್ಸಿಸ್ಟ್ . ಅಂದರೆ ಸಿಪಿಎಮ್ ಪಕ್ಷ ಅಂದರೆ ಕಮ್ಯುನಿಸ್ಟ್ ಪಕ್ಷ ಎಂದಾಯ್ತು, ಕಮ್ಯುನಿಸ್ಟ್ ಎಂದರೆ ಕಾರ್ಮಿಕ ವರ್ಗದ, ದುಡಿಯುವ ವರ್ಗದ ಪಕ್ಷಪಾತಿ ಪಾರ್ಟಿ ಎಂದರ್ಥ ಅಲ್ಲವೇ? ಅದನ್ನು ಸಿಪಿಎಮ್ಮಿನವರು ನಿರಾಕರಿಸುವುದಿಲ್ಲ, ಆದರರ್ಥ ಮಾಲಿಕ ವರ್ಗದ ವಿರೋಧಿ ಎಂತಲೂ ಅರ್ಥವಲ್ಲವೇ? ಹಾಗಿದ್ದಲ್ಲಿ ಈ ಪಕ್ಷ ಬಂಡವಾಳಶಾಹಿಗಳ ಅತಿಥಿಯಾಗಲು ಹೇಗೆ ಸಾಧ್ಯ?


ಗುಟ್ಟು

ಅಂಥಹ ಒಂದು ಪ್ರಕರಣ ಇತ್ತೀಚೆಗೆ ದೆಹಲಿಯಲ್ಲಿ ನಡೆದಿದೆ. ಭಾರತದ ದೊಡ್ಡದೊಡ್ಡ ಬಂಡವಾಳ ಶಾಹಿಗಳ ಅಂದರೆ ಈ ದೇಶದ ಕಾರ್ಮಿಕ ವರ್ಗದ ಸುಲಿಗೆ ಮಾಡುತ್ತಿರುವ ಬಂಡವಾಳ ಶಾಹಿಗಳ ಒಕ್ಕೂಟವಾದ ASSOCHAM ಸಂಸ್ಥೆ ಮೊನ್ನೆ ಉದ್ಯೋಗ ಸೃಷ್ಟಿಗೂ, ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಅಭಿವೃದ್ಧಿಗೂ ಇರುವ ಸಂಬಂಧದ ಬಗ್ಗೆ ತಾನು ನಡೆಸಿದ ಅಧ್ಯಯನದ ವರದಿಯನ್ನು ಬಿಡುಗಡೆ ಮಾಡಿತು. ಅದರ ಬಿಡುಗಡೆ ಮಾಡಿದ್ದು ಕಾರ್ಮಿಕ ವರ್ಗದ ಪಕ್ಷ ಎನ್ನುವ ಸಿಪಿಎಮ್ಮಿನ ಪಾಲಿಟ್ ಬ್ಯೂರೋದ ಸದಸ್ಯ ಸೀತಾರಾಂ ಯಚೂರಿ! ಅಷ್ಟು ಮಾತ್ರವಲ್ಲ ಆ ಅಧ್ಯಯನದಲ್ಲಿ ಬಂಡವಾಳಶಾಹಿ ಅಸೊಚೆಮ್ಮಿನವರು ಮಾಡಿರುವ ವಿಶ್ಲೇಷಣೆಯನ್ನೂ ನಮ್ಮ ಈ ಕಮ್ಯುನಿಸ್ಟ್ ಪಂಡಿತರು ಒಪ್ಪಿಕೊಂಡರು.

ಕಮ್ಯುನಿಸ್ಟ್ ತರ್ಕವೂ ಬಂಡವಾಳಶಾಹಿ ತರ್ಕವೂ ಒಂದೇ ಆಗಿಬಿಡುವ ಮತ್ತು ಕಾರ್ಮಿಕ ವರ್ಗದ ಪಕ್ಷ ಬಂಡವಾಳಶಾಹಿ ಒಕ್ಕೂಟದ ಅತಿಥಿಗಳಾಗುವ ಈ ಗುಟ್ಟೇನು?

ಬೆಕ್ಕು ಕಪ್ಪಗಿದ್ದರೇನು ಬಿಳಿಯದಾದರೇನು ಇಲಿ ಹಿಡಿದರೆ ಸರಿ ಎನ್ನುವ ಸಿಪಿಎಮ್ಮು!

ವಾಸ್ತವವೇನೆಂದರೆ ತಮ್ಮ ಪಕ್ಷ ಕಾರ್ಮಿಕ ವರ್ಗದ ಪಕ್ಷ ಎಂದು ಕರೆದರೆ ಪರವಾಗಿಲ್ಲ, ಆದರೆ ಬಂಡವಾಳಶಾಹಿ ವಿರೋಧಿ ಪಕ್ಷ ಎಂದರೆ ಅದನ್ನು ಒಪ್ಪಿಕೊಳ್ಳುವುದೇ ಸ್ವಲ್ಪ ಕಷ್ಟ ಎನ್ನುತ್ತಾರೆ ನಮ್ಮ ಕಾಮ್ರೇಡುಗಳು. ಅದರಲ್ಲೂ ಜಾಗತೀಕರಣದ ಈ ಯುಗದಲ್ಲಿ ವಿದೇಶಿ ಬಂಡವಾಳವೇ ಅಗತ್ಯ ಎಂದು ತಮ್ಮ ಪಕ್ಷ ಪ್ರತಿಪಾದಿಸುತ್ತಿರುವಾಗ ನಾವು ಕಾರ್ಮಿಕ ವರ್ಗದ ಪಕ್ಷಪಾತಿಯೇ ವಿನಃ ಮಾಲೀಕ ವರ್ಗದ ವಿರೋಧಿಯಲ್ಲ ಎನ್ನುತ್ತದೆ ಸಿಪಿಎಮ್ಮು...! ಅಂದರೆ ಸೂರ್ಯ ಹುಟ್ಟಿದರೆ ಬೆಳಕು ಬರುತ್ತದೆ ಎಂದು ಒಪ್ಪುತ್ತೇವೆ. ಆದರೆ ಸೂರ್ಯನ ಬೆಳಕು ಕತ್ತಲನ್ನು ಕೊಲ್ಲುತ್ತದೆ ಎಂದು ಒಪ್ಪಲು ಕಷ್ಟ ಎಂಬುದು ಇದರ ತಾತ್ಪರ್ಯ. ಎರಡು ನಾಲಕ್ಲ ಎಂಟು ಎಂದು ಒಪ್ಪುತ್ತೇವೆ. ಆದರೆ ನಾಲ್ಕೆರಡ್ಲ ಎಂಟು ಎಂದು ಒಪ್ಪುವುದು ಕಷ್ಟ ಎಂಬುದೇ ಅವರ ತರ್ಕ. ಆದರೆ ಕತ್ತಲ ಸಾಮ್ರಾಜ್ಯದಲ್ಲಿ ಬೆಳಕನ್ನು ತರುವ ಉದ್ದೇಶವೇ ಕತ್ತಲನ್ನು ಕೊಲ್ಲುವುದಲ್ಲವೇ? ಕತ್ತಲನ್ನು ಬೆಳಕನ್ನು ಒಟ್ಟಿಗೆ ಇಟ್ಟುಕೊಳ್ಳಲು ಸಾಧ್ಯವೇ? ಹಾಗೆ ಹೇಳುವುದರ ಮೂಲಕ ಬೆಳಗನ್ನು, ಸೂರ್ಯೋದಯವನ್ನು ವಿರೋಧಿಸಿದಂತಾಗುವುದಿಲ್ಲವೇ?



ಉದಾಹರಣೆಗೆ ಅಸೊಚೆಮ್ ಉದ್ಯೋಗ ಮತ್ತು ಜಿ.ಡಿ.ಪಿ.ಗೆ ಇರುವ ಸಂಬಂಧದ ಬಗ್ಗೆ ಮಾಡಿರುವ ಅಧ್ಯಯನದಲ್ಲಿ ಪ್ರಭುತ್ವವು ಉದ್ಯೋಗ ಸೃಷ್ಟಿಗೂ ಒತ್ತು ಕೊಡಬೇಕು. ಇಲ್ಲದಿದ್ದರೆ ಜನರಲ್ಲಿ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಆಗ ಆರ್ಥಿಕತೆ ಸರಕು ವ್ಯಾಪಾರ ಚಲನೆ ಕುಸಿದು ಒಟ್ಟಾರೆ ಆರ್ಥಿಕತೆಯ ಬೆಳವಣಿಗೆಯ ವೇಗ ಹಾಗೂ ಅದರಿಂದಾಗಿ ಜಿ.ಡಿ.ಪಿ. ಅಭಿವೃದ್ಧಿ ದರ ಕುಸಿಯುತ್ತದೆ ಎನ್ನುತ್ತದೆ. ಇದು ತಮ್ಮ ವ್ಯಾಪಾರ ಬೆಳೆಯಬೇಕಾದರೆ ಜನರಲ್ಲಿ ಕೊಳ್ಳುವ ಶಕ್ತಿ ಇರುವಂತೆ ಸರ್ಕಾರ ನೋಡಿಕೊಳ್ಳಬೇಕೆಂಬ ಬಂಡವಾಳಶಾಹಿ ತರ್ಕವೇ ವಿನಃ ಇದರಲ್ಲಿ ನಮ್ಮ ಕಾಮ್ರೇಡುಗಳು ಒಪ್ಪಿಕೊಳ್ಳುವ ಸಮಾಜವಾದಿ ತರ್ಕವೇನಿದೆ?

ವಾಸ್ತವವಾಗಿ ಕಳೆದ ಒಂದು ದಶಕದಿಂದ ನಮ್ಮ ದೇಶದಲ್ಲಿ ಉದ್ಯೋಗ ರಹಿತ ಅಭಿವೃದ್ಧಿ ನಡೆದಿದೆಯೆಂದು, ಇದರಿಂದ ಒಂದು ಸಾಮಾಜಿಕ ಸಂಕ್ಷೋಭೆಯೇ ಉಂಟಾಗುತ್ತದೆಂದು ಯಚೂರಿಯವರ ವಾದ. ಈ ಸಂಕ್ಷೋಭೆಯ ಪರಿಣಾಮವನ್ನು ಅರಿತೇ ಬಂಡವಾಳಶಾಹಿ ವ್ಯವಸ್ಥೆ ತೀರಾ ಬಿಕ್ಕಟ್ಟಿಗೆ ತಲುಪಿದಾಗ ತನ್ನ ಸುಲಿಗೆಯ ವೇಗವನ್ನು ಸ್ವಲ್ಪ ನಿಯಂತ್ರಿಸಿ ಮಾನವೀಯ ಮುಖವಾಡವನ್ನು ಹಾಕಿಕೊಳ್ಳುತ್ತದೆ. ಅದನ್ನೇ ನಿಜವಾದ ಮಾನವೀಯತೆ ಎಂದು ಕಾಮ್ರೇಡರು ಸರ್ಟಿಫಿಕೇಟ್ ಕೊಡುತ್ತಾರೆ.

ರಟ್ಟು

ಏಕೆಂದರೆ ಬಂಗಾಳದಲ್ಲಿ ಈಗಿರುವ ಆರ್ಥಿಕ ಸಿದ್ಧಾಂತವೇನೆಂದರೆ ಬಂಡವಾಳ ಬೇಕು. ಬಂಗಾಳ ಬೆಂಗಳೂರಾಗಬೇಕು. ಆ ಬಂಡವಾಳ ಎಲ್ಲಿಂದ ಬಂದರೂ ಪರವಾಗಿಲ್ಲ, ಬೆಕ್ಕು ಕರ‍್ರಗಿದ್ದರೂ ಪರವಾಗಿಲ್ಲ, ಬೆಳ್ಳಗಿದ್ದರೂ ಪರವಾಗಿಲ್ಲ, ಇಲಿ ಹಿಡಿದರೆ ಸಾಕೆಂಬ ಪಕ್ಕಾ ಬಂಡವಾಳ ವಾದವೇ ಕಾಮ್ರೇಡರ ಸಿದ್ಧಾಂತ. ಅದಕ್ಕೆ ಈ ಸ್ನೇಹ. ಇದೇ ಅದರ ಗುಟ್ಟು.

No Comments




"ಕೇಂದ್ರ ಮಂತ್ರಿ ರಾಮದಾಸ್ ಕೋಲಾ ಕಂಪನಿಗಳ ಪರವಾಗಿ ಬ್ಯಾಟಿಂಗ್ ನಡೆಸಿದ್ದಾರೆ"
-ಸುನೀತಾ ನಾರಾಯಣ್
(ಕೋಲಾಗಳಲ್ಲಿ ಕೀಟನಾಶಕಗಳಿವೆ ಎಂದು ರುಜುವಾತು ಮಾಡಿದ CSE ಸಂಸ್ಥೆಯ ನಿರ್ದೇಶಕಿ.

"ವಿಗ್ರಹಗಳು ಹಾಲು ಕುಡಿಯುತ್ತವೆ ಎಂಬುದು ಅತ್ಯಂತ ಅವೈಜ್ಞಾನಿಕ. ಆಧ್ಯಾತ್ಮಿಕತೆಗೆ ಸ್ವಲ್ಪವಾದರೂ ಭೌತಿಕತೆಯ ತಳಹದಿ ಇರಲೇ ಬೇಕು"
ಸ್ವಾಮಿ ಮುಕ್ತಿಕಾನಂದ
ರಾಮಕೃಷ್ಣ ಮಿಷನ್ ಅಧ್ಯಕ್ಷ



"ಈ ಆಸ್ಟ್ರೇಲಿಯಾದ ಬಿಳಿ ಅಂಪೈರ್ ಬಿಳಿ ಹೇರ್, ಬಿಳಿ ಕೋಟು ಹಾಕಿ ಕೊಂಡು ಫೀಲ್ಡಿಗಿಳಿದಾಗ ಒಬ್ಬ ಮಿನಿ ಹಿಟ್ಲರೇ"
-ಇಮ್ರಾನ್ ಖಾನ್, ಪಾಕಿಸ್ತಾನದ ಮಾಜಿ ಕ್ಯಾಪ್ಟನ್.



"ಜೆಡಿಎಸ್ಸನ್ನು ಅಪ್ಪ ಮಗನ ಪಾರ್ಟಿ ಎನ್ನುವ ಪತ್ರಕರ್ತರು ಇಲ್ಲಿದ್ದರೆ ಕೂಡಲೇ ಜಾಗ ಖಾಲಿ ಮಾಡಿ."
-ದೇವೇಗೌಡ,
ಪತ್ರಿಕಾಗೋಷ್ಠಿಯೊಂದರಲ್ಲಿ.

"ನನ್ನ ಕಾರಿನ ಮೇಲೆ ಕಲ್ಲು ಹೊಡೆಸಿದವರು ದೇವೇಗೌಡರೇ"
-ಸಿದ್ಧರಾಮಯ್ಯ


"ಬಿ.ಜೆ.ಪಿ. ಸಂಸದರಿಂದಲೇ ಬಜೆಪಿ ಸರ್ಕಾರಕ್ಕೆ ಧಕ್ಕೆ"
-ಯಡಿಯೂರಪ್ಪ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನಾನು ಕೊಟ್ಟ ಎಲ್ಲ ಭರವಸೆಗಳನ್ನೂ ಈಡೇರಿಸುತ್ತೇನೆ"
-ಕುಮಾರಸ್ವಾಮಿ

"ನಾನು ಜಮೀರ್ ಅಹಮದ್ ಚೆನ್ನಾಗಿಯೇ ಇದ್ದೇವೆ. ಪತ್ರಿಕೆಗಳೇ ಇಲ್ಲದ್ದನ್ನು ಹಬ್ಬಿಸುತ್ತಿವೆ"
-ಕುಮಾರಸ್ವಾಮಿ



"ಸಂಸ್ಕೃತ ಕನ್ನಡಕ್ಕೆ ಮಾರಕವಾಗದು"
-ಮಲ್ಲೆಪುರಂ ವೆಂಕಟೇಶ್

"ನಕ್ಸಲರಿಗೆ ಜನರು ಸಹಕರಿಸುತ್ತಿಲ್ಲ"
-ಎಂ.ಪಿ.ಪ್ರಕಾಶ್

ವಾರದ ಘೋಷಣೆ:

"ನನ್ನ ಬಾಳಂತೂ ಹಾಳಾಯಿತು. ಕೋರ್ಟು ರೊಡ್ರಿಗ್ಸ್‌ಗೆ ನೀಡಿದ ಶಿಕ್ಷೆಯಿಂದಲಾದರೂ ಎಚ್ಚೆತ್ತು, ಇನ್ನಾರೂ ಈ ರೀತಿಯ ಆಸಿಡ್ ಎರಚುವಂತ ಘೋರ ಕೃತ್ಯಕ್ಕೆ ಇಳಿಯದಿರಲಿ"


ಹಸೀನಾ (ರೊಡ್ರಿಗ್ಸ್ ಎಂಬ ಕ್ರೂರಿಯಿಂದ ಆಸಿಡ್ ದಾಳಿಗೆ ಗುರಿಂಯಾದ ದುರ್ದೈವಿ)

ಇಲ್ಲಿ ವಿಗ್ರಹಗಳು ಹಾಲು ಕುಡಿಯುತ್ತವೆ.. ಮಕ್ಕಳು ಹಾಲಿಲ್ಲದೆ ಸಾಯುತ್ತವೆ:

ಇದೊಂದು ವಿಚಿತ್ರ ದೇಶ..! ಇಲ್ಲಿ ನಿರ್ಜೀವ ವಿಗ್ರಹಗಳಿಗೆ ಬಲವಂತವಾಗಿ ಹಾಲು ಕುಡಿಸುತ್ತೇವೆ. ಅವು ಹಾಲು ಕುಡಿಯದಿದ್ದರೂ ಕುಡಿದವೆಂಬ ಭ್ರಮೆಯಲ್ಲಿ ಧನ್ಯರಾಗುತ್ತೇವೆ. ಆದರೆ ಇದೇ ದೇಶದಲ್ಲಿ 10 ಕೋಟಿಗೂ ಹೆಚ್ಚು ಮಕ್ಕಳು ಕುಡಿಯಲು ಹಾಲಿಲ್ಲದೆ, ತಿನ್ನಲು ಅನ್ನವಿಲ್ಲದೆ ಬಾಲಕಾರ್ಮಿಕರಾಗಿ ಸಾಯುತ್ತಿದ್ದರೆ ದಿವ್ಯ ಮೌನ ವಹಿಸುತ್ತೇವೆ. ಅಣುರೇಣು, ತೃಣಕಾಷ್ಟಗಳಲ್ಲೂ ದೇವರಿದ್ದಾನೆ ಎನ್ನುತೇವೆ. ಪ್ರತಿ ಮನುಷ್ಯನೂ ದೇವರ ಸೃಷ್ಟಿ ಎನ್ನುತ್ತವೆ ಎಲ್ಲಾ ಧರ್ಮಗಳು(ಬ್ರಾಹ್ಮಣ ಧರ್ಮವೊಂದನ್ನು ಬಿಟ್ಟು!).



ಆದರೆ ಪ್ರತಿ ಧರ್ಮದಲ್ಲೂ ವರ್ಗಗಳು. ಭಾರತದಲ್ಲಿ ಎಲ್ಲಾ ಧರ್ಮಗಳಲ್ಲೂ ಜಾತಿಗಳು. ಹೀಗಾಗಿಯೇ ಇದು ಕೇವಲ ಮೂಢನಂಬಿಕೆಯ ವಿಷಯವೂ ಅಲ್ಲ. ಆದ್ದರಿಂದಲೇ ವೋಲ್ಟೈರ್ ಎಂಬ ತತ್ವಜ್ಞಾನಿ 'ಮೂಢನಂಬಿಕೆ ಎಂಬುದು ಬುದ್ಧಿವಂತ ತಾಯಿಯ ಹುಚ್ಚು ಮಗಳು' ಎಂದಿದ್ದನ್ನು ಪೂರ್ತಿ ಒಪ್ಪಲಾಗುವುದಿಲ್ಲ. ಅದರಲ್ಲೂ ಭಾರತದಲ್ಲಿ ಮಧ್ಯಮ ವರ್ಗ ಅದರಲ್ಲೂ ಸುಶಿಕ್ಷಿತ ಮಧ್ಯಮ ವರ್ಗ ಈ ಹಾಲು ಕುಡಿಸುವ ಪ್ರಕರಣದಲ್ಲಿ ತೋರುತ್ತಿರುವುದು ಮೂಢನಂಬಿಕೆಯನ್ನು ಮಾತ್ರವಲ್ಲ.. ಅದರ ಹಿಂದೆ ಹತಾಶೆಯೂ ಇದೆ.. ಕಪಟವೂ ಇದೆ..!



ಮಾನವ ಸಂವೇದನೆಗೆ
ಹೊಸ ವ್ಯಾಖ್ಯೆ ನೀಡಿದವರು
ಪ್ರೀತಿಯ ಕವಿ ಖಲೀಲ್
ಗಿಬ್ರಾನ್. ಅವರ ಸುಂದರ
ಸಾಲುಗಳು ಈ ಸಲದ
ಸೂಕ್ತಿಗಳಾಗಿವೆ. ಇವುಗಳನ್ನು
ನಮ್ಮ ಕೊಪ್ಪಳದ
ವಕೀಲರಾದ ವಿಜಯ
ಅಮೃತರಾಜ್‌ರವರು
ಕಳಿಸಿರುವ ಸಂಗ್ರಹದಿಂದ
ಆಯ್ದುಕೊಳ್ಳಲಾಗಿದೆ.
ಅವರಿಗೆ ಧನ್ಯವಾದಗಳು.
-ಮೂರ್ತಿ

ಮೊಲಗಳಿಗಿಂತ ಹೆಚ್ಚಾಗಿ ಆಮೆಗಳು ರಸ್ತೆಯ ವಿಷಯ ಹೇಳಬಲ್ಲವು

ರೆಡ್ಡಿಯ ಸೀಡಿಯನ್ನು ಮೀರಿದ ಹಗರಣ

ಕಂಡಹಾಗೆ



'ಗಣಿ ಅಗೆದು ಇಲಿ ಹಿಡಿದ ರೆಡ್ಡಿ' ಎಂದೂ, 'ಠುಸ್ ಎಂದ ರೆಡ್ಡಿ ಬಾಂಬ್' ಎಂದೂ ಜನಾರ್ಧನ ರೆಡ್ಡಿಯವರ ಆಗಸ್ಟ್ 23ರ ಪತ್ರಿಕಾಗೋಷ್ಠಿಯನ್ನು ಬಹುತೇಕ ಪತ್ರಿಕೆಗಳು, ಚಾನೆಲ್‌ಗಳು ಬಣ್ಣಿಸಿವೆ. ನಿಜ, ಅವತ್ತು ತೆಹಲ್ಕಾದ ಟೇಪ್‌ನಲ್ಲಿ ಬಂಗಾರು ಲಕ್ಷ್ಮಣ್ ಲಂಚ ಪಡೆಯುತ್ತಿರುವುದನ್ನು ತೋರಿಸಿದ್ದಂತೆಯೇ ಕುಮಾರಸ್ವಾಮಿಯವರ ಸಹೋದರರು ಲಂಚ ಸ್ವೀಕರಿಸುತ್ತಿರುವುದನ್ನು ರೆಡ್ಡಿಯವರು ತೋರಿಸುತ್ತಾರೆ ಎಂದೇ ಬಹಳಷ್ಟು ಜನ ಎಣಿಸಿದ್ದರು. ಅದನ್ನು ನೋಡಲು ಎಲ್ಲರೂ ಕಾದಿದ್ದರು.

ಆದರೆ ಅವತ್ತು ನಡೆದಿದ್ದೇ ಬೇರೆ. ಇವತ್ತಿನವರೆಗೂ ಬೋಫೋರ್ಸ್ ಹಣ ಎಲ್ಲಿಂದ ಎಲ್ಲಿಗೆ ಹೋಯಿತು ಎಂದು ಸಾಬೀತುಪಡಿಸಲು ಸಾಧ್ಯವಾಗಿಲ್ಲ, ಆದರೆ ರೆಡ್ಡಿಯವರು ಕವಿತಾ ಬಾಲಕೃಷ್ಣೇಗೌಡ ಎಂಬ ಅಪ್ಪಟ ಗೃಹಿಣಿಯ ಖಾತೆಯಿಂದ ಸ್ವತಃ ಕುಮಾರಸ್ವಾಮಿಯವರಿಗೆ, ಅಪಾರ ಆಸ್ತಿ ಖರೀದಿಸುವಿಕೆಗೆ ಕೋಟ್ಯಂತರ ರೂಪಾಯಿ ಹೋಗಿದೆ ಎಂಬುದನ್ನು ದಾಖಲೆ ಸಮೇತ ನೀಡಿದರು. ದುರಾದೃಷ್ಟ ವಿಷಾತ್, ಇದು 'ದೃಶ್ಯ' ಮಾಧ್ಯಮದ ಯುಗ. ಎಲ್ಲವೂ ತೆರೆಯ ಮೇಲೆ ಕಂಡುಬಂದರೆ ಮಾತ್ರ ಸತ್ಯ. ಅವತ್ತು ರೆಡ್ಡಿಯವರು ನೀಡಿದ ದಾಖಲೆಗಳನ್ನು ಸ್ವಲ್ಪ ವ್ಯವಧಾನದಿಂದ ಓದುವ, ಅದರಲ್ಲಿದ್ದ ಮಾಹಿತಿಯನ್ನು ಗ್ರಹಿಸುವ ತಾಳ್ಮೆ ಯಾವ ಪತ್ರಕರ್ತರಿಗೂ (ಸಂಜೆವಾಣಿ ಹೊರತುಪಡಿಸಿ) ಇರದಿದ್ದದ್ದು ದುರಂತ.

ಅದೇನೆ ಇರಲಿ, ರೆಡ್ಡಿಯವರು ಬಿಡುಗಡೆ ಮಾಡಿದ ಸೀಡಿಗಳು ಸ್ಪಷ್ಟವಾಗಿಲ್ಲ ಎಂದ ಮಾತ್ರಕ್ಕೆ ಭ್ರಷ್ಟಾಚಾರ ನಡೆದಿಲ್ಲ; ಲಂಚ ಕೊಡುವುದು, ಸ್ವೀಕರಿಸುವುದು ಆಗಿಲ್ಲ ಎಂದು ಹೇಳಲಿಕ್ಕೆ ಬರುವುದಿಲ್ಲ, ಏಕೆಂದರೆ ಈಗಾಗಲೇ ಸಿಕ್ಕಿರುವ ಮಾಹಿತಿಯ ಪ್ರಕಾರ ಈ ಹಗರಣ ರೆಡ್ಡಿಯವರನ್ನೂ, ಅವರ ಸೀಡಿಗಳನ್ನೂ ಮೀರಿದ್ದಾಗಿದೆ.


ಎಲ್ಲಕ್ಕಿಂತಲೂ ಇಲ್ಲಿ ಮುಖ್ಯವಾಗಿರುವುದು ದೇವೇಗೌಡರ ಕುಟುಂಬದ ಹೆಣ್ಣುಮಕ್ಕಳಿಗೆ ಇಷ್ಟೊಂದು ಹಣ ಎಲ್ಲಿಂದ ಬಂತು ಎಂಬುದು. ಕುಮಾರಸ್ವಾಮಿಯವರು ತಮ್ಮ ಎಂದಿನ ಭಂಡತನದ ಶೈಲಿಯಲ್ಲಿ 'ನಮ್ಮ ಮನೆಯ ಮಹಿಳೆಯರು ಕಾನೂನುಬದ್ಧವಾಗಿ ಆಸ್ತಿ ಖರೀದಿಸಿದ್ದಾರೆ, ಯಾರ ಭೂಮಿಯನ್ನೂ ಅಕ್ರಮವಾಗಿ ಕಬಳಿಸಿಲ್ಲ' ಎಂದು ಹೇಳಿದ್ದಾರೆ. ಅಲ್ಲಾ, ಕುಮಾರಸ್ವಾಮಿಯವರೇ... ಅವರೆಲ್ಲ ಕೋಟ್ಯಂತರ ರೂಪಾಯಿಗಳ ಆಸ್ತಿಯನ್ನು ಸಕ್ರಮವಾಗಿಯೇ ಖರೀದಿಸಿರಬಹುದು. ಆದರೆ ಅದನ್ನು ಖರೀದಿಸಲು ಬಂದ ಹಣವೂ ಸಕ್ರಮವಾಗಿತ್ತೆ ಎಂಬುದೇ ಇಲ್ಲಿರುವ 'ಮಿಲಿಯನ್ ರುಪೀಸ್ ಪ್ರಶ್ನೆ'!

ತಮ್ಮ ಪತ್ನಿ, ಸಹೋದರಿಯರು, ಅತ್ತೆಯರು ಕೋಟ್ಯಂತರ ರೂಪಾಯಿಗಳನ್ನು ದುಡಿದದ್ದು ಯಾವಾಗ? ಅವರೆಲ್ಲ ಯಾವ ಕ್ಷೇತ್ರದಲ್ಲಿ ಪರಿಣಿತಿ ಹೊಂದಿ, ಯಾವ ಆಫೀಸಿನಲ್ಲಿ ಕೆಲಸ ಮಾಡಿ ಈ ಹಣ ಗಳಿಸಿದರು?

ಕುಮಾರಸ್ವಾಮಿಯವರ ಪತ್ನಿ ಅನಿತಾ ಕುಮಾರಸ್ವಾಮಿ ಇಂಜಿನಿಯರಿಂಗ್ ಪದವೀಧರೆ ಎಂಬುದೇನೋ ನಿಜ. ಆದರೆ ತಾನು ಇಂಜಿನಿಯರಿಂಗ್ ಓದಿದ್ದರೂ ನಿರುದ್ಯೋಗಿ ಎಂದು ಹೇಳಿಯೇ ಆಕೆಯ ಹೆಸರಲ್ಲಿ ಪೆಟ್ರೋಲ್ ಬಂಕ್ ಅನ್ನು ಪಿ.ವಿ. ನರಸಿಂಹರಾವ್‌ರವರಿಂದ ಕರುಣಿಸಿಕೊಳ್ಳಲಾಗಿತ್ತಲ್ಲವೇ? ಇಂತಹ ನಿರುದ್ಯೋಗಿ ಅನಿತಾ ಯಾವಾಗ, ಹೇಗೆ ಕೋಟ್ಯಾಧಿಪತ್ನಿಯಾದರು?

ಇನ್ನು ಬಾಲಕೃಷ್ಣೇಗೌಡರ ಪತ್ನಿ ಕವಿತಾ... ಈಕೆ ಅನಿತಾರವರಂತೆ ಇಂಜಿನಿಯರಿಂಗ್ ಓದಿದವರಲ್ಲ, ಆದರೂ ಆಕೆ ತನ್ನ ಮೈದುನ ಕುಮಾರಸ್ವಾಮಿಯವರ ಮಾಲೀಕತ್ವದ 'ಕಾಕಾಂಬರಿ' ಸಂಸ್ಥೆಗೆ 4.15 ಕೋಟಿ ನೀಡುತ್ತಾಳೆಂದರೆ ಅದರ ಮರ್ಮವೇನು? ಅಷ್ಟೇ ಅಲ್ಲದೆ, ದಿನ ಬೆಳಗಾದರೆ ಬೇರೆ ಯಾವ ಕೆಲಸವೂ ಇಲ್ಲವೆಂಬಂತೆ ರಿಜಿಸ್ಟ್ರಾರ್‌ರವರ ಆಫೀಸಿಗೆ ಹಾಜರಾಗಿ ಹಲವಾರು ಎಕರೆ ಭೂಮಿಯನ್ನು ಏಕಕಾಲಕ್ಕೆ ಖರೀದಿಸಿರುವುದರ ಹಿಂದಿನ ಮರ್ಮವೇನು? ಈ ಭೂಮಿಯ ಅಸಲಿ ಒಡೆಯರ್‍ಯಾರು? ಅವುಗಳ GPA ಹೋಲ್ಡರ್‌ಗಳ್ಯಾರು? ಒಂದೇ ವಾರದಲ್ಲಿ ಬೆಂಗಳೂರಿನ ಬಿದರಹಳ್ಳಿ ಹೋಬಳಿಯ ನೂರು ಎಕರೆ ಜಮೀನಿನ ಮಾಲೀಕರೆಲ್ಲಾ ತಮ್ಮ ಜಮೀನುಗಳನ್ನು ಕವಿತಾರವರಿಗೆ ಮಾರಿದ್ದರ ಹಿಂದಿನ ಗುಟ್ಟೇನು?

ಕವಿತಾರವರ ಬಗ್ಗೆ ಮೆಚ್ಚಲೇಬೇಕಾದ ಅಂಶವಂತೂ ಇದೆ. ಸಾಮಾನ್ಯವಾಗಿ ಮದುವೆ ಆದ ನಂತರ ತವರಿನೊಂದಿಗೆ 'ಹಿಂದೂ' ಹೆಣ್ಣು ಮಕ್ಕಳ ಸಂಪರ್ಕ ಸೆಂಟಿಮೆಂಟಲ್ ಆಗಿ ಮಾತ್ರ ಇರುತ್ತದೆ. ಅಥವಾ ತನ್ನ ಗಂಡನಿಗೆ ಸಾಕಷ್ಟು ವರದಕ್ಷಿಣೆ ನೀಡಲಿಲ್ಲವೆಂಬ ತಕರಾರು ಇರುತ್ತದೆ. ಆದರೆ ಕವಿತಾ ತಾನು ಅಂತಹ ಮಹಿಳೆ ಅಲ್ಲ ಅಂತ ತೋರಿಸಿದ್ದಾರೆ. ತಾನು 'ಗಳಿಸಿದ' ಹಣದಲ್ಲಿ ಮೈದುನನ ಸಂಸ್ಥೆಗೆ ಕೋಟ್ಯಂತರ ರೂಪಾಯಿ ನೀಡುತ್ತಾರಲ್ಲದೆ, ತಮ್ಮ ತಂದೆ ಹೊನ್ನಪ್ಪ ಮತ್ತು ತಾಯಿ ಜಯಮ್ಮ ಕೂಡ ತಮ್ಮಂತೆಯೇ ಕಂಡಲ್ಲೆಲ್ಲ ಭೂಮಿ ಖರೀದಿಸಲು ಸಹಕರಿಸುತ್ತಾರೆ. ಇಂತಹ 'ಧಾರಾಳ' ಮಗಳು, ಸೊಸೆ, ಅತ್ತೆ, ಹೆಂಡತಿ ಪಡೆದ ಗೌಡರ ಕುಟುಂಬ ನಿಜವಾಗಲೂ ಏಳು ಜನ್ಮಗಳ 'ಪುಣ್ಯ' ಮಾಡಿರಬೇಕು, ಛೀ!



ಅಲ್ಲಾ... ಗೌಡರ ಪುತ್ರರು ಮತ್ತು ಅಳಿಯಂದಿರು ಅಕ್ರಮವಾಗಿ ಗಳಿಸಿರುವುದಕ್ಕೆಲ್ಲ ತಮ್ಮ ಹೆಂಡತಿಯರನ್ನೇ ಬೇನಾಮಿಗಳನ್ನಾಗಿ ಮಾಡಿ, ಅದೆಲ್ಲ ಈ ಅಪ್ಪಟ ಗೃಹಿಣಿಯರು ಗಳಿಸಿದ ದುಡ್ಡು ಎಂದರೆ ಅದನ್ನು ನಂಬಲು ಕರ್ನಾಟಕದ ಜನರು ಮುಠ್ಠಾಳರಲ್ಲ! ಹಾಗೊಮ್ಮೆ ಜನ ನಂಬುತ್ತಾರೆ ಎಂದು ಗೌಡರ ಕುಟುಂಬದವರು ನಂಬಿದ್ದರೆ ಅದಕ್ಕಿಂತ ಮೂರ್ಖತನ ಇನ್ನೊಂದಿರಲಿಕ್ಕಿಲ್ಲ!

ಇದೆಲ್ಲ ಗೌಡರ ಕುಟುಂಬದ ಅಪರಾತಪಾರಗಳಿಗೆ ಸಂಬಂಧಿಸಿದ್ದು. ಆದರೆ ರೆಡ್ಡಿಯವರು ``150 ಕೋಟಿ ಲಂಚ ಪಡೆದಿದ್ದಾರೆ" ಎಂದು ಹೇಳಿರುವ ಸಾಲಿನ ಇನ್ನೊಂದು ಅರ್ಥ ``150 ಕೋಟಿ ಲಂಚ ನೀಡಿದ್ದೇವೆ" ಎಂಬುದೇ ಆಗಿದೆ. ನಾವು ಕಳೆದ ವಾರ ಪ್ರಕಟಿಸಿದ ರೆಡ್ಡಿಯವರ ಸಂದರ್ಶನದಲ್ಲಿ "ಭಯದ ವಾತಾವರಣ ಸೃಷ್ಟಿಯಾಗಿದ್ದರಿಂದಲೇ ಲಂಚ ನೀಡಲಾಗಿತ್ತು" ಎಂದು ಹೇಳಿದ್ದರು.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಭಯದ ವಾತಾವರಣ ಸೃಷ್ಟಿಯಾಗುವುದು ಯಾವಾಗ? ಅಕ್ರಮಗಳು ನಡೆಯುತ್ತಿರುವಾಗ. ಆದರೆ ಅದೇ ಸಂದರ್ಶನದಲ್ಲಿ ರೆಡ್ಡಿಯವರು "ಕಾನೂನು ಬಾಹಿರ ಗಣಿಗಾರಿಕೆ ನಡೆಯುತ್ತಿಲ್ಲ, ನಿಯಮಬಾಹಿರತೆಗಳು ನಡೆಯುತ್ತಿರಬಹುದು" ಎಂದಿದ್ದರು. ಅಂದರೆ ಕಾನೂನಿನಲ್ಲಿನ ಎಲ್ಲಾ ಶರತ್ತುಗಳನ್ನು ಪಾಲಿಸದೇ ಗಣಿ ವ್ಯಾಪಾರವನ್ನು ನಡೆಸುವುದೂ ಅಕ್ರಮ ಗಣಿಗಾರಿಕೆಯಾಗುತ್ತದೆ. ಇಂತಹ 'ಅಕ್ರಮಗಳನ್ನು ತಡೆಯುತ್ತೇವೆ' ಎಂಬುದೂ "ಭಯದ", "ಭೀತಿಯ" ವಾತಾವರಣಕ್ಕೆ ಕಾರಣವಾಗುತ್ತದೆ. ಅಂತಹ ಅಕ್ರಮಗಳಿಗೆ ಮೂಲ ಕಾರಣ ಯಾವುದೆಂಬುದನ್ನು ದಾಖಲೆ, ದೃಶ್ಯಗಳಲ್ಲಿ ಸೆರೆಹಿಡಿದು ತಮ್ಮ ಮುಂದಿನ ಪ್ರತಿಕಾಗೋಷ್ಠಿಯಲ್ಲಿ ರೆಡ್ಡಿಯವರು ಸ್ಪಷ್ಟಪಡಿಸಿದರೆ ಉತ್ತಮ.

ಕಾನೂನು ಉಲ್ಲಂಘನೆ ಬಗ್ಗೆ ಮಾತನಾಡುವಾಗ ಈ ಕಾನೂನಿನ ಬಗ್ಗೆಯೇ ಯೋಚಿಸುವುದೂ ಸೂಕ್ತ, ಜಾಗತೀಕರಣದ ಭರಾಟೆಯಲ್ಲಿ ಕಬ್ಬಿಣದ ಅದಿರಿನ ಗಣಿಗಳನ್ನು ಖಾಸಗೀಕರಿಸುವುದೂ ಕೇಂದ್ರ ಸರ್ಕಾರದ ನೀತಿಯಾಯಿತು. ಆ ನೀತಿಯಿಂದಲೇ ಗಣಿ ಮಾಲೀಕರು ಹುಟ್ಟಿಕೊಂಡರು. ಅಂಥವರಲ್ಲಿ ರೆಡ್ಡಿ ಕುಟುಂಬದವರೂ ಒಬ್ಬರು ಎಂಬುದರಲ್ಲಿ ಎರಡು ಮಾತಿಲ್ಲ.

ಆದರೆ ನಮ್ಮ ರಾಜ್ಯದ, ದೇಶದ ಸಂಪತ್ತಾದ ಕಬ್ಬಿಣದ ಅದಿರನ್ನು ಅಗೆದು ಮಾರಾಟ ಮಾಡುವುದರಿಂದ ಗಣಿ ಮಾಲೀಕರು ಕುಬೇರರಾಗಿದ್ದು ಹೇಗೆ? ಅದರಿಂದ ನಮ್ಮ ಖಜಾನೆಗೆ ಸಂದಾಯವಾದ ಹಣವೆಷ್ಟು? ಗಣಿಗಳಿರುವ ಪ್ರದೇಶಗಳಲ್ಲಿನ ಸಾಮಾನ್ಯ ಜನರ ಪಾಡೇನಾಗಿದೆ? ಎಂಬುದನ್ನು ಪರಿಗಣಿಸುವುದೂ ಈ 150 ಕೋಟಿ ಹಗರಣದ ಮುಖ್ಯ ಅಂಶವಾಗಿದೆ.

ಇವತ್ತು 150 ಕೋಟಿ ಲಂಚದ ಆರೋಪ ಮಾಡಿರುವ ಜನಾರ್ಧನ ರೆಡ್ಡಿಯವರ ಕಾರಸ್ಥಾನವಾದ ಬಳ್ಳಾರಿ ಜಿಲ್ಲೆಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಈ ಪತ್ರಿಕೆಯಲ್ಲೇ ಈಗಾಗಲೇ ನಾಲ್ಕೈದು ಬಾರಿ ವರದಿ ಮಾಡಿರುವಂತೆ ಬಳ್ಳಾರಿಯ ಗಣಿ ಪ್ರದೇಶಗಳಲ್ಲಿ ಜನರ ಬದುಕು ಬರ್ಬಾದಾಗಿದೆ.' ಅಲ್ಲಿನ ರೈತರು ಯಾವ ಬೆಳೆಯನ್ನೂ ಬೆಳೆಯದೆ ತಮ್ಮ ಜಮೀನುಗಳನ್ನು ಗಣಿ ಮಾಲೀಕರಿಗೆ ಬಿಟ್ಟುಕೊಟ್ಟಿದ್ದಾರೆ. ಮಾತ್ರವಲ್ಲ, ತಮ್ಮ ಜಮೀನಿನಲ್ಲೇ ಗಣಿ ಮಾಲೀಕರ ಕೂಲಿಗಳಾಗಿ ದುಡಿಯುತ್ತಿದ್ದಾರೆ.

ಇತ್ತೀಚೆಗೆ, ಬಾಲಕಾರ್ಮಿಕರಿಂದ ದುಡಿಸಿಕೊಳ್ಳುವುದು ಅಪರಾಧ ಎಂಬ ಕಾನೂನು ಜಾರಿಗೆ ಬಂದಿದೆ. ಆದರೆ ನಮ್ಮ ಮಿತ್ರ ಮತ್ತು ವಕೀಲ ಬಿ.ಟಿ. ವೆಂಕಟೇಶ್ ಮತ್ತವರ ಸ್ನೇಹಿತರು ಇದೇ ಬಳ್ಳಾರಿ ಗಣಿಗಳಲ್ಲಿ ಬಾಲಕರಿಂದ ದುಡಿಸಿಕೊಳ್ಳಲಾಗುತ್ತಿದೆ ಎಂಬುದನ್ನು ಸಾಕ್ಷ್ಯ ಚಿತ್ರಗಳ ಸಮೇತ ದೃಢೀಕರಿಸಿದ್ದರು. ಈ ಸಾಕ್ಷ್ಯಾಧಾರಗಳನ್ನು ವೆಂಕಟೇಶ್‌ರವರು ಸರ್ಕಾರಿ ಅಧಿಕಾರಿಗಳ ಮುಂದೆ ಇಟ್ಟಾಗ, ಅವರಿಂದ ಬಂದ ಉತ್ತರವೇನು ಗೊತ್ತಾ? "ಇಲ್ಲ, ಗಣಿಗಳಲ್ಲಿ ಬಾಲಕಾರ್ಮಿಕರಿಲ್ಲ" ಎಂಬುದು. "ನೀವು ಹೇಳುತ್ತಿರುವುದು ಸುಳ್ಳು ಎಂಬುದಕ್ಕೆ ಇಲ್ಲಿದೆ ನೋಡಿ ಸಾಕ್ಷಿ" ಎಂದು ವೆಂಕಟೇಶ್ ವಾದಿಸಿದಾಗ, ಅಧಿಕಾರಿಗಳು ಹೇಳಿದ್ದೇನೆಂದರೆ "ಅವರೆಲ್ಲ ಶಾಲೆಯ ರಜೆಗೆಂದು ಬಂದಿದ್ದು, ಗಣಿಗಳಲ್ಲಿ ತಮ್ಮ ತಂದೆ-ತಾಯಿಗೆ ನೆರವಾಗುತ್ತಿದ್ದಾರೆ ಅಷ್ಟೇ" ಎಂಬುದು! ಬಾಲಕಾರ್ಮಿಕರ ಬಗ್ಗೆ ಅಧಿಕಾರಿಗಳು ಈ ಹೊಸ ವ್ಯಾಖ್ಯಾನ ನೀಡಿರುವುದರ ಹಿಂದಿನ ಗುಟ್ಟು ಅರಿತುಕೊಳ್ಳಲು ತುಂಬಾ ಕಷ್ಟವಲ್ಲ, ಇದು ಅಕ್ರಮ ಗಣಿಗಾರಿಕೆಯಲ್ಲದೆ ಮತ್ತಿನ್ನೇನು ರೆಡ್ಡಿಯವರೇ?

ಇನ್ನು ಇದೇ ಗಣಿಗಾರಿಕೆಯಿಂದಾಗಿ ಇಡೀ ಬಳ್ಳಾರಿ ಜಿಲ್ಲೆಯಲ್ಲಿ ವಾಯು ಮಾಲಿನ್ಯ ಎಷ್ಟು ಹೆಚ್ಚಾಗಿದೆ ಎಂದರೆ ಅಲ್ಲಿ ಉಸಿರಾಡುವುದೇ ದುಸ್ತರವಾಗಿದೆ. ಒಂದು ಸಮೀಕ್ಷೆಯ ಪ್ರಕಾರ ಅಲ್ಲಿನ ಪ್ರತಿ ಕುಟುಂಬದಲ್ಲಿ ಒಬ್ಬರಾದರೂ ಅಸ್ತಮಾ ರೋಗಕ್ಕೆ ತುತ್ತಾಗಿದ್ದಾರೆ. ದೇಶದ ಎಲ್ಲೆಡೆಗಿಂತ ಕರ್ನಾಟಕದಿಂದ ಇವತ್ತು ಅತಿ ಹೆಚ್ಚು ಕಬ್ಬಿಣದ ಅದಿರು ರಫ್ತು ಆಗುತ್ತಿದೆ. ಆದರೆ ಇದರಿಂದಾಗಿ ನಮ್ಮ ಬೊಕ್ಕಸಕ್ಕೆ ಬಂದಿರುವ ಆದಾಯ ಅಷ್ಟಕಷ್ಟೇ. ಆದರೆ ಅದೇ ಗಣಿ ಮಾರಾಟ ವ್ಯವಹಾರ ದಿಂದಾಗಿ ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ 24 ಕ್ಕಿಂತಲೂ ಹೆಚ್ಚು ಖಾಸಗಿ ಹೆಲಿಕಾಪ್ಟರ್ ಗಳಿವೆ, ಒಂದು ಡಜನ್‌ಗಿಂತಲೂ ಹೆಚ್ಚು ಖಾಸಗಿ ಏರೋಪ್ಲೇನ್‌ಗಳಿವೆ ಎಂದರೆ ಏನರ್ಥ?

ಇಷ್ಟೇ... ಗಣಿ ಉದ್ಯಮವನ್ನು ಖಾಸಗೀಕರಿಸಿದ್ದರಿಂದಾಗಿ ಇವತ್ತು ನಮ್ಮ ರಾಜ್ಯದ ನೈಸರ್ಗಿಕ ಸಂಪತ್ತು ಹರಾಜಾಗುತ್ತಿದೆ, ಗಣಿ ಮಾಲೀಕರು ಕೋಟ್ಯಾಧಿಪತಿಗಳಾಗುತ್ತಿದ್ದಾರೆ, ಸಾಮಾನ್ಯ ಜನರು ಅನಾರೋಗ್ಯದಿಂದ ನರಳುತ್ತಿದ್ದಾರೆ, ರಾಜ್ಯದ ಬೊಕ್ಕಸಕ್ಕೆ ಬರುತ್ತಿರುವ ಆದಾಯ ಸೀಮಿತವಾಗಿದೆ, ಬಡರೈತರು ತಮ್ಮ ಭೂಮಿ ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ, ಇಡೀ ಜಿಲ್ಲೆಯೇ ಸದ್ಯದಲ್ಲೇ ಬರಡು ಭೂಮಿಯಾಗುವ ಹಂತಕ್ಕೂ ತಲುಪುತ್ತದೆ, ಕೂಲಿಗಳ ಕೊರತೆಯಿಂದಾಗಿ ಬಾಲಕಾರ್ಮಿಕರ ಶೋಷಣೆ ನಡೆಯುತ್ತಿದೆ....

ಒಂದು ಇಡೀ ಪ್ರದೇಶ ವಿನಾಶದ ಅಂಚಿನಲ್ಲಿದ್ದರೂ ಕೆಲವರು ಹಣ ಲೂಟಿ ಹೊಡೆಯುತ್ತಿರುವುದನ್ನು ಸಹಿಸಲಾರದೇ ಮತ್ತೊಬ್ಬರು ಅದನ್ನು ತಮ್ಮ ವಶಕ್ಕೆ ಪಡೆಯಲು ಯತ್ನಿಸುತ್ತಾರೆ. ಆದರೆ ತಮ್ಮ ಲಾಭದಾಯಕ ಗಣಿಗಳನ್ನು ಬಿಡಲೊಲ್ಲದವರು ಲಂಚ ನೀಡುತ್ತಾರೆ, ``150 ಕೋಟಿ" ಹಗರಣ ಉದ್ಭವಿಸುತ್ತೆ. ಕೊನೆಗೆ ಕೋಟಿಗಳಿಗೆ ಅರ್ಥವಿದ್ದರೂ, ಇಲ್ಲದಂತಾಗುತ್ತದೆ. ನೂರಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲೇ ನಮ್ಮ ರಾಜ್ಯದ ನೈಸರ್ಗಿಕ ಸಂಪತ್ತನ್ನು ಮಾರಿ ಹಲವರು ಮಾತ್ರ ಕೋಟ್ಯಾಧಿಪತಿಗಳಾಗುವಂತೆ ಅವಕಾಶ ಮಾಡಿಕೊಟ್ಟ ಆರ್ಥಿಕ ನೀತಿಗೆ ಯಾವ ಮಾನವೀಯ ಮುಖವಿದ್ದೀತು ಎಂಬುದನ್ನು ಖಾಸಗೀಕರಣದ ಹರಿಕಾರ ಮನಮೋಹನ್ ಸಿಂಗ್‌ರವರೇ ವಿವರಿಸಬೇಕು.

ಮೊದಲೇ ಹೇಳಿದಂತೆ ಈ ಹಗರಣ ರೆಡ್ಡಿಯವರ ಸೀಡಿಗಳನ್ನು ಮೀರಿರುವಂತದ್ದು, ಒಬ್ಬ ಎಷ್ಟಿಯ ವರ್ಗಾವಣೆ ಹೇಗೆ ರೆಡ್ಡಿಯವರನ್ನು ``150 ಕೋಟಿ ಲಂಚ ಪಡೆಯಲಾಗಿದೆ" ಎಂದು ಆರೋಪಿಸುವಂತೆ ಮಾಡಿತೋ, ಹಾಗೆಯೇ ರೆಡ್ಡಿಯವರ ಈ ಆರೋಪ ಹೇಗೆ ನಮ್ಮ ಸದ್ಯದ ಆರ್ಥಿಕ ನೀತಿಯೇ ಇಂತಹ ಭ್ರಷ್ಟ ವ್ಯವಸ್ಥೆಗೆ ಕಾರಣವಾಗಿದೆ ಎಂಬುದರ ಬಗ್ಗೆಯೂ ಚಿಂತಿಸುವಂತೆ ಮಾಡಬೇಕಿದೆ.

ಇಲ್ಲವೆಂದರೆ, ರೆಡ್ಡಿ ಮತ್ತು ಕುಮಾರಸ್ವಾಮಿಗಳ ಜಟಾಪಟಿಯಲ್ಲಿ ಸಾಮಾನ್ಯರು ಸಾಯುತ್ತಲೇ ಇರಬೇಕಾಗುತ್ತದೆ...


-ಗೌರಿ ಲಂಕೇಶ್

ಸ್ಕೂಪ್ ಮಾಡಿದ 'ಲಂಕೇಶ್' ವರದಿ ಮಾಡಿದ ಪತ್ರಿಕೆಗಳು

ಮೊನ್ನೆ ಆಗಸ್ಟ್ 23 ರಂದು ಬಳ್ಳಾರಿಯಲ್ಲಿ ಜನಾರ್ಧನ ರೆಡ್ಡಿಯವರು ದೇವೇಗೌಡರ ವಂಶದ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾ ಸಾಗಿದಂತೆ ನಮಗೆ ಯಾವ ಅಂಶವೂ ಅಚ್ಚರಿ ಮೂಡಿಸಲಿಲ್ಲ, ಹೊಸದಾಗೂ ಇರಲಿಲ್ಲ, ಏಕೆಂದರೆ ಯಾವುದಕ್ಕಾಗಿ ಇತರೆ ಪತ್ರಿಕೆಗಳು ಚಾತಕಪಕ್ಷಿಗಳಂತೆ ಕಾಯುತ್ತಿದ್ದವೋ, ಅದನ್ನೆಲ್ಲ ನಿಮ್ಮ 'ಲಂಕೇಶ್' ವಾರಪತ್ರಿಕೆ ನಾಲ್ಕು ತಿಂಗಳ ಹಿಂದೆಯಿಂದ ದಾಖಲಿಸುತ್ತಾ ಬಂದಿದೆ.

ಉದಾಹರಣೆಗೆ ಬಲ್ಡೋಟಾರವರ MSPL ಕಂಪನಿ ಮೇಲೆ ದಾಳಿ ನಡೆದಿದ್ದು ಗೃಹಮಂತ್ರಿ ಎಂ.ಪಿ. ಪ್ರಕಾಶ್‌ರವರ ಪುತ್ರ ಎಂ.ಪಿ. ರವಿಯವರ ಕುಮ್ಮಕ್ಕಿನಿಂದ ಎಂದು ನಮ್ಮ ಮೇ 31ರ ಸಂಚಿಕೆಯಲ್ಲೇ ವಿವರವಾಗಿ ವರದಿ ಮಾಡಿದ್ದೇವೆ. ಅಷ್ಟೇ ಅಲ್ಲ, ಮುಖ್ಯಮಂತ್ರಿ ಕುಮಾರಸ್ವಾಮಿಯವರ ಅಮೋಘ ಕೇಬಲ್ ಚಾನೆಲ್ ಮತ್ತು ಕಸ್ತೂರಿ ಮೀಡಿಯಾಸ್ ಬಗ್ಗೆ ನಡೆದ ಕಾಳಗವನ್ನು 'ಹೊಡಿ ಮಗ, ಕೇಬಲ್ ಕಡಿ ಮಗ' ಎಂಬ ಶೀರ್ಷಿಕೆಯಡಿ ಜೂನ್ 14ರ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು.

'ಗಣಿ ಮತ್ತು ಟೀವಿ ಚಾನೆಲ್', ಕುರಿತಂತೆ ನಾವು ವರದಿ ಮಾಡಿದ ನಂತರವೇ ರೆಡ್ಡಿಯವರು ``150 ಕೋಟಿ ಲಂಚ" ಆರೋಪ ಮಾಡಿದ್ದು, ಆನಂತರವೂ ಇತರ ದೈನಿಕ ಮತ್ತು ವಾರಪತ್ರಿಕೆಗಳು ಅದೆಂತದ್ದೋ ವರದಿಗಳನ್ನು ಮುಖಪುಟವಾಗಿಸಿ ಬರೆಯುತ್ತಿದ್ದಾಗ, ಕುಮಾರಸ್ವಾಮಿಯವರ ಕುಟುಂಬ ಗಣಿ ವ್ಯವಹಾರದಲ್ಲಿ ಭಾಗಿ ಆಗಿದ್ದರ ಬಗ್ಗೆ ಮೊಟ್ಟಮೊದಲ ಬಾರಿಗೆ ಬಹಿರಂಗಪಡಿಸಿದ್ದೇ 'ಲಂಕೇಶ್'. ನಮ್ಮ ಆಗಸ್ಟ್ 2ರ ಸಂಚಿಕೆಯಲ್ಲಿ (ಅದು ಮಾರುಕಟ್ಟೆಯಲ್ಲಿ ಲಭ್ಯವಾಗಿದ್ದು ಜುಲೈ 24ನೇ ತಾರೀಖು) ಬಿಎಸ್‌ಕೆ ಎಂಬ ಗಣಿ ವ್ಯವಹಾರದ ಕಂಪನಿ ಗೌಡರ ಕುಟುಂಬದ್ದು ಎಂದೂ, ಅದರ ಮಾಲೀಕರು ಬಾಲಕೃಷ್ಣೇಗೌಡ, ಡಾ. ರಮೇಶ್ ಮತ್ತು ಕವಿತಾ ಬಾಲಕೃಷ್ಣೇಗೌಡ ಎಂದೂ, ಗಣಿ ಮಾಲೀಕರಿಂದ ಹಣ ವಸೂಲಿ ಮಾಡಿದ್ದು ಇದೇ ಬಿಎಸ್‌ಕೆ ಕಂಪನಿಯಿಂದು ಎಲ್ಲರಿಗಿಂತ ಮೊದಲು ಸ್ಕೂಪ್ ಮಾಡಿದ್ದೂ ನಿಮ್ಮ ಈ ಪತ್ರಿಕೆ ಹೊರತು ಬೇರಾರೂ ಅಲ್ಲ, ನಮ್ಮ ಆ ಸಂಚಿಕೆಯಲ್ಲಿನ ಮಾಹಿತಿಯನ್ನಾಧರಿಸಿಯೇ ಕಾಂಗ್ರೆಸ್‌ನ ಮಾಜಿ ಮಂತ್ರಿ ಡಿ.ಕೆ. ಶಿವಕುಮಾರ್‌ರವರು ಪತ್ರಿಕಾಗೋಷ್ಠಿ ನಡೆಸಿದ್ದು.



ಹೀಗೆ ಬಿಎಸ್‌ಕೆ ಕಂಪನಿಯ ಕರಾಮತ್ತುಗಳನ್ನು ಬಯಲಿಗೆಳೆದ ಮುಂದಿನ ವಾರದ ಸಂಚಿಕೆಯಲ್ಲಿ ಗಣಿ ಲಂಚದಿಂದಲೇ ವೈಟ್‌ಫೀಲ್ಡ್‌ನ ``36 ಕೋಟಿ"ಯ ಆಸ್ತಿಯನ್ನು ಗೌಡರ ಮನೆಯ "ಸ್ತ್ರೀಶಕ್ತಿ" ಗುಂಪು ಖರೀದಿಸಿತು ಎಂದು ಸ್ಕೂಪ್ ಮಾಡಿದ್ದೂ ನಾವೇ! ಅಷ್ಟೇ ಅಲ್ಲದೆ ಅದೇ ಸಂಚಿಕೆಯಲ್ಲಿ ಇಲ್ಲಿಯವರೆಗೂ ಯಾವ ಪತ್ರಿಕೆಯೂ ವರದಿ ಮಾಡದಿರುವ, ಅವರ ಗಮನಕ್ಕೂ ಬಾರದಿರುವ ಮತ್ತೊಂದು ಸ್ಫೋಟಕ ಸುದ್ದಿಯನ್ನು ಪ್ರಕಟಿಸಿದ್ದೆವು. ಅದೇನೆಂದರೆ ವೈಟ್‌ಫೀಲ್ಡ್ ಆಸ್ತಿಯ ಖರೀದಿಯಲ್ಲಿ ಅಕ್ರಮಗಳು ನಡೆದು ಗೌಡರ ಕುಟುಂಬ ಹೇಗೆ ಕೋರ್ಟ್ ಆದೇಶವನ್ನೇ ಉಲ್ಲಂಘಿಸಿದೆ ಎಂಬುದು.

ಅದೇ ಸಂಚಿಕೆಯ ಮತ್ತೊಂದು ವಿಶೇಷತೆ ಯಾವುದೆಂದರೆ "ಮುನ್ನಾಭಾಯ್" ಡಾ. ರಮೇಶ್‌ರವರು ತಾವು ಗಣಿಗಾರಿಕೆಯಲ್ಲಿ, ರಿಯಲ್ ಎಸ್ಟೇಟ್‌ನಲ್ಲಿ, ಮದ್ಯ ಮಾರಾಟದಲ್ಲಿ ತೊಡಗಿರುವುದರ ಕುರಿತು ಸ್ವತಃ ಹೇಳಿದ್ದು.

ಮೊನ್ನೆಯ ಪತ್ರಿಕಾಗೋಷ್ಠಿಯಲ್ಲಿ ಜನಾರ್ಧನ ರೆಡ್ಡಿಯವರು ದಿವಂಗತ ರಾಮಮೂರ್ತಿಯವರ ಜಾನ್ ಮೈನ್ಸ್‌ನ್ನು ಕಬಳಿಸಲು ಗೌಡರ ಪುತ್ರರು ಹವಣಿಸುತ್ತಿದ್ದಾರೆ ಎಂದು ಆರೋಪಿಸಿದರು. ಆದರೆ ಅದ[illegible] ಬಗ್ಗೆಯೂ ನಾವಾಗಲೇ ನಮ್ಮ ಆಗಸ್ಟ್ 23 ಸಂಚಿಕೆ[illegible]ಟವಾಗಿದ್ದು ಆ. 13)ಯಲ್ಲಿ ಪ್ರಕಟಿಸಿದ್ದೆವು.

ಹಾಗೆಯೇ, ಜನಾರ್ಧನ ರೆಡ್ಡಿಯವರು ಕವಿತಾ ಬಾಲಕೃಷ್ಣೇಗೌಡರನ್ನು ಗೌಡರ ರಿಸರ್ವ್ ಬ್ಯಾಂಕ್ ಎಂದು ಬಣ್ಣಿಸಿದ್ದೂ ನಮಗೆ ಹೊಸ ವಿಚಾರವಾಗಿರಲಿಲ್ಲ, ಏಕೆಂದರೆ ನಮ್ಮ ಆಗಸ್ಟ್ 30 (ಪ್ರಕಟಣೆ ಆ. 20)ರ ಸಂಚಿಕೆಯಲ್ಲೇ ಕವಿತಾರವರ ಭೂ ಸಂಕ್ರಮಣದ ಬಗ್ಗೆ ವಿವರವಾಗಿ ವರದಿ ಮಾಡಿದ್ದೆವು.

ಅದೇ ವಾರ, ಇನ್ನೊಂದು ವಾರಪತ್ರಿಕೆ ಶ್ರೀರಂಗಪಟ್ಟಣದಲ್ಲಿ ಕವಿತಾ ಒಂದು ಕೋಟಿ ಮೌಲ್ಯದ 20 ಎಕರೆ ಜಮೀನು ಖರೀದಿಸಿದ್ದನ್ನು ವರದಿ ಮಾಡಿದ್ದನ್ನು ದೊಡ್ಡ ಸ್ಕೂಪ್ ಎಂಬಂತೆ ಪೋಸ್ ಕೊಟ್ಟಿತ್ತು. ಆದರೆ ನಾವು, ಬೆಂಗಳೂರಿನ ಸುತ್ತಮುತ್ತ ಕವಿತಾ ಖರೀದಿಸಿದ್ದ 235 ಎಕರೆಗಳ ಬಗ್ಗೆ ವರದಿ ಮಾಡಿದ್ದೆವು. ಎಲ್ಲಿಯ ಶ್ರೀರಂಗಪಟ್ಟಣದ 1 ಕೋಟಿ ಮೌಲ್ಯದ ಭೂಮಿ, ಎಲ್ಲಿಯ ಬೆಂಗಳೂರಿನ 700 ಕೋಟಿ ರೂಪಾಯಿ ಮೌಲ್ಯದ ಭೂಮಿ!!

ಇದೆಲ್ಲದರಿಂದ ಸ್ಪಷ್ಟವಾಗುವುದೇನೆಂದರೆ, ಇವತ್ತು 'ಲಂಕೇಶ್' ವಾರ ಪತ್ರಿಕೆ ಮಾತ್ರ ಪ್ರಮುಖ ಸ್ಕೂಪ್‌ಗಳನ್ನು ಪ್ರಕಟಿಸುತ್ತಿದೆ. ನಮ್ಮ ತಂಡದವರು ವರದಿ ಮಾಡದೇ ಬಿಟ್ಟಿರುವ ಚೂರುಪಾರನ್ನು ಬೇರೆಯವರು ಪ್ರಕಟಿಸಿ ಅದೇ ತಮ್ಮ ಸಾಧನೆ ಎಂಬಂತೆ ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ. ಪಾಪ, ಅವರೂ ಇರಲಿ ಬಿಡಿ!

-ಸಂಪಾದಕ

ಬೆಂಗಳೂರು ಕೃಷಿ ವಿ.ವಿ.ಗೆ ಕೀಟಬಾಧೆ!

ರಿಜಿಸ್ಟ್ರಾರ್ ಕಿಲ್ಲರ್ ರಾಜು ವಿ.ಸಿ. ಶೀಲಗೆಟ್ಟ ಶೀಲವಂತರ್!

"800 ವರ್ಷದ ಹಿಂದೆ ಬಸವಣ್ಣನ ಆಸ್ಥಾನದಲ್ಲಿ ಶೀಲವಂತ ಎಂಬಾತನಿದ್ದ ಆತನ ಕೆಲಸ ಅಂತರ್ಜಾತಿಯ ವಿವಾಹ ಮಾಡುವುದು. ಆ ಶೀಲವಂತನ ಅವತಾರವೇ ನಾನು...."

ವಿ.ಸಿ. ಯೊಬ್ಬ ಹೀಗೆ ಮಾತನಾಡುತ್ತಿದ್ದರೆ ಮೆಂಟಲ್ ವಿ.ಸಿ. ಎನ್ನುತ್ತೀರೇನೋ? ಆದರೆ ಈ ಡಾ. ಶೀಲವಂತರ್ ಮಹಾ ಊಸರವಳ್ಳಿ. ಪಕ್ಕಾ ಜಾತಿವಾದಿ. ಈತನ ಜೋಡಿಯಾಗಿ ರಿಜಿಸ್ಟ್ರಾರ್ ಒಬ್ಬ ಇದ್ದಾನೆ. ಅವನಂತೂ ರಕ್ಕಸ ಜಾತಿವಾದಿ! ಹೆಸರು ಬಿ. ರಾಜು. ಲಿಂಗಾಯತ, ಒಕ್ಕಲಿಗ ಕಮ್ಯುನಿಟಿಯ ಈ ಇಬ್ಬರಿಗೆ ದಲಿತರೆಂದರೆ ಮೈ ಉರಿ....

ಜೀವ ತಿಂದರು...

ಕೃಷಿ ವಿ.ವಿ. (ಜಿ.ಕೆ.ವಿ.ಕೆ)ಯಲ್ಲಿ ಜೂ. ಎಂಎಸ್ಸಿ (ಕ್ರಾಪ್ ಫಿಸಿಯಾಲಜಿ)ಯಲ್ಲಿ ವ್ಯಾಸಂಗ ಮಾಡುತ್ತಿದ್ದ ಪ್ರತಿಭಾವಂತ ದಲಿತ ವಿದ್ಯಾರ್ಥಿನಿ ಎಚ್.ಎ. ಅನಿತಾಲಕ್ಷ್ಮಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದು ರಿಜಿಸ್ಟ್ರಾರ್ ರಾಜು ಎಂಬ ಸೊಕ್ಕಿನ ಸರದಾರನೇ.



2004-05ರ ಸಾಲಿನ ಬಾಕಿ ಫೀಸು ತುಂಬದಿದ್ದರೆ ಬಿಎಸ್ಸಿ (ಅಗ್ರಿ)ಯ ಪದವಿ ಪತ್ರ ನೀಡುವುದಿಲ್ಲವೆಂದು ಈ ರ್‍ಯಾಂಕ್ ವಿದ್ಯಾರ್ಥಿನಿಗೆ ಎಚ್ಚರಿಕೆ ಕೊಟ್ಟಿದ್ದಾರೆ ಆಡಳಿತ ವಿಭಾಗದ ಧೂರ್ತರು. ಘಟಿಕೋತ್ಸವದ ಲಿಸ್ಟ್‌ನಿಂದ ಈಕೆಯ ಹೆಸರು ತೆಗೆದೂ ಹಾಕಿದ್ದಾರೆ. ಗೆಳತಿಯರ ನೆರವಿನಿಂದ ಮಾರ್ಚ್ 17ರಂದು ಬಾಕಿ ಫೀಸು ತುಂಬಿದ ಅನಿತಾ, ಚಲನ್ ಹಿಡಿದುಕೊಂಡು ಅಧಿಕಾರಿಗಳ ಬಳಿ ಹೋದರೆ, ಅವರಾಗಲೇ ಪಿತೂರಿ ನಡೆಸಿ ಅನಿತಾಳ ಹೆಸರು ಸೇರಿಸಲು ಸಾಧ್ಯವೇ ಇಲ್ಲವೆಂದು ಬೊಗಳಿದ್ದಾರೆ.

ರಿಜಿಸ್ಟ್ರಾರ್ ರಾಜು, ನಿರ್ದೇಶಕ ಡಾ. ಆರ್. ಗೋವಿಂದನ್, ಡೆಪ್ಯೂಟಿ ರಿಜಿಸ್ಟ್ರಾರ್ ಡಾ. ಗೋಪಿನಾಥ್, ಗುಮಾಸ್ತ ಕೃಷ್ಣಮೂರ್ತಿ ಇವರೆಲ್ಲ ಹಲವಾರು ಬಗೆಯಲ್ಲಿ ಅನಿತಾಳನ್ನು ಅವಮಾನ ಮಾಡಿದ್ದಾರೆ. ಆದರೆ ಅನಿತಾಲಕ್ಷ್ಮಿಯ ಜೊತೆಯಲ್ಲಿಯೇ ಬಾಕಿ ಫೀಸು ತುಂಬಿದ ಆರ್.ಜಿ. ಸಂದೀಪನಿಗೆ ಪದವಿ ಪತ್ರ ಪಡೆಯಲು ಅನುಮತಿ ನೀಡಿದ್ದಾರೆ. ನಿರ್ದೇಶಕ ಡಾ. ಗೋವಿಂದನ್ ಪ್ರತ್ಯೇಕ ಟಿಪ್ಪಣಿಯೊಂದನ್ನೇ ರಿಜಿಸ್ಟ್ರಾರ್‌ಗೆ ಕಳುಹಿಸಿ ಘಟಿಕೋತ್ಸವದಲ್ಲಿ ಭಾಗವಹಿಸಲು ಸಂದೀಪ್‌ಗೆ ಅವಕಾಶ ಮಾಡಿಕೊಡುತ್ತಾನೆ.


ಇದನ್ನು ಪ್ರಶ್ನಿಸಿದ ಅನಿತಾಲಕ್ಷ್ಮಿಗೆ ಗುಮಾಸ್ತ ಕೃಷ್ಣಮೂರ್ತಿ 'ಫೀಸು ಕಟ್ಟಲು ಗತಿ ಇಲ್ಲಾಂದ್ರೆ ಇಲ್ಲಿಗ್ಯಾಕೆ ಬರ್ತೀರಿ? ಹೀನ ಜಾತಿಯವರಿಗೆ ಪದವಿ ಯಾಕೆ?' ಎಂದೆಲ್ಲ ಅವಮಾನಗೊಳಿಸಿದ್ದಾನೆ. ರಿಜಿಸ್ಟ್ರಾರ್, ಡೈರೆಕ್ಟರ್, ಗುಮಾಸ್ತ ಇವರೆಲ್ಲರಿಂದ ಅವಮಾನಿತಳಾದ ಅನಿತಾ ತನ್ನ ರೂಮಿಗೆ ಬಂದು 3 ಪುಟಗಳ ಪತ್ರ ಬರೆದು ನೇಣು ಹಾಕಿಕೊಂಡಿದ್ದಾಳೆ. ಮರುದಿನವೇ ಅಂದರೆ 18.3.2006ರಂದು ಘಟಿಕೋತ್ಸವ ಇತ್ತು.



ಅನಿತಾಲಕ್ಷ್ಮಿ

ಅನಿತಾಲಕ್ಷ್ಮಿಯ ಮೂರು ಪುಟದ ಪತ್ರ ಸುಟ್ಟ ಮೇಲಿನ ಖೂಳರೆಲ್ಲ ಮೂರು ಲೈನಿನ ಪತ್ರ ಸೃಷ್ಟಿಸಿದರು. ದಲಿತಳೆಂಬ ಕಾರಣಕ್ಕೆ ಒಬ್ಬ ಪ್ರತಿಭಾವಂತ ವಿದ್ಯಾರ್ಥಿನಿಯನ್ನು ಬಲಿ ತೆಗೆದುಕೊಂಡ ಈ ದುಷ್ಟರು ವಿಸಿಯ ನೆರವಿನೊಂದಿಗೆ ಕೇಸು ಮುಚ್ಚಿ ಹಾಕಿದ್ದಾರೆ. ಮಧುಗಿರಿಯ ಕಡಗತೂರು ಗ್ರಾಮದಿಂದ ಬಂದ ಬಡ ತಂದೆತಾಯಿಗಳಿಗೆ ಸುಳ್ಳು ಹೇಳಿ, ಹಣ ನೀಡಲು ಹೋಗಿದ್ದಾರೆ. ನಂತರ ಬೆದರಿಸಿಯೂ ಇದ್ದಾರೆ. ಬೆಂಗಳೂರಲ್ಲೇ ಬಿಇ (ಕಂಪ್ಯೂಟರ್ ಸೈನ್ಸ್) ಓದುತ್ತಿದ್ದ ಅನಿತಾ ತಂಗಿ ಶಾಲಿನಿ ಸಹ ಹೆದರಿ ತುಮಕೂರಿಗೆ ಟ್ರಾನ್ಸ್‌ಫರ್ ತೆಗೆದುಕೊಂಡಿದ್ದಾಳೆ. ಕೊಟ್ಟ ದೂರು ಕಸದಬುಟ್ಟಿ ಸೇರಿಯಾಗಿದೆ. ಅಲ್ಲಿಗೆ ವಿವಿಯ ಮೇಲ್ಜಾತಿಯ ಮೇಲಾಧಿಕಾರಿಗಳ ದರ್ಪ ಜೋರಾಗಿದೆ.

ಯಾವ್ಯಾವನೋ ಪ್ರೊಫೆಸರ್?



ಹಣ ಕೊಡುವ ಶಕ್ತಿಯುಂಟೆ? ಹೌದಾದರೆ ಪಿಎಚ್‌ಡಿ, ಎಂಎಸ್ಸಿ ಪರೀಕ್ಷೆಯನ್ನು ಸುಲಭವಾಗಿ ಗೆಲ್ಲಬಹುದಿಲ್ಲಿ. ವಿ.ಸಿ. ಶೀಲವಂತರ್‌ಗೆ ಶೀಲವೇ ಇಲ್ಲದ್ದರಿಂದ ಪ್ರವೇಶ, ನೇಮಕಾತಿಗಳಲ್ಲೆಲ್ಲ ಅಧ್ವಾನಗಳೇ. ಸರ್ಕಾರ ನೇಮಿಸಿದ ಎ.ಆರ್. ಆಗವಾನೆ ಕಮಿಟಿ ನೀಡಿರುವ ವರದಿಯಲ್ಲಿ ಸ್ಪಷ್ಟವಾಗಿ ಗೊತ್ತಾಗಿರುವುದೇನೆಂದರೆ ವಿ.ವಿ.ಯ 18 ಪ್ರೊಫೆಸರ್‌ಗಳು ಹಣ ಕೊಟ್ಟ ತಮ್ಮ ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಗಳಲ್ಲಿ ಹೆಚ್ಚೆಚ್ಚು ಅಂಕ ಜಡಿದಿದ್ದಾರೆ. ಡಾ. ಟಿ.ಕೆ. ಎಸ್. ಗೌಡ, ಡಾ. ಜೆ. ದೇವೇಗೌಡ, ಡಾ. ಎಂ.ಜಿ. ಗೋವಿಂದಯ್ಯ, ಡಾ. ಎಸ್.ಎಂ. ಜಯದೇವಪ್ಪ, ಡಾ. ಎಸ್.ಆರ್. ಕುಲಕರ್ಣಿ, ಡಾ. ಬಿ.ವಿ. ವೆಂಕಟೇಶಯ್ಯ, ಡಾ. ಆರ್. ಸಿದ್ರಾಮಪ್ಪ, ಡಾ. ಮುನಿಲಾಲ್ ದುಬೆ, ಡಾ. ವಿ. ಮುನಿಯಪ್ಪ ಡಾ. ಜಿ.ವಿ. ನಾರಾಯಣಗೌಡ, ಡಾ. ಪುಟ್ಟಸ್ವಾಮಿ, ಡಾ. ಪಿ.ಸಿ. ರವಿ, ಡಾ. ಡಿ. ರಾಜಗೋಪಾಲ್, ಡಾ. ಎಂ. ಉದಯಶಂಕರ್, ಡಾ. ವಿ. ವೀರಭದ್ರಯ್ಯ, ಡಾ. ಬಿ. ಶಿವರಾಜ್ ಇವರಿಗೆಲ್ಲ ಶಿಕ್ಷೆಯಾಗಿ ಎರಡೆರಡು ಇನ್ಕ್ರಿಮೆಂಟ್ ಕಟ್ ಮಾಡುವ ಶಿಕ್ಷೆ ವಿಧಿಸಲಾಗಿತ್ತು.

ಇಂತ ಖದೀಮ ಪ್ರಾಧ್ಯಾಪಕರ ಕಿಂಗ್‌ಪಿನ್ ಡಾ. ಟಿ.ಕೆ.ಎಸ್. ಗೌಡನನ್ನು ಪಿ.ಜಿ. ವಿಭಾಗದ ಡೈರೆಕ್ಟರ್‌ನನ್ನಾಗಿ ಮಾಡಿದ್ದಾರೆ ವಿ.ಸಿ. ಸಾಹೇಬ್ರು. ಆಗವಾನೆ ಕಮಿಟಿಯ ವರದಿಯೇ ತಪ್ಪೆಂದ ವಿ.ಸಿ., ರಿಜಿಸ್ಟ್ರಾರ್ 18 ಕಳ್ಳರನ್ನು ಪರಿಶುದ್ಧರೆಂದು ಘೋಷಿಸಿಬಿಟ್ಟಿದ್ದಾರೆ.

ದಲಿತರ ಕೋಟಾದ 200 ಹುದ್ದೆಗಳನ್ನು ತುಂಬುತ್ತಲೇ ಇಲ್ಲ. ಬ್ಯಾಕ್‌ಲಾಗ್ ಹುದ್ದೆ ತುಂಬುವುದೆಂದರೆ ವಿ.ವಿ.ಯ ಮೇಲ್ಜಾತಿಯವರಿಗೆ ಕಿರಿಕಿರಿಯಂತೆ. ಪ್ರೊಫೆಸರ್‌ಗಳೇ ಆಡಳಿತಾಧಿಕಾರಿಗಳ ಕೆಲಸ ಮಾಡಬಲ್ಲರು. ಅದಕ್ಕೆ ಎಕ್ಸ್‌ಟ್ರಾ 20 ಸಾವಿರ ಸಿಗುತ್ತಲ್ಲ ಎನ್ನುತ್ತಾರೆ ಕೆ. ಸೋಮಶೇಖರ್‌ನಂತಹ ಜಾತಿವಾದಿಗಳು. ಸಿರಿಕಲ್ಚರ್ ವಿಭಾಗದ ಡಾ. ಕೆ.ಪಿ. ರಾಮಪ್ರಸನ್ನ, ಡಾ. ಚೆಲ್ಲಯ್ಯ, ಡಾ. ಶಿವಣ್ಣನಂತಹವರು ದಲಿತರು ಎಂಬ ಕಾರಣಕ್ಕೆ ಪ್ರಮೋಷನ್ ಸಿಗುತ್ತಿಲ್ಲ. ಅಕ್ರಮ ಹಾದಿಯ ಮೂಲಕ ರಿಜಿಸ್ಟ್ರಾರ್ ರಾಜು ಬೋರ್ಡ್ ಹೊಕ್ಕು ಕುಳಿತಿದ್ದಾನೆ. ಡಾ. ರಾಮಪ್ರಸನ್ನ, ಚಂಗಪ್ಪರೆಂಬ ದಲಿತರನ್ನು ಕೆವಿಯೆಟ್ ಹಾಕಿ ತಡೆಯಲಾಗಿದೆ.

ಮಾರ್ಚ್ 3,2006 ವಿವಿಯಲ್ಲಿ ಪವಾಡವೇ ಜರುಗಿತು. ಅಂದೇ ಡಾ. ರಾಜು ರಿಜಿಸ್ಟ್ರಾರ್ ಆಗಿ, ಟಿ.ಕೆ.ಎಸ್. ಗೌಡ ಪಿ.ಜಿ. ನಿರ್ದೇಶಕರಾಗಿ, ಪ್ರೊ. ಗೋವಿಂದನ್ ಕಾಲೇಜು ಡೈರೆಕ್ಟರಾಗಿ, ಪ್ರೊ. ವೆಂಕಟೇಶ್ ಮೂಡಿಗೆರೆಯ ಹಾರ್ಟಿಕಲ್ಚರ್ ಕಾಲೇಜಿನ ನಿರ್ದೇಶಕರಾಗಿ, ಡಾ. ಈಶ್ವರಪ್ಪ ಕೃಷಿ ವಿಸ್ತರಣಾ ನಿರ್ದೇಶಕರಾಗಿ ಆದೇಶ ಪಡೆದು, ಅಂದೇ ಪ್ರಿನ್ಸಿಪಲ್ ಸೆಕ್ರೆಟರಿ ರಾಮಸ್ವಾಮಿಯವರ ಅಪ್ರೂವಲ್ ಪಡೆದು, ಅಂದೇ ಸಂಜೆ 4ಕ್ಕೆ ಹುದ್ದೆಗಳಲ್ಲಿ ಹಾಜರಾಗುತ್ತಾರೆ! ಇಲ್ಲೆಲ್ಲ ಹಿರಿಯ ಪ್ರಾಧ್ಯಾಪಕರು ಇರಬೇಕಿತ್ತು. ವಿ.ಸಿ. ಶೀಲವಂತರ್‌ಗೆ ಅದೆಲ್ಲ ಮುಖ್ಯವಲ್ಲ.

ಸುಟ್ಟರೂ ಸೋಲೊಪ್ಪದವರ ಗೆಲುವು



ಆ್ಯಸಿಡ್ ದಾಳಿಗೊಳಗಾಗಿದ್ದ ಹಸೀನಾ

ಈ ತಿಂಗಳ 22ರಂದು, ಕರ್ನಾಟಕದ ಮಹಿಳೆಯರು, ಮಹಿಳಾಪರ ಹೋರಾಟಗಾರರು ಮತ್ತು ಸಾಮಾಜಿಕ ಕಳಕಳಿಯುಳ್ಳವರೆಲ್ಲರೂ ಮತ್ತೆ ಮತ್ತೆ ನೆನೆಯುವಂತಹ ತೀರ್ಪೊಂದನ್ನು ಕರ್ನಾಟಕದ ಹೈಕೋರ್ಟ್ ನೀಡಿದೆ. 1999ರಲ್ಲಿ ಹಸೀನಾ ಎಂಬ ಹದಿಹರೆಯದ ಹುಡುಗಿಯ ಮೇಲೆ ತೀಕ್ಷ್ಣ ಸಲ್ಫೂರಿಕ್ ಆ್ಯಸಿಡ್ ಸುರಿದು ಅವಳ ಬಾಳನ್ನು ಸುಟ್ಟು ಕರಕಾಗಿಸಿದ, ಅವಳ ಕುಟುಂಬವನ್ನು ಕೊನೆಯಿಲ್ಲದ ಸಂಕಟಗಳಿಗೆ ದೂಡಿದ ಜೋಸೆಫ್ ರೊಡ್ರಿಗ್ಸ್ ಎಂಬಾತನಿಗೆ ಕೆಳಗಿನ ಕೋರ್ಟು ವಿಧಿಸಿದ್ದ 5 ವರ್ಷದ ಸಜೆಯನ್ನು ವಿಸ್ತರಿಸಿ ಹೈಕೋರ್ಟು ಜೀವಾವಧಿ ಶಿಕ್ಷೆ ನೀಡಿದೆ! ಜೊತೆಗೆ ಹಸೀನಾಳಿಗೆ 5 ಲಕ್ಷ ರೂಗಳ ಪರಿಹಾರ ನೀಡುವಂತೆ ಆದೇಶಿಸಿದೆ. ಈ ತೀರ್ಪು ಕಮರಿಹೋಗುತ್ತಿದ್ದ ಹಸೀನಾಳ ಬದುಕುವ ಹಠಕ್ಕೆ ಜೀವಜಲವನ್ನೆರೆದಿದೆಯೆಂದರೆ ಖಂಡಿತಾ ಉತ್ಪ್ರೇಕ್ಷೆಯಲ್ಲ. ಮಾತ್ರವಲ್ಲ; ಹಸೀನಾಳಂತೆಯೇ ಆ್ಯಸಿಡ್ ದಾಳಿಯ ಪರಿಣಾಮವನ್ನು ಅನುಭವಿಸುತ್ತಿರುವ ಹಲವರಿಗೂ, ನಾಡಿನ ಸೂಕ್ಷ್ಮ ಮನಸ್ಸಿನ ಜನರಿಗೂ ಆಶಾಕಿರಣದಂತೆ ಕಂಡಿದೆ. ಹೀಗೆ ಅಪರೂಪದ ಆದರೆ ಮಹತ್ವಪೂರ್ಣವಾಗಿದ್ದ ಈ ತೀರ್ಮಾನವನ್ನು ಹೈಕೋರ್ಟ್ ಡಿವಿಜನಲ್ ಪೀಠದ ನ್ಯಾಯಮೂರ್ತಿಗಳಾದ ಶ್ರೀ ಎಸ್. ಆರ್. ಬನ್ನೂರುಮಠ್ ಮತ್ತು ಶ್ರೀ ಸುಭಾಷ್ ಬಿ.ಆದಿರವರು ಅಪಸೂಪಕ್ರಾದರೂ ಕೈಗೊಂಡಿದ್ದಾರೆ.

ಮಹತ್ವಪೂರ್ಣ ತೀರ್ಪು!

ಈ ತೀರ್ಪಿನ ಅತ್ಯಂತ ಪ್ರಮುಖವಾದ ಅಂಶ ಜೀವಾವಧಿ ಶಿಕ್ಷೆಯಷ್ಟೇ ಅಲ್ಲ; ಇಡೀ ಆ್ಯಸಿಡ್ ದಾಳಿಯ ಫೆನಾಮಿನಾವನ್ನು ಇಂದಿನ ಸಾಮಾಜಿಕ ಸಂದರ್ಭದ ಮುನ್ನೆಲೆಗೆ ತಂದಿದೆ. ಇಂತಹ ಪ್ರಕರಣಗಳು ಹೇಗೆ ಅನಾರೋಗ್ಯಕರ ಸಮಾಜದ ಸಂಕೇತಗಳು, ಇದರ ಪರಿಣಾಮವಾಗಿ ನರಳುವ ಮುಗ್ಧರ ನೋವು ಎಂಥದ್ದು, ಇಡಿಯ ಸಮಾಜದ ಮೇಲೆ ಅದರ ಪರಿಣಾಮಗಳೇನು, ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕರ ಸುರಕ್ಷತೆ ಹೇಗೆ ಸರ್ಕಾರದ ಜವಾಬ್ದಾರಿಯಾಗಿರುತ್ತದೆ, ಕೋರ್ಟುಗಳು ಹೇಗೆ ಈ ಬಗೆಯ ಅಪರಾಧಗಳಿಗೆ ತಡೆಯಾಗಿ ವರ್ತಿಸಬೇಕು, ಮುಂತಾದ ಹಲವು ಅಂಶಗಳನ್ನು ಈ ತೀರ್ಪು ಒಳಗೊಂಡಿದೆ.

ಸಾಮಾನ್ಯವಾಗಿ ಮಹಿಳೆಯರ ಮೇಲಿನ ಹಿಂಸೆಯ ಪ್ರಕರಣಗಳಲ್ಲಿ ನ್ಯಾಯಪ್ರಕ್ರಿಯೆ ಆರಂಭಗೊಳ್ಳುವುದೇ ಹಿಂಸೆಗೊಳಗಾದವರ 'ಚಾರಿತ್ರ್ಯ ವಧೆ'ಯಿಂದ. ಬೆಂಗಳೂರಿನ ಹೆಬ್ಬಾಳದಲ್ಲಿ 2004ರಲ್ಲಿ ನಡೆದ ಜಾಕ್ವಲಿನ್ ಆಶಾ ಮೇಲಿನ ಆ್ಯಸಿಡ್ ದಾಳಿಯ ಸಂದರ್ಭದಲ್ಲಿ ತನಿಖೆ ಪ್ರಾರಂಭಿಸಲು ಪೊಲೀಸರು ಆಯ್ಕೆ ಮಾಡಿ ಬುಡಮೇಲು ಮಾಡಿದ್ದು, ಜಾಕ್ವಲಿನ್‌ರ ಮನೆ ಮತ್ತು ಅಂಗಡಿಯನ್ನೇ ಹೊರತು ಆರೋಪಿಯದ್ದಲ್ಲ, ಮೈಸೂರಿನ ವೈದ್ಯೆ ಡಾ. ಮಹಾಲಕ್ಷ್ಮಿಯವರ ಪ್ರಕರಣ ತೀರ್ಮಾನವಾಗುವಾಗ ಸ್ಥಳೀಯ ನ್ಯಾಯಾಲಯದ ನ್ಯಾಯಾಧೀಶರು ಆಕೆಯ 'ನಡತೆ ಸರಿ'ಯಾಗಿರಲಿಲ್ಲವೆಂದು ಸಾಬೀತುಪಡಿಸಲು ತೀರ್ಪಿನ ಬಹುಭಾಗ ಮೀಸಲಾಗಿರಿಸಿದ್ದರು. ನ್ಯಾಯಾಂಗದ ಇಂತಹ ವರ್ತನೆಯೇ ಸಹಜವೆಂಬಷ್ಟು ವ್ಯಾಪಕವಾಗಿರುವಾಗ, ಹಸೀನಾ ಪ್ರಕರಣದ ಹೈಕೋರ್ಟ್ ತೀರ್ಪು ಅದಕ್ಕೊಂದು ಸಮಾಧಾನಕರ ಅಪವಾದವಾಗಿದೆ.

ಈ ತೀರ್ಪಿಗೆ ಇಂದು ಎಲ್ಲೆಡೆಯಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿದೆ. ಆದರೆ 1999ರಲ್ಲಿ ಹಸೀನಾಳ ಮೇಲೆ ದಾಳಿ ನಡೆದಾಗ ಪರಿಸ್ಥಿತಿ ಹೀಗಿರಲಿಲ್ಲ.

ಏಳು ವರ್ಷಗಳ ಹಿಂದೆ...

ಅಪರಾಧಿ ಜೋಸೆಫ್ ರೊಡ್ರಿಗ್ಸ್ ತನ್ನ ಏರ್‌ಪೋರ್ಟ್ ಉದ್ಯೋಗದ ಹೊರತಾಗಿ ನಡೆಸುತ್ತಿದ್ದ 'ನೇತ್ರಾ ಕಂಪ್ಯೂಟರ್ಸ್'ನಲ್ಲಿ ಹಸೀನಾ ಆಪರೇಟರ್ ಆಗಿ ಸೇರಿದಳು. ಸ್ವಲ್ಪ ಸಮಯದ ನಂತರ ಅಲ್ಲಿ ಕೆಲಸ ಕಡಿಮೆಯಾದ ಕಾರಣ ಬೇರೆಡೆ [illegible]ದ ಹಸೀನಾಗೆ ಜೋಸೆಫ್ ಕಿರುಕುಳ ನೀಡಲಾರ[illegible]ದ. ಮುಸ್ಲಿಂ ಕುಟುಂಬದ ಸಂಪ್ರದಾಯಗಳ ಹೊರತಾಗಿ, ತಂದೆಯ ಬೆಂಬಲದಿಂದ ಓದಿ, ಧೈರ್ಯವಾಗಿ ಬೆಳೆದಿದ್ದ ಹಸೀನಾ, 'ಕ್ಯಾರೇ' ಅನ್ನದಿದ್ದಾಗ, 1999ರ ಒಂದು ಬೆಳಿಗ್ಗೆ ಆತ ತನ್ನ ಪೂರ್ವಯೋಜನೆಯಂತೆ ಆಕೆಯ ಮೇಲೆ 2 ಲೀಟರ್ ಆ್ಯಸಿಡ್ ಸುರಿದ. ನೆತ್ತಿಯಿಂದ ಕಾಲಿನವರೆಗೂ ಬೆಂದು ಕರಗಿಹೋದ ಹಸೀನಾ ಸುಮಾರು 15 ಶಸ್ತ್ರಚಿಕಿತ್ಸೆಗಳ ನಂತರವೂ ಕಣ್ಣುಗಳನ್ನು ಮರಳಿ ಪಡೆಯಲಾಗದೇ, ಪರಾವಲಂಬಿಯಾಗಿದ್ದಾಳೆ.

ಅಂದು ಹಲವರು ಹಸೀನಾಗೆ ಸಹಾನುಭೂತಿ ತೋರಿಸಿ ಸಹಾಯ ಮಾಡಿದ್ದರೂ, ಸಾಕಷ್ಟು ಮಂದಿ ಆಡಿಕೊಂಡವರೂ ಇದ್ದರು. ಕೆಲವು ಪತ್ರಿಕೆಗಳು ಜೋಸೆಫ್ ಮತ್ತು ಹಸೀನಾ ನಡುವೆ ಇಲ್ಲದ ಸಂಬಂಧವನ್ನು ಹುಟ್ಟುಹಾಕಿದರೆ, ಇನ್ನೂ ಕೆಲವರು, ಕೈಕೊಟ್ಟ ಪ್ರೇಯಸಿಗೆ 'ಬುದ್ಧಿ ಕಲಿಸಿದ' ಭಗ್ನಪ್ರೇಮಿಯ ಭೂತವನ್ನು ಜೋಸೆಫ್‌ಗೆ ಆರೋಪಿಸಿದರು. ತನ್ನದೇ ಸಮುದಾಯದವರು ಮಕ್ಕಳನ್ನು ಓದಿಸಿದ ತಂದೆಯ ಒಳ್ಳೆತನವನ್ನೇ ದೂಷಿಸಿದರು. ಇದರೊಂದಿಗೆ ಪೊಲೀಸ್ ತನಿಖೆಯ ಹಿಂಸೆ, ಆರ್ಥಿಕ ಸಂಕಷ್ಟಗಳು....

ಇವೆಲ್ಲವನ್ನೂ ಕುಟುಂಬದ ಒತ್ತಾಸೆ ಹಾಗೂ ಸಹಾನುಭೂತಿಪರರ ಕಾಳಜಿಯಿಂದ ಮೀರಿದ ಹಸೀನಾ ಬದುಕಿದಳು! ನಿರ್ದೋಷಿಯಾದ ತನ್ನನ್ನು ನರಳಿಸಿದ ಜೋಸೆಫ್‌ಗೆ ಶಿಕ್ಷೆ ಕೊಡಿಸಬೇಕೆಂಬ ಹಠ ಹಾಗೂ ಆತನ ಸುಟ್ಟುಹಾಕುವ ಬಯಕೆಗೆ ಪ್ರತಿಯಾಗಿ ತಾನು ಸೋಲದೆ ಬದುಕಿ ತೋರಿಸಬೇಕೆಂಬ ಅನನ್ಯವಾದ ಇಚ್ಛಾಶಕ್ತಿಯೇ ಆಕೆಗೆ ಇಂದಿಗೂ ಆಸರೆಯಾಗಿದೆ.

ಸಾಲುಸಾಲು ಆ್ಯಸಿಡ್ ದಾಳಿಗಳು ಹಾಗು CSAAAW:

ಹಸೀನಾ ಪ್ರಕರಣದಂತಹ ಘೋರ ಹಿಂಸೆಯ ಘಟನೆಗಳು ನಡೆದಾಗಲೇ ಎಚ್ಚೆತ್ತು, ಆ್ಯಸಿಡ್ ದೊರೆಯುವಿಕೆ ಪ್ರತಿಬಂಧಿಸಲು, ಇಂತಹ ದಾಳಿಗಳನ್ನು ತಡೆಯಲು ಸರ್ಕಾರ ಮುಂದಾಗಲಿಲ್ಲ, ಮತ್ತೊಂದೆಡೆ ಮಾಧ್ಯಮಗಳಲ್ಲಿ ಇಂತಹ ಘಟನೆಗಳ ವೈಭವೀಕರಣ ನಡೆಯಿತು. ಹೀಗಾಗಿ ಮೊದಲೇ ಅಲ್ಲೊಂದು ಇಲ್ಲೊಂದರಂತೆ ನಡೆಯುತ್ತಿದ್ದ ಆ್ಯಸಿಡ್ ದಾಳಿಯ ಪ್ರಕರಣಗಳು 1999ರ ನಂತರ ಸಾಲುಸಾಲಾಗಿ ನಡೆದವು. ಆದರೆ 2002ರ ಆಗಸ್ಟ್‌ನಲ್ಲಿ ಶೃತಿ ಎಂಬ 16 ವರ್ಷದ ಹುಡುಗಿಯ ಮೇಲೆ ಆ್ಯಸಿಡ್ ಹಾಕಲ್ಪಟ್ಟಾಗ ಮಹಿಳೆಯರ ಮೇಲಿನ ಕ್ರೌರ್ಯದ ಇಂತಹ ಪರಮಾವಧಿಗೆ ಎಲ್ಲರೂ ಮತ್ತೊಮ್ಮೆ ಬೆಚ್ಚಿಬಿದ್ದರು. ಆಗ ಮುಖ್ಯ ಬೆಂಗಳೂರಿನ ಹಾಗೂ ರಾಜ್ಯದ ಇತರೆಡೆಗಳ ಮಹಿಳಾ ಸಂಘಟನೆಗಳು, ಮಾನವ ಹಕ್ಕು ಸಂಘಟನೆಗಳು ಹಾಗೂ ಈ ಕುರಿತು ಕಾಳಜಿಯುಳ್ಳ ಹಲವರನ್ನೊಳಗೊಂಡು, 'ಮಹಿಳೆಯರ ಮೇಲಿನ ಆ್ಯಸಿಡ್ ದಾಳಿ ವಿರೋಧಿ ಪ್ರಚಾರಾಂದೋಲನ ಮತ್ತು ಹೋರಾಟ -Campaign and struggle against acid attacks on women (CSAAAW) ಜನ್ಮತಾಳಿತು. ಅಲ್ಲಿಂದೀಚೆಗೆ 'ಸೀಸಾ' (CSAAAW)ದ ನಿರಂತರ ಪ್ರಯತ್ನಗಳ, ಹೋರಾಟಗಳ ಫಲವಾಗಿ ಆ್ಯಸಿಡ್ ದಾಳಿ ಮಹಿಳೆಯರ ಮೇಲಿನ ದೌರ್ಜನ್ಯ ಎಂದು ಸ್ವಲ್ಪ ಮಟ್ಟಿಗಾದರೂ ಜನರು ಗುರ್ತಿಸುವಂತಾಗಿದೆ. 'ಸೀಸಾ'ದ ಮಧ್ಯಪ್ರವೇಶದಿಂದ ಹಸೀನಾಳಂತಹ ಪ್ರಕರಣಗಳಲ್ಲಿ ಶೀಘ್ರ ತೀರ್ಮಾನಗಳಾದರೂ ಆಗಿವೆ. ಮಹಿಳೆಯರ ಮೇಲೆ ಹೆಚ್ಚುತ್ತಿರುವ ಆ್ಯಸಿಡ್ ದಾಳಿಗಳ ಕುರಿತು ರಾಜ್ಯಾದ್ಯಂತ ಸಂಚರಿಸಿ ಒಕ್ಕೂಟವು ವಿಸ್ತೃತವಾದ ಅಧ್ಯಯನವನ್ನೂ ನಡೆಸಿದೆ.

ಈ ಅಧ್ಯಯನಗಳ ಪ್ರಕಾರ, ಆ್ಯಸಿಡ್‌ನಂತಹ ರಾಸಾಯನಿಕಗಳಿಂದ ನಡೆಸುವ ದಾಳಿಗಳ ಪರಿಣಾಮ ಭೀಕರವಾದದ್ದು, ಸುದೀರ್ಘಾವಧಿಯವರೆಗೆ ಮುಂದುವರೆಯುವಂಥದ್ದು ಹಾಗೂ ಮತ್ತೆಂದೂ ಕೃತಕವಾಗಿ ಸರಿಪಡಿಸಲಾಗದ್ದು. ಹೀಗಾಗಿ ಇಂತಹ ದಾಳಿಗಳು ಯಾರ ಮೇಲೆ ನಡೆದರೂ ಅದು ಅಮಾನವೀಯ. ಆದರೆ ಇವು ಮಹಿಳೆಯರ ಮೇಲೆಯೇ ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ನಡೆಯುತ್ತಿರುವುದಕ್ಕೆ, ಲಿಂಗಾಧಾರಿತ ಅಸಮಾನತೆಯ ಮತ್ತೊಂದು ಪ್ರಮುಖ ಆಯಾಮವಿದೆ.

ಮಹಿಳೆಯರು ಎಂದಿಗೂ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಮತ್ತು ದೈಹಿಕವಾಗಿಯೂ ಯಾರಾದರೊಬ್ಬರ ಅಡಿಯಾಳಾಗಿಯೇ ಇರಬೇಕೆಂಬ ಪಿತೃಪ್ರಧಾನ ಚಿಂತನೆಯೇ, ಯಾವುದಾದರೊಂದು ಬಗೆಯಲ್ಲಿ ಈ ಕಟ್ಟಳೆಯನ್ನು ಮುರಿದು ಮುಂದುವರಿಯುವವರನ್ನು ಶಿಕ್ಷಿಸುವಂತೆ ಪ್ರೇರೇಪಿಸುತ್ತದೆ. ರಾಜ್ಯಾದ್ಯಂತ ನಡೆದಿರುವ ಆ್ಯಸಿಡ್ ದಾಳಿಗಳನ್ನು ನೋಡಿದರೆ, ಆ ಎಲ್ಲಾ ಮಹಿಳೆಯರೂ ಒಂದಲ್ಲಾ ಒಂದು ಬಗೆಯಲ್ಲಿ ಸಮಾಜದ ಒಪ್ಪಿತ ಮೌಲ್ಯಗಳನ್ನು ಪ್ರಶ್ನಿಸಿ, ಧೈರ್ಯವಾಗಿ, ಸ್ವಾಭಿಮಾನಿಗಳಾಗಿ ಬದುಕುತ್ತಿದ್ದವರೇ ಆಗಿದ್ದರು; ಆ ಕಾರಣಕ್ಕಾಗಿಯೇ ಗಂಡನಿಂದಲೋ, ಸಹೋದ್ಯೋಗಿಯಿಂದಲೋ, ಮಾಲೀಕನಿಂದಲೋ, ಪ್ರೇಮಿಯಿಂದಲೋ ದಾಳಿಗೊಳಗಾದರು. ಹೀಗಾಗಿ ಆ್ಯಸಿಡ್ ದಾಳಿಯು ಮಹಿಳೆಯರ ಮೇಲೆ ಹಿಂದಿನಿಂದ ನಡೆಯುತ್ತಾ ಬಂದಿರುವ, ಪಿತೃಪ್ರಧಾನ ಹಿಂಸೆಯ ಮತ್ತಷ್ಟು ಕ್ರೂರ ರೂಪದ ಮುಂದುವರಿಕೆಯೇ ಆಗಿದೆ. ಇಂದಿನ ಸರಕು ಸಂಸ್ಕೃತಿಯಲ್ಲಿ ಹೆಣ್ಣು ಸರಕಾಗಿರುವುದು ಇದಕ್ಕೆ ಇನ್ನಷ್ಟು ಪುಷ್ಟಿ ನೀಡಿದೆ.

...ಗಳಿಲ್ಲದಿದ್ದರೆ ಎಲ್ಲಾ ಮನೆಗಳೂ ಗೋರಿಗಳಾಗುತ್ತಿದ್ದವು

ವೈರಿಸ್ಸೈನ್ಸ್‌ನಲ್ಲಿದ್ದ ಸಹ ಪ್ರಾಧ್ಯಾಪಕ ಶಂಕರ್ ಮಾಲೂರಿನಿಂದ ಚುನಾವಣೆಗೆ ಸ್ಪರ್ಧಿಸಲು ಸ್ವಯಂ ನಿವೃತ್ತಿ ಪಡೆದು ಹೋಗಿದ್ದ. ಸೋತು ಹೋದ. ಈಗ 3 ವರ್ಷಗಳ ನಂತರ ವಾಪಸ್ ಬಂದೂ ಅರಣ್ಯ ವಿದ್ಯಾಲಯದ ಸಹಪ್ರಾಧ್ಯಾಪಕನಾಗಿ ಬಿಟ್ಟಿದ್ದಾನೆ! ಎಸ್.ಎಸ್.ಎಲ್.ಸಿ.ಯುವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಒಂದು ಬಡ್ತಿ ವೇತನ ನೀಡಬೇಕೆಂದು ಸರ್ಕಾರದ ಆದೇಶವಿದ್ದರೂ, ಅಲಕ್ಷ್ಯ ಮಾಡಲಾಗಿದೆ. ಅದಿರಲಿ, ಎಲ್ಲರಿಗೂ ಇನ್‌ಕ್ರೀಮೆಂಟ್ ಕೊಟ್ಟಿದ್ದೇವೆ ಎಂದು ಶಾಸನಸಭೆಗೆ ಸುಳ್ಳು ಹೇಳಿದ್ದಾರೆ ವಿವಿಯ ಭೂಪರು!

ಶಿಲಾಮಾನವ ಶೀಲವಂತರ್

ಭಾರತೀಯ ಕೃಷಿ ಅನುಸಂಧಾನ ಪರಿಷತ್ (ICAR)ನಿಂದ ಅಭಿವೃದ್ಧಿಗೆಂದು ಬಂದ 12 ಕೋಟಿ ರೂ.ಗಳನ್ನು ಬೇಕಾಬಿಟ್ಟಿಯಾಗಿ ಬಳಸಿ ಹಣ ನುಂಗಿದೆ ವಿ.ಸಿ.ಯ ಪಡೆ. ಮುಂದುಗಡೆ ಕಲ್ಲುಗಳಿಂದ ಭಾರೀ ಕಂಪೌಂಡ್ ಎಬ್ಬಿಸುವ ಶಿಲಾಮಾನವ ಶೀಲವಂತರ್ ಹಿಂದುಗಡೆ ಇಟ್ಟಿಗೆ ಗೋಡೆಗಳನ್ನು ನಿರ್ಮಿಸುತ್ತಾನೆ. ಬೋರ್ಡ್ ಮೆಂಬರ್ ವೆಂಕಟರಾಮರೆಡ್ಡಿಯ ಒಂದೇ ಒದೆಗೆ ಇಟ್ಟಿಗೆ ಗೋಡೆ ಬಿದ್ದು ಹೋಗಿದೆ.

1993 ರಲ್ಲೇ ಲಂಡನ್ನಿನಲ್ಲಿ ಹಾರ್ಟಿಕಲ್ಚರ್‌ನಲ್ಲಿ ಪಿಎಚ್‌ಡಿ ಮುಗಿಸಿದ ಡಾ. ಸತ್ಯನಾರಾಯಣರನ್ನು ವಂಚಿಸಿ, ಅವರಿಗಿಂತ 13 ವರ್ಷ ಕಿರಿಯವರಾದ ಡಾ. ಹೇಮ್ಲಾ ನಾಯಕ್‌ರಿಗೆ ಬಡ್ತಿ ನೀಡಲಾಗಿದೆ. ಡಾ. ಸತ್ಯನಾರಾಯಣ ಬಳಿ 7 ಜನ ಟಿಶ್ಯೂ ಕಲ್ಚರ್‌ನಲ್ಲಿ ಪಿಎಚ್‌ಡಿಯನ್ನು, 10 ಜನ ಮಾಸ್ಟರ್ಸ್ ಡಿಗ್ರಿಯನ್ನು ಪಡೆದರೆ, 2004 ರಲ್ಲಿ ಪಿಎಚ್‌ಡಿ ಮಾಡಿದ ಹೇಮ್ಲಾ ನಾಯಕ್ ಬಳಿ ಒಬ್ಬರೇ ಒಬ್ಬರು ಮಾಸ್ಟರ್ಸ್ ಡಿಗ್ರಿ ಪಡೆದಿದ್ದಾರೆ. ಸಮಾಜ ಕಲ್ಯಾಣ ಸಚಿವ ಬಾಲಚಂದ್ರ ಜಾರಕಿಹೊಳಿಯೇ ಇದನ್ನು ಸರಿ ಮಾಡಲು ಹೇಳಿದ್ದರೂ ವಿ.ಸಿ. ಕ್ಯಾರೆ ಎನ್ನುತ್ತಿಲ್ಲ.

ಎ.ಎಮ್. ಕೃಷ್ಣಪ್ಪ ವಿ.ಸಿಯಾಗಿದ್ದಾಗ ಏಜ್ ಕಮ್ ಮೆರಿಟ್ ಸೂತ್ರ ಉಲ್ಲಂಘಿಸಿ ಆಯ್ಕೆಯಾದ 14 ಬೋಧಕೇತರ ಸಿಬ್ಬಂದಿ ಇವತ್ತಿಗೂ ಮುಂದುವರಿದೇ ಇದ್ದಾರೆ.

ರಾಗಿ ಲಕ್ಷ್ಮಯ್ಯನಂತಹವರು ಬೆಳಗಿ ಹೋದ ವಿವಿಯಲ್ಲೀಗ ಕತ್ತಲು ತುಂಬಿದೆ. ಆಧುನಿಕ ಕೃಷಿ ವಿಜ್ಞಾನ ಬೆಳೆಸಬೇಕಾಗಿದ್ದ ವಿ.ವಿ.ಗೇ ಕೀಟಬಾಧೇ ತಗುಲಿಕೊಂಡಿದೆ. ಭ್ರಷ್ಟ ಕೀಟಗಳು, ಜಾತಿವಾದಿ ಕೀಟಗಳ ರಕ್ಷಣೆಗೆ ವಿಸಿ, ರಿಜಿಸ್ಟ್ರಾರ್ ಹೆಗಲು ಕೊಟ್ಟು ನಿಂತಿದ್ದಾರೆ. ಕೃಷಿ ಸಚಿವರಿಗಂತೂ ಇದೆಲ್ಲ ಗೊತ್ತೇ ಇಲ್ಲವೇನೊ?


ರಾಜ್ಯಪಾಲರಾದರೂ ಇತ್ತ ನೋಡುವರೆ?

-ಪಿ.ಕೆ. ಮಲ್ಲನಗೌಡರ್

ಆ್ಯಸಿಡ್ ದಾಳಿ ನಡೆದಾಗ ತಕ್ಷಣಕ್ಕೆ ಆ ಅಪರಾಧಿಗಳ ಮೇಲೆ ಅಗಾಧ ಕೋಪ ಬಂದರೂ, ಆ ಪುರುಷರು ಸಾಮಾಜಿಕ ಮೌಲ್ಯಗಳ ವಾಹಕರಷ್ಟೇ ಆಗಿದ್ದಾರೆಂಬುದೇ ನಿಜ. ಹೀಗಾಗಿ ಹಸೀನಾ ಪ್ರಕರಣದಂತೆ ಭೀಕರ ದೌರ್ಜನ್ಯ ನಡೆದಾಗ ಅವರಿಗೆ ಶಿಕ್ಷೆಯಾಗುವುದು ತಕ್ಷಣದ ಅಗತ್ಯವಾದರೆ, ದೀರ್ಘಕಾಲದಲ್ಲಿ ಈ ಮೌಲ್ಯಗಳಲ್ಲಿ ಪರಿವರ್ತನೆ ಇರಲೇಬೇಕಿದೆ. ಈ ದೃಷ್ಟಿಯನ್ನಿಟ್ಟುಕೊಂಡು ಚಟುವಟಿಕೆ ನಡೆಸುತ್ತಿರುವ 'ಸೀಸಾ'ದ ವಕೀಲೆ ಶೀಲಾ ರಾಮನಾಥನ್ "ಸಾಮಾಜಿಕ ಮೌಲ್ಯಗಳ ಪರಿವರ್ತನೆಗಾಗಿ ಹೋರಾಡುತ್ತಿರುವವರಿಗೆ ಹೈಕೋರ್ಟ್ ತೀರ್ಪಿನಂತಹವು ಒಂದಷ್ಟು ಶಕ್ತಿ ನೀಡುತ್ತವೆ, ಜೊತೆಗೆ ಈಗಲಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ" ಎನ್ನುತ್ತಾರೆ.

ಇದೇ ಸಂದರ್ಭದಲ್ಲಿ ಮಹಿಳಾ ಚಳವಳಿಯದ್ದೇ ಮತ್ತೊಂದು ಅನುಭವವನ್ನೂ ನಾವು ನೆನೆಯಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೋರ್ಟುಗಳ ಪಾತ್ರ ಮುಖ್ಯವಾದರೂ, ಬಹಳಷ್ಟು ಒಳ್ಳೆಯ ತೀರ್ಪುಗಳು ಜನರ ಇಚ್ಛೆಯ ಒತ್ತಡದ ಕಾರಣಕ್ಕಾಗಿಯೇ ಹೊರಬಿದ್ದಿವೆ. ಹಾಗೆಯೇ ಇಂತಹ ತೀರ್ಪುಗಳೂ ಕೂಡಾ ತಮ್ಮಷ್ಟಕ್ಕೆ ತಾವೇ ಸಮಾಜಕ್ಕೆ ಉಪಯುಕ್ತವಾಗಲು ಸಾಧ್ಯವಿಲ್ಲ. ಅವುಗಳನ್ನು ಜನಮನದಲ್ಲಿ ಇಂಗಿಸುವ ಸಾಧನವಾಗಿ ಚಳವಳಿಗಳು ಪಾತ್ರವಹಿಸಬೇಕಾಗುತ್ತದೆ. ಆದರಿಂದ ಮಾತ್ರವೇ ಇಂತಹ ತೀರ್ಪುಗಳು ನಿಜವಾಗಿ ಆಚರಣೆಗೆ ಬರಬಲ್ಲವು ಮತ್ತು ಸಮಾಜದ ಉತ್ತಮೀಕರಣಕ್ಕೆ ಪೂರಕವಾಗಬಲ್ಲವು. ಆದ್ದರಿಂದ ಹಸೀನಾ ಪ್ರಕರಣದ ಹೈಕೋರ್ಟ್ ತೀರ್ಪು, ಮಹಿಳಾಪರ ವಿಚಾರಧಾರೆ ಇನ್ನಷ್ಟು ವಿಸ್ತಾರವಾಗಿ ಬೆಳೆದು, ಬಲಿಷ್ಠ ಚಳವಳಿಯಾಗಿ ರೂಪುಗೊಳ್ಳಬೇಕಾದ, ಹಾಗೂ ಈ ಸಮಾಜದ ಪರಿವರ್ತನೆಗೆ ಅಮೂಲ್ಯ ಕೊಡುಗೆ ನೀಡಬೇಕಾದ ಅಗತ್ಯದತ್ತ ಮತ್ತೊಮ್ಮೆ ಬೊಟ್ಟು ಮಾಡಿ ತೋರಿಸಿದೆ.

-ಮಲ್ಲಿಗೆ, ಬೆಂಗಳೂರು



ಬೆಂಗಳೂರಿನಲ್ಲಿ 'ಸೀಸಾ' ವತಿಯಿಂದ ನಡೆದ ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದ ಆ್ಯಸಿಡ್ ದಾಳಿಗೊಳಗಾದ ಹೆಣ್ಣುಮಕ್ಕಳು.

1999ರಿಂದೀಚೆಗೆ ಕರ್ನಾಟಕದಲ್ಲಿ ಮಹಿಳೆಯರ ಮೇಲಿನ ಆ್ಯಸಿಡ್ ದಾಳಿಯ 53 ಪ್ರಕರಣಗಳು ಬೆಳಕಿಗೆ ಬಂದಿವೆಯೆಂದು 'ಸೀಸಾ' ಅಧ್ಯಯನ ತಿಳಿಸುತ್ತದೆ. ಇದರಲ್ಲಿ 1999ರಲ್ಲಿ ಹೊನ್ನಾವರದಲ್ಲಿ ಆ್ಯಸಿಡ್ ದಾಳಿಯ ಪರಿಣಾಮವಾಗಿ ಸಾವಿಗೀಡಾದ ನಾಗಮ್ಮ ಪ್ರಕರಣದಲ್ಲಿ ಕುಮಟಾ ಸೆಷನ್ಸ್ ನ್ಯಾಯಾಲಯ 2004ರಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆ ನೀಡಿತು. ಉಳಿದಂತೆ ಆ್ಯಸಿಡ್ ದಾಳಿಗೊಳಗಾಗಿ ಬದುಕುಳಿದವರ ಪ್ರಕರಣಗಳಲ್ಲಿ ಹಸೀನಾ ಪ್ರಕರಣದ ತೀರ್ಪೇ ಮೊಟ್ಟಮೊದಲ ಜೀವಾವಧಿ ಶಿಕ್ಷೆಯಾಗಿದೆ. ಹೀಗಾಗಿ ಆ್ಯಸಿಡ್ ದಾಳಿ ವಿರೋಧಿ ಹೋರಾಟದ ಪ್ರಕ್ರಿಯೆಯಲ್ಲಿ ಇದೊಂದು ಪ್ರಮುಖ ಮೈಲಿಗಲ್ಲು.


ರೆಡ್ಡಿ ಬಾಂಬು ಸಿಡದಿದ್ರೆ ನನ್ ಖಾತೆನೆ ಹೋಗ್ತಿತ್ತಲ್ರೀ!

ಜನಾರ್ಧನ ರೆಡ್ಡಿಯ ಬಾಂಬು ಸಿಡಿಯುವ ಸಮಯಕ್ಕೆ ಸರಿಯಾಗಿ ಕುಮಾರಸ್ವಾಮಿ ಬಾಗಲಕೋಟೆ ಜಲಾವೃತ ಪ್ರದೇಶಕ್ಕೆ ಹೋಗಿ ತಲೆ ಮರೆಸಿಕೊಂಡಂತೆ ತಿರುಗತೊಡಗಿದರಂತಲ್ಲಾ, ಅಕ್ಷೋಹಿಣಿ ಸೈನ್ಯದ ಕತೆಯೆಲ್ಲಾ ಮುಗಿದ ನಂತರ, ದುರ್ಯೋಧನ ಸರೋವರದಲ್ಲಿ ಅಡಗಿ ಕುಳಿತು ಹೊರಗಿನ ಶಬ್ದಗಳನ್ನು ಆಲಿಸುತ್ತಿರುವಂತೆ ಕುಮಾರಣ್ಣನೂ ಕೂಡ ಜಲಾವೃತ ಪ್ರದೇಶದಲ್ಲಿದ್ದರೂ ಮೊಬೈಲ್ ಕಿವಿಗಚ್ಚಿಕೊಂಡು ಜಲಚರ ಜನಗಳೊಂದಿಗೆ ಸುಳ್ಳು ಸುಳ್ಳೇ ಮಾತನಾಡುತ್ತಿದ್ದರಂತಲ್ಲಾ, ಆಗ ರೆಡ್ಡಿ ಸಿಡಿಸಿದ ಬಾಂಬಿನಲ್ಲಿ ಯಾವ ಜೀವಹತ್ಯೆಯೂ ಆಗಲಿಲ್ಲ ಅದೂ ಹೋಗಲಿ ಕೆಲವರಿಗಾದರೂ ಕೈ ತರಚಿದ ಗಾಯಗಳೂ ಆಗಲಿಲ್ಲವೆಂಬ ಸುದ್ದಿ ಬಂದ ನಂತರ ಕುಮಾರಣ್ಣನ ಮುಖ ಕಳೆಗಟ್ಟಿ ನೀರೊಳಗಿದ್ದವರನ್ನು ನಗುತ್ತ ಮಾತನಾಡಿಸಿದರಂತಲ್ಲಾ, ಥೂತ್ತೇರಿ!



* * * * * * * *

ರೆಡ್ಡಿ ಸಿಡಿಸಿದ ಬಾಂಬಿನಿಂದ ಯಾವ ಅನಾಹುತಗಳೂ ಆಗಲಿಲ್ಲವೆಂದು ಆಕಾಶ ಭೂಮಿಯನ್ನು ಒಂದು ಮಾಡಿ ಕುಣಿದವರಲ್ಲಿ ಬಿಜೆಪಿಗಳೇ ಇದ್ದರಂತಲ್ಲಾ, ಅದರಲ್ಲೂ ಸದಾನಂದಗೌಡ ತಾನು ಬಿಜೆಪಿ ಅಧ್ಯಕ್ಷನೆಂಬುದನ್ನು ಮರೆತು, "ಅಂತೂ ನಮ್ಮ ಕುಮಾರಣ್ಣನಿಗೆ ಯಾವ ಅಪಾಯವೂ ಆಗಲಿಲ್ಲ, ಅವರು ಸೇಫು. ಇನ್ನು ನಮ್ಮ ರೆಡ್ಡಿ ಸಿಡಿಸುವ ಉಳಿದ ಬಾಂಬಿನ ಕತೆಯೂ ಹೀಗೆ ಆದರೆ, ಅದಕ್ಕಿಂತ ಸಂತೋಷಕರವಾದ ಸುದ್ದಿ ನಮಗೆ ಬೇರೆಯುಂಟೆ?" ಎಂದು ಮುವ್ವತ್ತೆರಡು ಹಲ್ಲೂ ಕಾಣುವಂತೆ ಕೇಕೆ ಹಾಕಿ ಕುಣಿದರಂತಲ್ಲಾ, ಇನ್ನು ಖಾತೆ, ಗೂಟದ ಕಾರು ಮತ್ತು ಕೆಂಪು ದೀಪಕ್ಕೆ ಅಂಟಿ ಕೂತಿರುವ ಈಶ್ವರಪ್ಪನೆಂಬ ಬಳ್ಳಾರಿ ಜಾಲಿ "ಆ ರೆಡ್ಡಿಯ ಜೊತೆ ಮಾತನಾಡುವವರನ್ನು ಸಸ್ಪೆಂಡ್ ಮಾಡಬೇಕು. ಅಕಸ್ಮಾತ್ ಈ ರೆಡ್ಡಿ ಸಿಡಿಸಿದ ಬಾಂಬು ಸರ್ಕಾರಕ್ಕೆ ಅನಾಹುತ ಮಾಡಿದ್ದರೆ, ನನ್ನ ಖಾತೆ ಗತಿಯೇನು? ನನ್ನ ಕೆಂಪುದೀಪದ ಕಾರಿನ ಗತಿಯೇನು? ಇವರಪ್ಪ ಕೊಡ್ತನೇನ್ರಿ? ನಮ್ಮ ಯೋಗ್ಯತೆಗೆ ನಾವು ಸಾಯೋವರಿಗೂ ಮಂತ್ರಿಯಾಗಂಗೇ ಇರಲಿಲ್ಲ, ನಮ್ಮ ಪೂರ್ವಜನರು ಬಳ್ಳಾರಿ ಬಿಟ್ಟು ಶಿವಮೊಗ್ಗಕ್ಕೆ ಬಂದು ಅಕಸ್ಮಾತ್ ನಾನು ಚಿಡ್ಡಿ ಒಕ್ಕಿ ಲಾಟಿ ಹಿಡಿದ ಫಲವಾಗಿ, ಇಂದು ಸಚಿವನಾಗಿದ್ದೇನೆ. ಈ ಹಾಳು ರೆಡ್ಡಿ ಅದಕ್ಕೂ ಕಲ್ಲು ಹಾಕ್ತಿದ್ದನಲ್ರೀ" ಎಂದು ಟೆರರಿಸ್ಟರ ಬಾಂಬಿನಿಂದ ಕೂದಲೆಳೆಯಲ್ಲಿ ಬಚಾವಾಗಿ ಬಂದವರಂತೆ ಕೂಗುತ್ತಿದ್ದುದು ಮನ ಕರಗಿಸುವಂತಿತ್ತೆಂದು ವಿಪ್ರರೇ ಹೇಳುತ್ತಿದ್ದಾರಲ್ಲಾ, ಥೂತ್ತೇರಿ!!



* * * * * * * *

ರೆಡ್ಡಿ ಬಾಂಬ್ ಸಿಡಿಯುವ ಹಿಂದಿನ ಹಿಂದಿನ ದಿನ ಸಾಯಿಬಾಬನ ಎದುರು "ಈಗ ನೀವೇ ಕಾಪಾಡಬೇಕು" ಎನ್ನುವಂತೆ ಕುಳಿತಿದ್ದ ದೇವೇಗೌಡರು ಹಟಾತ್ತನೆ ಎದ್ದು ಡೆಲ್ಲಿಗೆ ಓಡಿದ್ದಕ್ಕೂ, ಆನಂತರ ರೆಡ್ಡಿ ಬಾಂಬು ಹುಸಿಯಾಗಿದ್ದಕ್ಕೂ ಯಾವುದೇ ಸಂಬಂಧ ವಿಲ್ಲವೆಂದು ಹೇಳುವಂತಿಲ್ಲವಂತಲ್ಲಾ, ಈ ನಡುವೆ ಬಚಾವಾದ ಮುಖಭಾವದಲ್ಲಿ ಕಂಗೊಳಿಸುತ್ತಿರುವ ಚಿನ್ನಿಗಪ್ಪ ಅಟ್ಟಲಕ್ಕಮ್ಮ, ಜಲ್ದಗೆರೆಮ್ಮ ಮತ್ತು ಹದ್ದಿನ ಕಲ್ಲಿನ ಹನುಮಂತರಾಯನಿಗೆ ಪೂಜೆ ಸಲ್ಲಿಸುವ ತಯಾರಿಯಲ್ಲಿದ್ದಾರಂತಲ್ಲಾ, 'ರೆಡ್ಡಿ ತೋರಿದ ಸಿಡಿಯಲ್ಲಿನ ಚಿತ್ರಗಳು ಸ್ಪಷ್ಟವಾಗಿಲ್ಲವಂತೆ' ಎಂಬ ಸುದ್ದಿಯೇ ಕೋ-ಜಾ ಸರ್ಕಾರದ ಮಂತ್ರಿಗಳಲ್ಲಿ ಮಿಂಚಿನ ಸಂತೋಷದ ಸಂಚಲನವುಂಟು ಮಾಡಿ ಆತ ನೀಡಿದ ಗಣಿ ಹಣ ಯಾವಾಗ ಯಾರ್‍ಯಾರ ಖಾತೆಗೆ ಎಷ್ಟು ಜಮಾ ಆಗಿದೆ ಎಂಬ ವಿವರವೇ ಯಾರಿಗೂ ಬೇಕಾಗಲಿಲ್ಲವಂತಲ್ಲಾ, ಥೂತ್ತೇರಿ!!

* * * * * * * *

ಜನಾರ್ಧನ ರೆಡ್ಡಿ ನಡವಳಿಕೆಯಿಂದ ಕೆರಳಿ ಕೆಂಡದಂತಾಗಿರುವ ದೇವೇಗೌಡರು, ರೆಡ್ಡಿ ವಿರುದ್ಧ ಕ್ರಿಮಿನಲ್ ಮೊಕದ್ದಮೆಯ ಕಂಪ್ಲೇಂಟು ಬರೆಯುತ್ತ ಕುಳಿತಿದ್ದಾರಂತಲ್ಲಾ, ಕತ್ತನ್ನೂ ಎತ್ತದೆ ಬೆಸೆಯಿಂದ ಕೆರೆಯುತ್ತ ಕೂತ ಗೌಡರಿಗೆ ಆಗಾಗ್ಗೆ ಪಾಯಿಂಟ್ ಹೇಳುತ್ತಿದ್ದ ದತ್ತನೆಂಬ ದೆತ್ತ "ಸಾರ್, ಜನಾರ್ಧನ ರೆಡ್ಡಿ ಸೀಡಿ ಸರಿಯಾಗಿ ಕಾಣಿಸಲಿಲ್ಲ ಎಂಬ ಕಾರಣಕ್ಕೆ ನಾವು ಕ್ರಿಮಿನಲ್ ಮೊಕದ್ದಮೆ ಜಡಿದರೂ, ಆತ ಕವಿತಕ್ಕ, ಅನಿತಕ್ಕ, ಭವಾನಕ್ಕ ಮತ್ತವರ ಅವ್ವಂದಿರು, ಅಕ್ಕಂದಿರ ಖಾತೆಗೆ ಕೋಟಿಗಟ್ಟಲೆ ಹಣ ಜಮಾ ಆಗಿರುವ ಬಗ್ಗೆ ದಾಖಲಾತಿ ಒದಗಿಸಿದ್ದಾನಲ್ಲಾ, ಏನು ಮಾಡುವುದು?" ಎಂದು ತಲೆ ಕೆರೆದನಂತಲ್ಲಾ, ಆಗ ಹಟಾತ್ತನೆ ಕತ್ತೆತ್ತಿ ನೋಡಿದ ಗೌಡರು, "ಕವಿತನಿಗೆ ಕಡಲೆಕಾಯಿ ಬೆಳೆಯಿಂದ ಲಾಭ ಬಂದಿದೆ. ಅನಿತನಿಗೆ ಆಲೂಗಡ್ಡೆಯಿಂದ ಬರಬಾರದಷ್ಟು ಲಾಭ ಬಂದಿದೆ. ಭವಾನಿಗೆ ಬತ್ತದ ಬೆಳೆಯಿಂದ ಅಧಿಕ ಇಳುವರಿ ಪ್ರಾಪ್ತಿಯಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಮಣ್ಣಿನ ಮಗನಾಗಿ ನಾನು ಅಷ್ಟೂ ಸಾಕ್ಷ್ಯಾಧಾರ ಒದಗಿಸುವುದಿಲ್ಲವೆ? ದಡ್ಡಾ ಅಂದ್ರೆ ದಡ್ಡ ನೀನು, ಅದೇನು ಬ್ರಾಹ್ಮಣರ ಜಾತಿಯಲ್ಲಿ ಹುಟ್ಟಿದೆಯೋ, ಏನೊ?" ಎಂದು ಹಣೆ ಚಚ್ಚಿಕೊಂಡರಂತಲ್ಲಾ, ಆಗ ತಲೆ ಕೆರೆದುಕೊಂಡ ದತ್ತ, "ನಿಮ್ಮನ್ನು ಯಾರ್‍ಯಾರೊ ಕುರುಬ ಅನ್ನುತ್ತಿದ್ದರು. ಈಗ ನೋಡಿದರೆ ನಿಮ್ಮೆದುರು ನಾವೇ ಕುರುಬರಾಗಿ ಹೋದೆವೊ" ಎಂದುಕೊಂಡು ಮುಂದಿನ ಪಾಯಿಂಟ್ ಹೇಳಲು ತಯಾರಾದನಂತಲ್ಲಾ, ಥೂತ್ತೇರಿ!!!

* * * * * * * *

ಸಿದ್ಧರಾಮಯ್ಯನಾಗಲೇ ಅಹಿಂದವನ್ನು ಹಿಂದೆಬಿಟ್ಟು, ಎಐಸಿಜೆಡಿಯನ್ನು ಬದಿಗೆ ಇಟ್ಟು ಕಾಂಗ್ರೆಸೊಳಗೆ ಕಾಲಿಟ್ಟರೂ ಅಹಿಂದದ ಹುಡುಗರು ಈ ದೇವೇಗೌಡರ ಯಾರ್‍ಯಾರ ಜೊತೆ ಏನೇನು ಮಾತನಾಡುತ್ತಿದ್ದಾರೆ ಎಂದು ಅವರ ನಿಸ್ತಂತು ಮಾಧ್ಯಮದ ಸಂಭಾಷಣಾ ತುಣುಕನ್ನು ನಮಗೆ ಒದಗಿಸಿದ್ದಾರಲ್ಲಾ, ಸದರಿ ಸಂಭಾಷಣೆಗಳ ಮಾತೂ ಕೂಡ ರೆಡ್ಡಿ ಸೀಡಿಯಷ್ಟೇ ಅಸ್ಪಷ್ಟವಾಗಿವೆಯಲ್ಲಾ, ಆದರೂ ಅದನ್ನು ನಿಮಗೆ ಕೇಳಿಸುವುದು ನಮ್ಮ ಜವಾಬ್ದಾರಿಯಲ್ಲವೇ...

"ಹಲೋ, ಹಲೋ, ಯಾರು ಮಾತಾಡಿ."

"ನಾನು, ಕುಮಾರಸ್ವಾಮಿ."

"ಹೇಳು ಏನಾಗಬೇಕಾಗಿತ್ತು?"

"ಏನಿಲ್ಲಾ, ದೇವರಾಜ ಅರಸು ಪ್ರಶಸ್ತಿನ ಯಾರೋ ಜೆ. ಶ್ರೀನಿವಾಸ್ ಅನ್ನೋರಿಗೆ ಕೊಡಬೇಕು ಅಂತ ಅಧಿಕಾರಿಗಳು ಹೇಳ್ತಯಿದ್ದಾರೆ. ಆ ಶ್ರೀನಿವಾಸ್ ಯಾರು? ಅವುನಿಗೆ ಈ ಅರಸು ಪ್ರೈಜ್ ಕೊಡಬವುದಾ?"

"ಏಲ್ಲಾದ್ರು ಉಂಟೆ? ನೀನು ನನ್ನ ಅಭಿಪ್ರಾಯ ಕೇಳಿದ್ದು ಒಳ್ಳೆದೇ ಆಯ್ತು, ಆ ಶ್ರೀನಿವಾಸ್ ಅರಸು ಪ್ರಶಸ್ತಿ ಪಡೆಯೋದಕ್ಕೆ ಯೋಗ್ಯನೆ ಅಲ್ಲ, ಅಷ್ಟಕ್ಕೂ ಅರಸು ಅಂತವರ ಹೆಸರಲ್ಲಿ ಪ್ರಶಸ್ತಿ ಕೊಡೋದೆ ಅಕ್ಷಮ್ಯ, ಆದರೂ ಅಧಿಕಾರದಲ್ಲಿರುವ ಕಾರಣಕ್ಕೆ ಕೊಡಲೇಬೇಕಿದೆ. ಆ ಶ್ರೀನಿವಾಸ ನಮ್ಮ ವಿರೋಧಿಗಳ ಜೊತೆ ಓಡಾಡೊ ಅಂತ ವ್ಯಕ್ತಿ, ಅದರಲ್ಲೂ ಅಹಿಂದ ಇತ್ಯಾದಿ ಸಮಾಜ ಕಂಟಕರನ್ನು ಕಟ್ಟಿಕೊಂಡು ಸಭೆ ಮಾಡಿದವನಿಗೆ ಈ ಪ್ರಶಸ್ತಿ ಕೊಡೋದು ಬೇಡ."

"ಆಗಾದ್ರೆ ಯಾರಿಗೆ ಕೊಡಲಿ? ನಾಳೆನೆ ಅನವುನ್ಸು ಮಾಡಬೇಕು."

"ಈಗ ಯಾರನ್ನೂ ಹುಡುಕೋದು ಬೇಡ. ಈಗ ನಮಗೆ ಮುಸ್ಲಿಮರ ಅಗತ್ಯ ತುಂಬಾ ಇದೆ. ಆ ನಿಸಾರ್ ಅಹಮದ್‌ಗೆ ಕೊಟ್ಟುಬಿಡಿ."

"ಒಂದ್ನಿಮಿಷ" ಎಂದು ಅಧಿಕಾರಿಗಳೊಂದಿಗೆ ಮಾತನಾಡಿದ ಕುಮಾರಣ್ಣ

"ಅವರು ಸಾಯಿತಿಗೊಳಂತೆ. ಶಿವಮೊಗ್ಗದಲ್ಲಿ ನಡೆಯೋ ಸಭೆಗೆ ಈಗಾಗ್ಲೆ ಆಯ್ಕೆಯಾಗಿದ್ದಾರಂತಲ್ಲಾ?"

"ಆಗ್ಲಿ ಏನಂತೆ? ಆತನಿಗೆ ಕೊಡೋದರಿಂದ ಯಾರೂ ತಕರಾರು ಮಾಡಲ್ಲ. ಮಾಡಿದರೂ ಮುಸ್ಲಿಂ ವಿರೋಧಿಗಳಾಗ್ತಿವಿ ಅಂತ ಯಾವ ರಾಜಕಾರಣಿನೂ ತಕರಾರು ತೆಗೆಯಲ್ಲ. ಸುಮ್ಮನೆ ಕೊಡೋ ಏರ್ಪಾಡು ಮಾಡು. ಯಾರಾದ್ರು ಟೀಕೆ ಮಾಡಿದ್ರೆ ಉತ್ರ ಕೊಡಬೇಡ."

"ಆಯ್ತು, ಎಲ್ಲೂ ಬಾಯಿಬಿಡಲ್ಲ, ಬಾಲಚಂದ್ರ ಜಾರಕಿಹೊಳಿಗೂ ಹೇಳಿದ್ದಿನಿ, ನಮ್ಮೆಸರು ಮಾತ್ರ ಹೇಳಬೇಡ, ಬೇಕಿದ್ರೆ ಅಧಿಕಾರಿಗಳ ಮೇಲೇಳು ಅಂತ."

"ಆಯ್ತು, ಆ ರೆಡ್ಡಿ ಏನೇನೊ ಸಾಕ್ಷ್ಯಾಧಾರ ತೋರ್‍ತನಂತೆ. ಆ ಸಮಯದಲ್ಲಿ ಹೆದರಿಕೊಂಡು ವಿಧಾನಸೌಧ ಅಥವಾ ಮನೆಲಿರಬೇಡ. ಬಾಗಲಕೋಟೆ ಕಡೆಗೋಗು, ಜನಗಳ ಜೊತೆ ಇರು, ನಿನ್ನ ಆತಂಕವನ್ನು ತೋರಿಸಿಕೋ ಬೇಡ, ಆಯ್ತಾ?"

"ಆಯ್ತು, ಈಗ್ಲೆ ಹೊರಟೆ."

"ಥೂತ್ತೇರಿ!"

* * * * * * * *

ಮತ್ತೊಂದು ಸಂಭಾಷಣೆ ತುಣುಕು ಇಂತಿದೆಯಲ್ಲಾ,

"ಹಲೋ, ಅಪ್ಪಾಜಿ? ನಾವು ಜೆಡಿಎಸ್ ಕಾರ್ಯಕರ್ತರು."

"ಏನೇಳಿ?"

"ದೇವರಾಜ ಅರಸು ಜನ್ಮ ದಿನ ಮಾಡ್ತಾಯಿದ್ದಿವಿ, ನೀವು ಬರಬೇಕು."

"ಬೇರೆ ಯಾರನ್ನಾದ್ರು ಕರದಿದ್ದಿರಾ?"

"ಮಹಿಮಾ ಪಟೇಲನ್ನ ಕರದಿದ್ದಿವಿ."

"ಆತನ್ನ ಯಾಕೆ ಕರಿಯಕ್ಕೋಗಿದ್ರಿ? ಬೇರೆ ಯಾರೂ ಇರಲಿಲ್ವೆ?"

"ಈಗಾಗ್ಲೆ ಕರದಿದ್ದಿವಿ. ಈಗ ಬೇಡ ಅಂದ್ರೆ ತಪ್ಪು ತಿಳಕೊಂಡು ಮತ್ತೆ ಮೂರು ತಿಂಗ್ಳು ಮೌನವ್ರತ ಮಾಡಿದ್ರೆ ಅಂತ ಭಯ ಆಗಿದೆ, ಏನ್ಮಾಡೋದು?"


"ಬರ್‍ಲಿ ಬಿಡಿ. ಆದ್ರೆ ವೇದಿಕೆ ಮೇಲೆ ಆತನಿಗೆ ಹೆಚ್ಚು ಮಹತ್ವ ಕೊಡೋದು, ಹೊಗಳೋದು ಬೇಡ. ಉಳಿದವರ ತರಾನೇ ಆತನೂ ಇದ್ದು ಹೋಗಲಿ."

"ಪಾರ್ಟಿ ಹೆಂಗಸರು ನಿಮ್ಮ ಜೊತೆ ಕೂರೋದಕ್ಕೆ ಸ್ಪರ್ಧೆ ನಡೆಸ್ತಾ ಅವ್ರೆ. ನಿಮ್ಮ ಪಕ್ಕ ಯಾರನ್ನ ಕೂರುಸ್ಲಿ?"

"ಎಲ್ರೂ ಬಂದು ಕೂರಲಿ ಬಿಡಿ. ಪಾಪ ಅವರನ್ನ ಮಂತ್ರಿಗಳನ್ನೂ ಮಾಡಿಲ್ಲ, ನಿಗಮ ಮಂಡಲಿಗಳಲ್ಲೂ ಕೂರಿಸಿಲ್ಲ, ಅದ್ದರಿಂದ ಆ ಹೆಣ್ಣುಮಕ್ಕಳು ಸಭೆಲಾದ್ರು ಬಂದು ಕೂರಲಿ" ಎಂದು ಗೌಡರು ಮಹಿಳಾಮಣಿಗಳ ಬಗ್ಗೆ ತೋರಿರುವ ಕನಿಕರದ ಮಾತುಗಳೂ ಕೂಡ ತುಟಿಯಿಂದ ಹೊರಬಾರದೆ ಒಳಗೇ ಒಣಗಿಕೊಂಡವಂತಲ್ಲಾ, ಅದ್ದರಿಂದ ಸದರಿ ಮಾತುಗಳೂ ರೆಡ್ಡಿ ಸೀಡಿಗಳನ್ನೇ ಹೋಲುತ್ತವೆಂದು ಈ ಮಾತುಗಳನ್ನು ಕೇಳಿಸಿಕೊಂಡವರೇ ಹೇಳುತ್ತಿದ್ದಾರಂತಲ್ಲಾ, ಥೂತ್ತೇರಿ!!!

-ಯಾತೂ

ಆನೆ ತೋರತಿನಿ ಅಂತ ಕರದು ಅದರ್ಬ್ರಷ್ಟ್ ತೋರಿದಂಗಾಯ್ತು!



ಕಾಳಮಾವನಿಗೆ ಕೇಳಿಸಿಕೊಳ್ಳಲು ಇಷ್ಟವಿಲ್ಲದಿದ್ದರೂ, ಸೀರ ರೆಡ್ಡಿ ಪುರಾಣವನ್ನು ಪ್ರತ್ಯಕ್ಷದರ್ಶಿಯಂತೆ ಕೊಚ್ಚಿ ಬಿಸಾಕುತ್ತಿದ್ದ. ಕಾಳಮಾವ ತನ್ನ ಮನಸ್ಸನ್ನು ಹೊಲಗದ್ದೆಯ ಬೋಳು ಬಯಲಕಡೆಗೆ ಹರಿಯಬಿಟ್ಟು ಸುಮ್ಮನೆ ಸೀರನ ಮುಖದ ಮೇಲೆ ಕಣ್ಣು ನೆಟ್ಟ. ಇದನ್ನೇ ಕೇಳಿಸಿಕೊಳ್ಳುವ ಏಕಾಗ್ರತೆಯಿಂದರಿತ ಸೀರ, ಮತ್ತೊಮ್ಮೆ ಮೊದಲಿಂದ ಆರಂಭಿಸುವಷ್ಟರಲ್ಲಿ ಉಗ್ರಿ ಮತ್ತು ಜುಮ್ಮಿ ಬಂದರು.

"ರೆಡ್ಡಿ ಬುಟ್ಟಲಿದ್ದ ಹಾವಿನ ಕತಿಯೇನಾಯ್ತೊ ಉಗ್ರಿ?" ಎಂದ ಕಾಳಮಾವ.

"ಒಂದ್ಯರಡು ವಳ್ಳೆ ಪ್ಯಾತ ಕ್ಯಾರೆ ಹಾವು ತೋರಿ ಬುಸ್ ನಾಗಪ್ಪನ್ನ ತೋರದಂಗೆ ಅಂಗೆ ಮಡಿಕಂಡೋದನಂತೆ."

"ಅದ್ಯಾಕ ಮಡಿಕಂಡೋದ?"

"ಅದ ಬುಟ್ರೆ ಸಮಂದಪಟ್ಟೋರ ಕಡದೇ ಕಡಿತದೆ. ಆಗ ಅದರ ಮೈಮ್ಯಾಲೆ ಎಷ್ಟು ಗಳಗೆ ಅದೊ ಅಷ್ಟು ಗಳಗೆಲಿ ಸರ್ಕಾರವೂ ಸತ್ತೋಯ್ತುದೆ. ಆದ್ದರಿಂದ ಸದ್ದಿಕೆ ಆ ಸರ್ಪನ್ನ ಬುಡುಬ್ಯಾಡ ಅಂತ ಡೆಲ್ಲಿಯಿಂದ ಸುದ್ದಿ ಬತ್ತಂತೆ. ಅದ್ಕೆ ಮಡಿಕಂಡು ಸುಮ್ಮನಾದನಂತೆ."

"ಅಂಗರೆ ಆ ಹಾವ ಯಾವಾಗ ಬುಟ್ಟನಂತೇ?"

"ಅದ ಮಡಿಕಂಡಿದ್ದು ಕೋರ್ಟಲ್ಲಿ ಬುಡ್ತಿನಿ ಅಂತನೆ. ಅಂತೂ ಸರಿಯಾದ ಹಾವು ಮಡಗಿದ್ದನಂತೆ" ಎಂದ ಉಗ್ರಿ.

"ಊ ಕಂಡ್ರ. ಇದೇ ದ್ಯಾವೇಗೌಡನ ಮಕ್ಕಳ್ಳರಡು ದುಡ್ಡ ಎಣಸೀ ಎಣಿಸಿ ಚೀಲಕೆ ತುಂಬತರಂತೆ, ಆಮ್ಯಾಲೆ ಚೆನ್ನಿಗಪ್ಪ ದಬ್ಬಳ ಸುತ್ಲಿ ದಾರತಂದು ಮೂಟೆ ವಲ್ದು ತಾನೆ ಹೊತ್ತಗಂಡೋಗಿ ಹೆಲಿಕಾಪ್ಟರಿಗಾಯ್ಕಂಡು ಹೋದನಂತೆ, ಆ ಫೋಟವ ತೋರದಂಗೆ ಮಡಿಕಂಡಿದ್ದನಂತೆ" ಎಂದ ಸೀರ.

"ಯಾರು ಮಾವ ಹೇಳಿದೋರು ನಿನಗೆ?"

"ಯಾರ್ಯಾಕೇಳತರ್ಲ. ಪೇಪ್ರಲ್ಲೆ ಕೊಟ್ಟವುರೆ ನೋಡಿದ್ದಿಯಾ."

"ಈ ಹಾಳು ಪೇಪ್ರಿನೋರು ಬರದೆ ಹಿಂಗಾದುದ್ದು. ಪೇಪ್ರಿನೋರ್ಯಂಗೆ ಅಂದ್ರೆ ಆ ಸುಳ್ಳುಗ್ಯಂಪವುನೆ ನೋಡು ಅಂಗೆ. ಗುಂಡಿಕಟ್ಟೆತ ಒಂದೂವರ ಮಾರುದ್ದ ಹಾವು ನೋಡಿದೆ ಅಂದ! ಸರಿ ನಾನು, ಆ ರುದ್ರ, ಸೀನ, ಜಯರಾಮು ಯಲ್ಲ ಸೇರಿ ಸರಿಯಾದ ದ್ವಣ್ಣೆ ದುದುಗೆ ತಗಂಡು ಹೋದೋ. ಒಂದು ಬಲದಲ್ಲಿ ಅದರ್ವಟ್ಟೆ ಕಾಣತಿತ್ತು, ಇಲಿಗಿಲಿ ನುಂಗಿತ್ತೇನೊ, ಹ್ವಟ್ಟೆ ಮಾತ್ರ ದಪ್ಪಾಗಿತ್ತು. ಈ ರುದ್ರ ಕ್ವಕ್ವ ತಗಂಡು ಯಳದಾಕಿದ. ಸರಿಯಾಗಿ ಯರಡು ಗೇಣುದ್ದ ಇತ್ತು ಹಾವು. ಅದ ವಡಿಯಕ್ಕೂ ಮನುಸು ಬರಲಿಲ್ಲ ಸುಳ್ಳಗ್ಯಂಪುನ್ನ ಬೈಕಂಡು ಬಂದೊ."

"ಸುಳ್ಳ ಗ್ಯಂಪುನ ಮಾತ ಕಟಗಂಡು ಹೋಗಿದ್ದಿರಲ್ಲಾ ನಿಮಗೇ ಬುದ್ದಿಲ್ಲ" ಎಂದಳು ಜುಮ್ಮಿ.


"ಬುದ್ದಿಲ್ಲ ಅಂದ್ರೆ ಏನು ಮಾಡಿಯೇ? ಅವುನೇಳದು ನೋಡಿದ್ರೆ ಆ ಹಾವು ಆ ಕಡೆ ಕೇರಿನೆ ತೀರಿಸ್ಯಾಕಿಬುಡತದೆ ಅನ್ನಂಗಾಗಿತ್ತು. ಈ ರೆಡ್ಡಿ ಕತೆನೂ ಅಂಗೆ ಆಗಿತ್ತಲ್ಲ. ಇವುನೇನು ತಗಿತನೊ ಅಂತ ಹೆದರಿ ಇಡೀ ವಿಧಾನಸೌಧ ಖಾಲಿ ವಡಿಶಿತ್ತಂತೆ. ಮಂತ್ರಿಗಳ್ಯಲ್ಲ ಅದ್ರುಸಿಲ್ಲದಂಗೆ ಹೋಗಿದ್ರಂತೆ. ಚೆನ್ನಿಗಪ್ಪನಂತೂ ಕಂಬಳಿ ಹೊಚಗಂಡು ಮನಿಗಿದ್ನಂತೆ."

"ಆಟೊಂತರ ಹೆದರಿದ್ನೇನ್ನ?"

"ಹೆದರದಿಲವೇನೆ ಮತ್ತೆ? ಕುಮಾರಸ್ವಾಮಿನೆ ಹಣ ತಗಂಡು ಮಡಿಕಳದ ತೋರಿದ ಅಂದ್ರೆ ಗತಿಯೇನಾಗಬೇಕೇಳು?"

"ಈ ದ್ಯಾವೇಗೌಡನ ಮಕ್ಕಳು ದುಡ್ಡ ತಗಳದ್ರಲ್ಲಿ ಕೊಡದ್ರಲ್ಲಿ ನಯ ನಾಜೂಕನೆ ಕಲಿಲಿಲ್ಲವಲ್ಲ ಹೇಳು?" ಎಂದ ಸೀರ.

"ಅಷ್ಟೇ ಅಲ್ಲ ಕಣೊ, ಯಂಗೆ ಖರ್ಚು ಮಾಡಬೇಕು, ಎಲ್ಲಿ ಖರ್ಚು ಮಾಡಬೇಕು ಅನ್ನದು ಗೊತ್ತಿಲ್ಲ. ಎಲ್ಲಾರ ಖಾಲಿ ಭೂಮಿ ಕಾಣ್ತು ಅನ್ನಂಗಿಲ್ಲ ತಗತವೆ. ಹಾಳುಮನೆ ಕಾಣಂಗಿಲ್ಲ ತಗತವೆ."



"ಅಂಥವೇನ್ನ?" ಎಂದು ಜುಮ್ಮಿ ಅಚ್ಚರಿಗೊಂಡಳು.

"ಊ ಕಣೆ. ಆ ಯಗಡೆ ಹೆಚ್ಚುಕಮ್ಮಿ ಏಳೊರ್ಸ ಮುಖ್ಯಮಂತ್ರಿಯಾಗಿದ್ದ. ಎಲ್ಲಿ ತಿಂದ, ಎಲ್ಲೇತ ಅನ್ನದೇನಾರ ಕಾಣತೆ? ಅದೇ ಈ ದ್ಯಾವೇಗೌಡನುದ್ರು ನೋಡು. ಬೆಂಗಳೂರಲ್ಲಿ ಕಟ್ಟಿರೊ ಕಟ್ಟಡದಿಂದ ಹಿಡುದು, ಹಾಳುಬಿದ್ದ ಕಟ್ಟಡನ್ಯಲ್ಲ ತಗಂಡು ಕೀಳಿಸಿ ವಸದಾಗಿ ಕಟ್ಟತಾ ಅವ್ರೆ. ಆ ಬಾಲಕಿಸ್ನನ ಹೆಡತಿನೊ, ಬೆಂಗಳೂರಿಂದ ಮೈಸೂರುಗಂಟ ಇರೊ ನ್ಯಲವ ಯಾರಾರ ಕೊಡ್ತಿನಿ ಅಂದ್ರು ಸಾಕು ಸೆರಗಲ್ಲಿರೊ ದುಡ್ಡ ಸುರುದ್ಲು ಅನ್ನು."

"ಅವುಳಿಗೆಲ್ಲಿಂದ ಬತ್ಲ ಆಟೊಂತರ ದುಡ್ಡೂ?"

"ನನ್ನತ್ರ ಡೀಟೈಲ್ಸಿದೆ ಕೊಡ್ತಿನಿರಕ್ಕ" ಎಂದುಕೊಂಡು ವಾಟಿಸ್ಸೆ ಬಂದ.

"ಹೇಳ್ಕ, ನಿಜ ಹೇಳು. ನೀನು ರೆಡ್ಡಿಯಂಗೆ ಮಾತಾಡಬ್ಯಾಡ."

"ರೆಡ್ಡಿಯ ಕಂಡೆಂ ಮಾಡಬ್ಯಾಡ ಕಣಕ್ಕ. ಸದನದಲ್ಲೇ ಹೇಳಿದ್ದ ಗೊತ್ತೆ, ಹೇಳಿದಂಗೆ ನ್ಯಡಕಂಡವುನೆ. ಸೀಡಿ ಕ್ಯಾಸೆಟ್ ಸರಿಯಿಲ್ದೆಯಿರಬವುದು, ಆದ್ರೆ ಆಪಾದನೆ ಸುಳ್ಳೆ? ಸೀಡಿ ಸರಿಯಾಗಿ ಕಾಣ್ತಾಯಿಲ್ಲ ಅಂತರೆ ವರತೂ, ಯಾರೂ ಹಣ ಕಾಸಿನ ವಿಷಯನೆ ಮಾತಾಡ್ತಯಿಲ್ಲ, ಪೂಲಿಸ್ ಫೆಲೋಗಳು."

"ಆಯ್ತು, ಬಾಲಕಿಸ್ನನ ಹೆಡತಿಗೆ ದುಡ್ಡೆಲ್ಲಿಂದ ಬತ್ತು ಹೇಳು?"

"ಹೇಳ್ತಿನಿರಕ್ಕ. ಜರ್ನಲಿಸ್ಟು ರೆಡ್ಡಿಗೆ ಒತ್ತಾಯ ಮಾಡಿದಂಗೆ ಮಾಡಬ್ಯಾಡ. ಈ ಬಾಲಕಿಷ್ಣೇಗೌಡ ಅವುನಲ್ಲ? ಈತ ಎಜುಕೇಟೆಡ್, ಗೌಡ್ರು ಫ್ಯಾಮಿಲಿಲೆ ಎಜುಕೇಟಡ್. ಒಂದು ಕಾಲದಲ್ಲಿ ಏಸಿಯಾಗಿದ್ದೋನು."

"ಯೇಸಿ. ಅಂದ್ರೇನು?"

"ಎ.ಸಿ. ಅಂದ್ರೆ ಅಸಿಸ್ಟೆಂಟ್ ಕಮೀಷನರು ಕಣಕ್ಕ."

"ಅಸಿಟ್ಟು ಕಮೀಸ್ರಿಗೆ ಸಂಬಳೇಟೂ?"

"ಸಂಬಳ ಗಿಂಬಳ ಯಲ್ಲ ಬೇಕಾದೋಟು ಬತ್ತದೆ."

"ಅಂಗರೆ ಜಮೀನು ತಗಂಡಿರತನೆ ಬುಡು, ಇನ್ಯಾಕದರ ಸುದ್ದಿ?"

"ಅಕ್ಕಾ, ನೀನು ದ್ವಡಪ್ಪನಂಗೆ ಮಾತಾಡಬ್ಯಾಡ, ಒಂದಿಷ್ಟು ಡೀಟೈಲಾಗಿ ಕೇಳು. ಎ.ಸಿ. ಸಂಬಳ ತಗಂಡ್ರೆ ಜೀವನ ಮಾಡಿರತನೆ. ಆದ್ರೆ ಬೇಕಾದೋಟು ಭೂಮಿ ತಗಳಕ್ಕೆ ದುಡ್ಡೆಲ್ಲಿಂದ ಬತ್ತೂ ಅಂತ ಪತ್ತೆ ಹಚ್ಚಬೇಕೀಗ. ಯಾಕಂದ್ರೆ ಬಾಲಕಿಷ್ಣೇಗೌಡನ ಹೆಡತಿ ಕವಿತಕ್ಕ ಪರ್ಚೇಸ್ ಮಾಡಿರೊ ಭೂಮಿ ವ್ಯಾಲ್ಯೂವೇಸನ್‌ಗೂ, ಬಾಲಕಿಷ್ಣೇಗೌಡ ತಗಂಡಿರೋ ಸಂಬಳಕ್ಕೂ ಟ್ಯಾಲಿ ಆಯ್ತಾಯಿಲವಂತೆ."

"ಆಗದಿದ್ರೇನು, ಮಾಜಿ ಪ್ರಧಾನಿ ಮಗ ಕಂಡ್ರ ಅವುನು. ಭಿಕಾಂತರ ಇರೋ ನಿನ್ನ ಜೇಬಲ್ಲೇ ತಡಕಿದ್ರೆ ಇಪ್ಪತ್ತು ಮುವ್ವತ್ತು ರೂಪಾಯಿ ಸಿಗತದೆ, ಇನ್ನ ಅವುನತ್ರ ದುಡ್ಡಿರದಿಲ್ವೆ?" ಎಂದು ಸೀರ ರೇಗಿದ.

"ಇದ್ಯಾಕ್ ಚಿಗಪ್ಪ ಡಾ. ರಮೇಶ್ ಮಾತಾಡಿದಂಗೆ ಮಾತಾಡ್ತೀ?"

"ಅವುನ್ಯಾರ್ಲ ರಮೇಸ ಅಂದ್ರೆ?"

"ಅವುನು ದ್ಯಾವೇಗೌಡ್ರ ಲಾಸ್ಟ ಸನ್ನು ಕಣಕ್ಕ. ಡಾಗುಟ್ರಾಗಿ ಪೇಷಂಟ್‌ಗಳ ನೋಡಪ್ಪ ಅಂದ್ರೆ, ಗಣಿದೂಳು ಕುಡಿತಿನಿ ಅಂತ ಹೋಗಿ ಸಿಗಾಯ್ಕಂಡವುನೆ."

"ನಾನಾಗ್ಲೆ ಹೇಳಲಿಲವೇನ್ನೆ? ಜನಾರ್ಧನ ರೆಡ್ಡಿ ಕೊಟ್ಟಿರೊ ದುಡ್ಡ ಚೀಲಕ್ಕೆ ತುಂಬುವಾಗ ಚೆನ್ನಿಗಪ್ಪನ ಜ್ವತೆ ಈ ರೇಮಸನೂ ಇದ್ದನಂತೆ?" ಎಂದ ಸೀರ.

"ಅಂತೂ ಮನಿಮಕ್ಕಳ್ಯಲ್ಲ ಸೇರಿಕಂಡವುರೆ ಅಂದಂಗಾಯ್ತು?"

"ಏ, ಮಮ್ಮಕ್ಕಳು ಸುಮ್ಮನವುರೆ ಅನ್ನದ್ಯಾವ ಗ್ಯಾರಂಟಿ?"

"ಇಲ್ಲ ಹೇಳು, ಆ ಕವಿತ ಜಮೀನು ಖರೀದಿ ಮಾಡಿದ್ದೇಳು?"

"ಅದು ವೆರಿ ಸಿಂಪಲ್ ಕಣಕ್ಕ, ಈ ಬಾಲಕಿಷ್ಣೇಗೌಡ ಕುಮಾರಸ್ವಾಮಿ ಮುಖ್ಯಮಂತ್ರಿಯಾಗದಕಿಂತ ಮದ್ಲು ಟ್ರಾನ್ಸಫರ್ ಧಂದೆ ಮಾಡತಿದ್ನಂತೆ. ಯಾವ ಜಾಗಕ್ಕೆ ಯಾವ ಅಧಿಕಾರಿ ಹಾಕಿದ್ರೆ ಎಷ್ಟು ದುಡ್ಡು ತಗಬವುದು ಅಂತ, ಪರೆಗ್ಸಾಂಪಲ್ ಬೆಂಗಳೂರಲ್ಲಿರೊ ಪೋಲಿಟೇಷನ್ ತುಂಬಾ ಆದಾಯ ತರತದೆ. ಅದೇ ತರ ಫಾರೆಸ್ಟಿಲಾಕೆ, ಡಿಎಫ್‌ಓಗಳು, ರೇಂಜರ್‌ಗಳು ಲಕ್ಷಲಕ್ಷ ಲಂಚ ಕೊಟ್ಟು ಟ್ರಾನ್ಸ್‌ಫರ್ ಮಾಡಿಸಿಗತ್ತರೆ."

"ಡಿಎಫ್ವೊಗಳು ಅಂದ್ಯಾರು?"

"ಅಂದ್ರೆ ಡಿಸ್ಟ್ರಿಕ್ ಫಾರೆಸ್ಟಾಫೀಸರ್ ಅಂತ. ಇಡೀ ಜಿಲ್ಲೆ ಮರ ಕಡುಸೋರು ಅವುರೆಯ. ಯಾಕಂದ್ರೆ ಅವುರು ಲಕ್ಷಲಕ್ಷ ಲಂಚ ಕೊಟ್ಟಮ್ಯಾಲೆ ಮರ ಕಡಿಸಿ ಸಾಗುಸ್ತಾ ಇರಬೇಕಾಯ್ತದೆ. ಗಂಧ ಕಡುಸ್ತಾ ಇರಬೇಕಾಯ್ತದೆ. ಇಲ್ಲ ಅಂದ್ರೆ ಅವರು ಕೊಟ್ಟ ಲಂಚವ ದುಡಿಯದ್ಯಂಗಕ್ಕಾ?"

"ಅಂಗರೆ ಕಾಡು ಕಡಿಯದ ನಿಲ್ಸಕ್ಯಾಗದಿಲ್ಲ ಅನ್ನು?"

"ಇಂಪಾಜಿಬಲ್. ಎಲ್ಲಿವರಿಗೂ ಫಾರೆಸ್ಟಿಗಳು ಲಂಚ ಕೊಡ್ತರೊ ಅಲ್ಲಿವರಿಗೂ ಕಾಡಿನ ಮರ ಯಾರಿಗೂ ಕಾಣದಂಗೆ ಉರುಳತಾ ಇರತವೆ. ಇಂತ ಅಧಿಕಾರಿಗಳಿಂದ ಬಂದ ದುಡ್ಡು ಮನೆಲಿಟಗಳಕ್ಯಾದತ್ತೇನಕ್ಕ?"

"ಮನೆಲ್ಯಾಕಿಟಗಳಕ್ಯಾಗದಿಲ್ಲ?"

"ಇನಕಂಟ್ಯಾಕ್ಸಿನೋರು ರೈಡು ಮಾಡಬವುದು ಕಳ್ರು ನುಗ್ಗಿ ಕಳ್ಳತನ ಮಾಡಬವುದು. ಜಮೀನ ಯಾರಾರು ಕಳ್ಳತನ ಮಾಡಕ್ಯಾದತೆ? ಅದ್ಕೆ ಜಮೀನ ಮ್ಯಾಲಾಕಿದ್ರು."

"ಲೇ ಜುಮ್ಮಿ, ಅವುನು ಹೇಳತನೆ ಅಂತ ನೀನು ಕೇಳ್ತ ಕುಂತಿದ್ದಿಯಲ್ಲೇ. ದ್ಯಾವೇಗೌಡುನ ಮಕ್ಕಳಲ್ಲೇ ಬಾಲಕಿಸ್ನ ಯೇಗ್ಯನಂತೆ. ಅವುನೆಡ್ತಿನೂ ವಳ್ಳೆ ವಂಶೀಕನ ಮಗಳೆಂತೆ. ಅವುರು ಸಂಪಾದನೆ ಮಾಡಿರೊ ಹಣದಲ್ಲಿ ಅವುರು ಜಮೀನ ತಗಂಡ್ರೆ, ಅದ ತಂದು ಗಣಿ ಲಂಚಕೆ ತಗುಲಾಕ್ತ ಅವ್ರೆ. ಸುಮ್ಮನೆದ್ದು ನಡಿಲೆ ಅವುನ ಮಾತ್ಯಾಕೆ ಕೇಳ್ತಿ" ಎಂದು ಕಾಳಮಾವ ತೀರ್ಪಿತ್ತ.

"ದ್ವಡಪ್ಪ, ತಿಪ್ಪೆ ಸಾರುಸಬ್ಯಾಡ."

"ತಿಪ್ಪೆ ಯಾಕೆ ಸಾರಸನ್ಲ, ಬರಗಾಲ ಬತ್ತಲಪ್ಪ ಅಂತ ನಾನೇಚನೆ ಮಾಡ್ತ ಕುಂತಿದ್ದೀನಿ. ಇವುನು ಬಾಯಿಗೆ ಬಂದಂಗೆ ಮಾತಾಡಿಕಂಡು...."

"ಬರಗಾಲ ಬತ್ತು ಅಂತ ಹೆದರಬ್ಯಾಡ ದ್ವಡಪ್ಪ. ಕುಮಾರಸ್ವಾಮಿ ಒಂದು ತಾಲೂಗೆ ಒಂದು ಕೋಟಿ ರೂಪಾಯಿ ಕೊಡ್ತಾ ಅವುನೆ. ಕಾಮಗಾರಿ ಸುರುವಾಯ್ತವೆ ಎಲ್ಲಿ ನೋಡಿದ್ರು ದುಡ್ಡು!"

"ಮತ್ತೆ, ಅಂತೆವೇನಾರ ಇಗ್ಗೇಳು."

"ಇಂತ ಸುಳ್ಳನೂ ನಂಬಿತೀಯಾ ನೀನು?"

"ಅಂಗರೆ ಸುಳ್ಳೇನ್ನ?" ಎಂದಳು ಜುಮ್ಮಿ.

"ಸುಳ್ಳಲ್ಲದೆ ಇನ್ನೇನಕ್ಕ? ಬರಗಾಲ ಬಂದಿರೊ ತಾಲೂಕಿಗ್ಯಲ್ಲ ಒಂದು ಕೋಟಿ ಅಂದ್ರೆ ಆಯ್ತೆ? ಆ ದುಡ್ಡ ಎಲ್ಲಿಂದ ತತ್ತರೇ? ಯಂಗಂಚತರೇ? ಕೇಂದ್ರದೋರು ಕೊಡತ್ರೆ ಅಂದ್ರೆ ಅವರು ಸತ್ರೂ ಇವುರ ಕೈಗೆ ಕಾಸುಕೊಡದಿಲ್ಲ, ಅಂದಮ್ಯಾಲೆ ಯಾವ ಸೋರಸಿಂದ ತಂದು ಕೊಟ್ಟನೂ?"

"ಬಳ್ಳಾರಿ ಗಣಿಯಿಂದ ತಂದು ಕೊಡಬವುದು ಬುಡೋ."

-ಬಿ. ಚಂದ್ರೇಗೌಡ

Zero Hour ಮುನ್ನಿ

1. ನಾದಗೀತೆಯನ್ನು ತಾನು ಸಂಯೋಜಿಸಿ ದಂತೆಯೇ ಹಾಡಬೇಕು ಎಂಬುದು ಅಶ್ವಥ್ ಹಠ. ಇಷ್ಟ ಇದ್ರೆ ಉತ್ತರಿಸಿ...

a) ಗಾನ ಗಾರ್ದಭನ ಎಷ್ಟನೇ ಅವತಾರವಿದು?
b) ಹಠ ಅಂತಾ ಬರೀಬಾರ್ದು ಮುನ್ನಿ, ಚಟ ಅಂತಾ ಬರಿಬೇಕು
c) ಆತನಿಗೆ ಹಾಡೋಕೆ ಬರುತ್ತಾ... ಚೀರಾಟವಷ್ಟೇ ಗೊತ್ತಂತೆ
d) ಮೇಲಿನೆಲ್ಲವೂ ಸರಿ



2. ವಿ.ಕ.ದಲ್ಲೀಗ ಸೋಮವಾರ ಅರ್ಧಪುಟದಲ್ಲಿ ಇಬ್ಬರು ಜ್ಯೋತಿಷಿಗಳ ಅಂಕಣಗಳಿರುತ್ತವಲ್ಲ?

a) ವಿದ್ಯಾಪೀಠ ಸರ್ಕಲ್ಲಿನ ಪ್ರಕಾಶ್ ಶಾಸ್ತ್ರಿ ಜೈಲಿಗೆ ಬಿದ್ದಿದ್ದು ಗೊತ್ತಿಲ್ಲ ಅನ್ಸುತ್ತೆ
b) ಆ ಪತ್ರಿಕೆಯ ಭವಿಷ್ಯವೇ ಡೋಲಾಯಮಾನವಾಗಿದೆ ಬಿಡು
c) ವಿಶ್ವೇಶ್ವರ ಭಟ್, ಪ್ರತಾಪ್ ಸಿಂಹರ ಅಂಕಣಗಳಿಗಿಂತ ಇವೇ ವಾಸಿ ಅಂತಾರಲ್ಲ..
d) ವರ್ತಮಾನದ ಭೂತಗಳು ಭವಿಷ್ಯದ ಕುರಿತು ಚಿಂತಿಸಿದಂತಾಯ್ತು
e) (c) & (d) ಸರಿ




3. ಇಲಾಖಾ ಪರೀಕ್ಷೆಯಲ್ಲಿ ಏನಿರುತ್ತೆ?

a) 'ಕಾಮ್‌ಚೋರ್' ಆಗುವುದು ಹೇಗೆ ಎಂಬಂತಹ ಪ್ರಶ್ನೆ ಇರುತ್ತೆ
b) 'under the table'- ಇದನ್ನು ಉಪಯೋಗಿಸಿ ವಾಕ್ಯ ರಚಿಸಿ ಅನ್ನೋ ಪ್ರಶ್ನೆ ಇರುತ್ತೆ
c) ನೋಟ್ಸ್ ಮೊದಲಾ, ನೋಟ್ ಮೊದಲಾ ಅನ್ನೋ ಚರ್ಚೆ ಇರುತ್ತೆ
d) ಮೇಲಿನೆಲ್ಲವೂ ಸರಿ. ಅಭ್ಯರ್ಥಿಗಳಲ್ಲಿ ಕಾಪಿ ಕ್ಯಾಟ್‌ಗಳೇ ಹೆಚ್ಚು

4. 'ಭ್ರಷ್ಟಾಚಾರ' ಈ ಪದದ ಸಮನಾರ್ಥಕ ಪದ ಬರೆಯಿರಿ

a) ದೇವೇಗೌಡ ಫ್ಯಾಮಿಲಿ
b) ಗಣಿ ಮಾಲೀಕರ ಒಕ್ಕೂಟ
c) ಸದ್ಯಕ್ಕೆ ಮೇಲಿನೆರಡೂ ಸರಿ ಬಿಡು




5. ರೆಡ್ಡಿ ಬಳ್ಳಾರೀಲಿ ಪ್ರೆಸ್ ಜಾತ್ರೆ ಮಾಡಿದ್ನಂತೆ

a) 'ಲಂಕೇಶ್' ಬರೆದಿದ್ದರಲ್ಲಿ ಅರ್ಥಮರ್ಧವನ್ನು ಬಳ್ಳಾರಿಯಲ್ಲಿ ಹೇಳಿದ್ದಾನೆ.
b) ಪತ್ರದ ಸಿ.ಡಿ. ಗಂಟಲಿಗೆ ಬಿಸಿ ತುಪ್ಪದಂತೆ ಕುಳಿತಿದೆಯಂತೆ
c) ವಿಡಿಯೋಗೆ ಕಾಯ್ದ ಪತ್ರಕರ್ತರು ಪೇಪರ್ ರೆಕಾರ್ಡ್ಸ್ ಓದಲೇ ಇಲ್ವಂತೆ!



ಉತ್ತರಗಳು :
1) d
2) c, d ಎರಡೂ ಸರಿ
3) d
4) c
5) c

ಪಾಶ್ಚಿಮಾತ್ಯ ಆತ್ಮ




ಜೂನ್ 12, 1988

ಈತ ರೋಮ್ ನಗರದ ಬಗ್ಗೆ ಭಾರತದಲ್ಲೇ ಕೂತು ಎಷ್ಟು ಓದಿದ್ದನೆಂದರೆ ಇವನು ಮೊದಲ ಸಲಕ್ಕೆ ಆ ನಗರಕ್ಕೆ ಹೋದಾಗ ತನ್ನ ಊರಲ್ಲಿ ಓಡಾಡುವವನಂತೆ ಆರಾಮಾಗಿ ಓಡಾಡಿದ; ಅಲ್ಲಿಯ ರಸ್ತೆಗಳು, ಮ್ಯೂಸಿಯಂಗಳು, ಉದ್ಯಾನವನಗಳೆಲ್ಲ ಅವನಿಗೆ ತನ್ನ ಹಸ್ತದಂತೆ ಗೊತ್ತಿತ್ತು. ಲಂಡನ್‌ನಲ್ಲೂ ಅಷ್ಟೇ. ಆತ ಓದಿದ್ದ ಊಹಿಸಿದ್ದ ನಗರ ಅದು; ಅಲ್ಲಿಯ ಎಲ್ಲವೂ ಅವನಿಗೆ ಗೊತ್ತಿತ್ತು. ಅಷ್ಟೇ ಅಲ್ಲ, ಯೂರೋಪಿನ ರಾಷ್ಟ್ರಗಳ ಇತಿಹಾಸವನ್ನು ಅವನು ಅಲ್ಲಿಯ ಇತಿಹಾಸಜ್ಞರಿಗಿಂತ ಚೆನ್ನಾಗಿ ಕಲಿತಿದ್ದ. ಫ್ರಾನ್ಸ್ ದೇಶದ ನೆಪೋಲಿಯನ್ ಎಂಬ ಸೇನಾನಿ ತನ್ನ ಸೈನ್ಯದಲ್ಲಿ ನೇಮಿಸಿಕೊಂಡಿದ್ದ ಜನರಲ್‌ಗಳ ಹೆಸರುಗಳನ್ನೆಲ್ಲ ಬಲ್ಲ, ಯುದ್ಧದ ತಾರೀಖು, ಫಲಿತಾಂಶ ಬಲ್ಲ. ಜರ್ಮನಿಯ ಸಂಗೀತಗಾರ ಬಿಥೋವನ್, ಮೊಜಾರ್ಟ್‌ಗಳ ಸಿಂಫನಿಗಳೆಲ್ಲ ಬಲ್ಲ. ಯೂರೋಪ್ ಇಷ್ಟೊಂದು ಸಮೃದ್ಧವಾಗಿರಲು, ಸುಸಂಸ್ಕೃತವಾಗಿರಲು ಕಾರಣಗಳನ್ನೆಲ್ಲ ಅಭ್ಯಸಿಸಿದ್ದಾನೆ, ಆ ಜನರ ಜಾಣತನ, ಬೌದ್ಧಿಕ ಸಾಹಸ, ಪ್ರಯೋಗಶೀಲತೆ.... ಎಲ್ಲವನ್ನೂ ಮೆಚ್ಚುವ ಮನುಷ್ಯ ಈತ.

ಈಗ ಇವನಿಗೆ ತೊಂಭತ್ತು ವರ್ಷ. ನೀರದ್ ಚೌಧುರಿ ಎಂಬ ಈ ವ್ಯಕ್ತಿ ಫೀನಿಕ್ಸ್ ಹಕ್ಕಿಯಂತೆ ಮರುಜೀವ ಪಡೆದು ದೈಹಿಕವಾಗಿ ಒಣಗುತ್ತ ಹೋಗಿದ್ದಾನೆ. ಆದರೆ ಈತನ ಚೇತನ ಹಾಗೇ ಇದೆ. ಭಾರತ ಮನುಷ್ಯರನ್ನು ಹಂದಿಗಳನ್ನಾಗಿಸುತ್ತದೆ, ಪಶ್ಚಿಮ ಮನುಷ್ಯರನ್ನು ಉತ್ತಮಗೊಳಿಸುತ್ತದೆ ಎಂದು ಗಂಭೀರವಾಗಿ ನಂಬಿದ್ದಾನೆ.

ಬಂಗಾಳದ ಚೌಧುರಿ ಮಧ್ಯಮ ವರ್ಗದಲ್ಲಿ ಹುಟ್ಟಿ ಬಡತನದಲ್ಲಿ ಬೆಂದವನು. ಹಾಗೆಯೇ ತನ್ನ ಸುತ್ತಣ ಕೊಳಕು, ಗೊಂದಲ, ಅನಾರೋಗ್ಯದಿಂದ ಬೇಸತ್ತು ಇಂಗ್ಲಿಷ್ ಶೈಲಿ ರೂಪಿಸಿಕೊಂಡು ಯೂರೋಪಿನ ಚೈತನ್ಯ ಬೆಳೆಸಿಕೊಳ್ಳಲು ಪ್ರಯತ್ನಿಸಿದವನು. ಕಲ್ಪಿಸಿಕೊಳ್ಳಿ. ಇಂಗ್ಲಿಷರಿಗಿಂತಲೂ ಇಂಗ್ಲಿಷನಾದ ವ್ಯಕ್ತಿಯೊಬ್ಬನನ್ನು ಕಲ್ಪಿಸಿಕೊಳ್ಳಿ. ಇಂಗ್ಲಿಷರಿಗೆ ವೈನ್ ಲೋಟ ಹಿಡಿದುಕೊಳ್ಳುವುದನ್ನು ಕಲಿಸುತ್ತಾನೆ. ಫ್ರೆಂಚರಿಗೆ ತಮ್ಮ ಸಂಸ್ಕೃತಿಯ ಬಗ್ಗೆ ತಿಳುವಳಿಕೆ ನೀಡುತ್ತಾನೆ. ಬಡವನಾಗಿದ್ದರೂ ಶ್ರೇಷ್ಠ ಸಂಗೀತಗಾರರ ರೆಕಾರ್ಡ್ಸ್ ಕೊಂಡು ಕೇಳುತ್ತಾನೆ. ಇಂಗ್ಲಿಷ್ ಭಾಷೆಯನ್ನು ಎಲ್ಲರಿಗಿಂತ ಚೆನ್ನಾಗಿ ಬಳಸುತ್ತಾನೆ.

"ಅಪ್ಪಟ ಭಾರತೀಯರಾಗಿ ಇಲ್ಲವೇ ಅಪ್ಪಟ ಇಂಗ್ಲಿಷರಾಗಿ" ಎಂದು ಹೇಳಿದ ಈತ ಜರ್ಮನಿಯಲ್ಲಿದ್ದು ಇಂಗ್ಲೆಂಡಿನಲ್ಲಿ ಅಭ್ಯಸಿಸಿ ಮ್ಯಾಕ್ಸ್‌ಮುಲ್ಲರ ಜೀವನಚರಿತ್ರೆ ಬರೆದ. ಪ್ರಚಂಡ ಭ್ರಷ್ಟನೆಂದು ಗೊತ್ತಿದ್ದರೂ ರಾಬರ್ಟ್ ಕ್ಲೈವ್‌ನ ಜೀವನಚರಿತ್ರೆ ಬರೆದ. ಹಾಗೆಯೇ ಇಂಗ್ಲಿಷರು



ಭಾರತವನ್ನು ಬಿಟ್ಟುಹೋಗಿ ಕೀಳರಿಮೆ, ಅವಮಾನ ಅನುಭವಿಸುತ್ತಿದ್ದಾಗ "ನೀವು ತಪ್ಪು ಮಾಡಿದಿರಿ, ಭಾರತವನ್ನು ತ್ಯಜಿಸಿ ಭಾರತೀಯರಿಗೆ ಅನ್ಯಾಯ ಮಾಡಿದಿರಿ" ಎಂದು ಹೇಳಿದ. ಚೌಧುರಿಯಂಥ ಭಾರತೀಯರಿಗೆ ಅನ್ಯಾಯವಾಗಿರಬೇಕು.

ನಾವರಿಯದ ಈತ

ನೀರದ್ ಚೌಧುರಿಯವರ ಶತ್ರುಗಳಿಗೆ ತೊಂದರೆ ಏನೆಂದರೆ ಈತ ಸ್ಪಷ್ಟವಾಗಿ, ಧೈರ್ಯವಾಗಿ ಸತ್ಯವನ್ನೊಳಗೊಂಡು ಬರೆಯುತ್ತಾನೆ. ಪೂರ್ತಿ ಸತ್ಯವಿಲ್ಲದಿದ್ದರೂ ಅಲ್ಲಿ ಎಲ್ಲರನ್ನು ದಂಗುಬಡಿಸುವ ನಿಜದ ಕಣವಿರುತ್ತದೆ. ಕೊಳಚೆಯಲ್ಲಿ ಇಟ್ಟ ತರಕಾರಿ ಕೊಂಡು ಅಡಿಗೆ ಮಾಡುವವರು, ಕೇವಲ ನಾಲ್ಕು ಗಂಟೆ ಶ್ರಮಿಸಿದರೆ ಪುಟ್ಟ ಶೌಚಗೃಹ ನಿರ್ಮಿಸುವುದು ಸಾಧ್ಯವಿದ್ದರೂ ನಿತ್ಯ ಬಯಲಲ್ಲಿ ಕೂರುವವರು, ಸುಳ್ಳು, ಸೋಮಾರಿತನ, ಮೋಸಗಳನ್ನು ತಮ್ಮ ಪರಂಪರಾಗತ ಶೈಲಿಯಾಗಿ ಮಾಡಿಕೊಂಡವರು, ಹೇಡಿಗಳಾಗಿದ್ದರೂ ಧೀರರಂತೆ ಘೋಷಣೆ ಕೂಗುವವರು, ವಿಚಾರವಂತರೆಂದುಕೊಂಡು ಮೂಢನಂಬಿಕೆಯಲ್ಲಿ ಮುಳುಗಿರುವವರು, ಆತ್ಮವಂಚನೆಯನ್ನು ಇತರರನ್ನು ವಂಚಿಸುವುದಕ್ಕೆ ಬಳಸಿಕೊಳ್ಳುವವರು–ಇವರೆಲ್ಲರ ನಡುವೆ ಕೂಡ ಮಹಾಭಾರತದಂಥ ಕಾವ್ಯ, ತಾಜ್‌ಮಹಲ್‌ನಂಥ ವಾಸ್ತುಶಿಲ್ಪ, ಗಾಂಧೀಜಿಯಂಥ ಮನುಷ್ಯ ರೂಪುಗೊಂಡಿವೆ.

ಇದನ್ನು ನೀರದ್ ಬಲ್ಲರು. ಹಾಗೆಯೇ ಛಲದಿಂದ ಬರೆಯುವಾಗ, ತನ್ನ ವ್ಯಕ್ತಿತ್ವದ ಮೂಲೆ ಮೂಲೆಗಳನ್ನು ಹುಡುಕಿ ತನ್ನ ಇಷ್ಟ, ಪೂರ್ವಾಗ್ರಹಗಳನ್ನು ಮಂಡಿಸುವಾಗ ಅಮೂಲ್ಯ ಸತ್ಯಗಳನ್ನು ಹೇಳಬಲ್ಲರು. ಈತ ಒಮ್ಮೆ ಸುಭಾಸ್ ಚಂದ್ರ ಬೋಸರ ಅಣ್ಣ ಶರತ್‌ಚಂದ್ರರ ಮನೆಯಲ್ಲಿ ಸಹಾಯಕನಾಗಿದ್ದ. ಆಗ ಗಾಂಧಿ ಬಂದಿದ್ದರು.

ಸತ್ಯ ಎಷ್ಟು ಮುಖಗಳನ್ನು ಪಡೆದಿದೆ! ಗಾಂಧೀಜಿಯ ಸರಳ ಊಟ, ಸರಳ ಜೀವನದ ಬಗ್ಗೆ ನಾವೆಲ್ಲ ಕೇಳಿದ್ದೇವೆ. ಈ ಸರಳತೆಯೇ ಗೊಡ್ಡುತನವಾದದ್ದನ್ನು ಗಾಂಧೀಜಿಯೇ ಅರಿತಿರಲಿಕ್ಕಿಲ್ಲ. ಗಾಂಧೀಜಿ ಮತ್ತು ಸಹಾಯಕರನ್ನು ಚೆನ್ನಾಗಿ ಗಮನಿಸುತ್ತಿದ್ದ ಚೌಧುರಿಗೆ ನಿರಾಶೆ ಕಾದಿತ್ತು. ಗಾಂಧೀಜಿಯನ್ನು ನೋಡಲು ಸಾವಿರಾರು ಜನ ನೆರೆದಿದ್ದರು. ಅವರಿಗೆ ನೋಡಲು ಅವಕಾಶವಿರಲಿಲ್ಲ, ಗಣ್ಯರು, ಶ್ರೀಮಂತರು ಸುಲಭವಾಗಿ ಅವರ ಕೋಣೆ ಪ್ರವೇಶಿಸಿ ನೋಡುತ್ತಿದ್ದರು. ಜನ ಸಹಿಸಿದರು. ಕೆಲವು ದಿನ ಈ ಆಟವನ್ನೆಲ್ಲ ನೋಡುತ್ತಿದ್ದರು. ಸ್ವಲ್ಪ ಕಾಲದಲ್ಲಿ ಪ್ರತಿಭಟಿಸತೊಡಗಿದರು. ಒಮ್ಮೆ ಬಡಹೆಂಗಸೊಬ್ಬಳು ಗಾಂಧೀಜಿಯನ್ನು ನೋಡಲು ಹಲವು ದಿನ ಕಾದಿದ್ದಳು; ಹಸಿದು ಕಾದಿದ್ದಳು. ಚೌಧುರಿಯೇ ಆಕೆಯನ್ನು ಕರೆದೊಯ್ದು ತೋರಿಸಿದರು. ಆಗ ಗಾಂಧಿ ನಿದ್ರಿಸುತ್ತಿದ್ದರು. "ಅವರ ಕಣ್ಣು ನೋಡಲಾಗಲಿಲ್ಲ!" ಎಂದು ಪರಿತಪಿಸಿದಳು. ಇನ್ನೊಮ್ಮೆ ಬಿರ್ಲಾ ಮನೆಯ ಹೆಣ್ಣುಮಕ್ಕಳು ನೋಡಲು ಬಂದಿದ್ದರು. ಗಾಂಧಿ, "ನನ್ನನ್ನು ನೋಡಲು ಹಣ ತರದೆ ಬರಿಗೈಲಿ ಬಂದಿದ್ದೀರಲ್ಲ?" ಎಂದು ಹೇಳಿ ಎಲ್ಲರನ್ನೂ ದಂಗುಬಡಿಸಿದರು. ಅವರು ಅವತ್ತೇ ಮತ್ತೆ ಬಂದು ಹಣ ನೀಡಿದರು. ಗಾಂಧೀಜಿಗೆ ಹಣ ಎತ್ತುವುದೊಂದು ದುರಭ್ಯಾಸ. ಆಮೇಲೆ ಗಾಂಧೀಜಿಯವರ ಆಡಿನ ಹಾಲಿಗಾಗಿ ಅರ್ಧ ಡಜನ್ ಆಡುಗಳನ್ನು ತಂದು ಮಹಾದೇವ ದೇಸಾಯಿಯವರಿಂದ ಆಡಿನ ಆಯ್ಕೆ ಆಗುತ್ತಿತ್ತು. ಆಡಿನ ಹಾಲು ತ್ಯಾಗದ ಸಂಕೇತವಾಗಿದ್ದರೆ ಈ ಪೂರ್ತಿ ನಾಟಕ ನಾಚಿಕೆಗೇಡಿನ ದಾಗಿತ್ತು... ನೀರದ್ ದೃಷ್ಟಿಯಲ್ಲಿ.

ಈತನಂಥವರ ನಿಜವಾದ ದೋಷ ಗೊತ್ತಾಗುವುದು ನೀವು ಬಲ್ಲ ವಸ್ತುವಿನ ಬಗ್ಗೆ ಮಾತಾಡುವಾಗ. ಸಾಹಿತ್ಯದ ಬಗ್ಗೆ ಬರೆಯುತ್ತಾರೆ. ರವೀಂದ್ರನಾಥ ಠಾಕೂರ್ ಗಯಟೆ, ಬೈರನ್, ಗಾಲ್ಸ್‌ವರ್ದಿಗಿಂತ ದೊಡ್ಡವರೆಂಬ ರೀತಿಯಲ್ಲಿ ಬರೆಯುತ್ತಾರೆ. ಹಾಗೆ ಬರೆಯುವುದೇ ಠಾಕೂರ್ ಎಂಥ ಸಾಮಾನ್ಯ ಲೇಖಕರೆಂದು ತೋರುತ್ತದೆ, ಇದು ನೀರದ್ ಚೌಧುರಿಗೆ ಗೊತ್ತಾಗುವುದಿಲ್ಲ. ಅಮೆಚ್ಯೂರ್‌ಗಳ ನಾಯಕನಾದ ಈತ ವೃತ್ತಿವಂತರ ಎದುರು ತನ್ನ ದೋಷ ತೋರಿಸಿಕೊಳ್ಳುತ್ತಾನೆ. ■

ಗಣಿ ಅಗೆದು ರೆಡ್ಡಿ ಇಲಿ ಹಿಡಿದಿದ್ದೇಕೆ?

ಕೆ.ಶ್ರೀನಿವಾಸ್, ಮಂಡ್ಯ
ಹೆಚ್ಚು ಸುಳ್ಳು ಹೇಳುವ ಸ್ಪರ್ಧೆಯನ್ನು ಏರ್ಪಡಿಸಿದರೆ ಹೇಗೆ?
* ಎಲ್ಲಾ ಬಹುಮಾನಗಳು ದೇವೇಗೌಡರ ಫ್ಯಾಮಿಲಿಗೆ ಗ್ಯಾರಂಟಿ.

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಮೈಸೂರು ದಸರಾ ಹಬ್ಬ ಆದ ಮೇಲೆ ಮುಖ್ಯಮಂತ್ರಿ ಯಾರು?
* ಎಚ್.ಡಿ. ರೇವಣ್ಣ ಅಂತ ಈಗಾಗಲೇ ಜೆ.ಡಿ(ಸ) ಪಕ್ಷದಲ್ಲಿ ಹುಯಿಲೆದ್ದಿದೆ.

ರೇಣುಕಾ, ಹಾಸನ
ಆರು ಮಕ್ಕಳಿಗೆ ಇಷ್ಟೊಂದು ಭೂಮಿ, ಹದಿನಾರು ಮಕ್ಕಳಿದ್ದಿದ್ದರೆ?
* ಕರ್ನಾಟಕವೇ ಸಾಲುತ್ತಿರಲಿಲ್ಲ.

ಓದುಸಿದ್ದೇಗೌಡ ಕಬ್ಬೇಹಳ್ಳಿ, ಕನಕಪುರ
ಎನ್ನ ಸಾಹಿತಿಯ ಮಾಡಯ್ಯ ಅಂದ್ರೆ ದೇವ್ರು ಬೇಡ ಅಂತಾನಲ್ಲಾ?
* ಆತ ಅನಕ್ಷರಸ್ಥನೇ ಇರಬೇಕು.

ಎಂ.ಎಸ್. ಕಾರ್ತಿಕ್, ಕುಮಟಾ
ಲವ್ ಒಂದು ಪಸರಿಸುವ ಬ್ಯಾಕ್ಟೀರಿಯಾವೇ?
* ಇಲ್ಲ, ಥ್ರಿಲ್ ಕೊಡುವ ವಿಕೃತ ವೈರಸ್ ಎಂಬ ಗುಮಾನಿ ಇದೆ.



ಗೋವಿಂದ್ ಪಿ, ಬಳ್ಳಾರಿ
Fan ಕಂಡು ಹಿಡಿದದ್ದು ಯಾಕೆ?
* ನೇತಾಕಿಕೊಳ್ಳೋಕೆ ಅಂತ ತುಂಬಾ ಜನ confuse ಮಾಡಿಕೊಂಡಿದ್ದಾರೆ, ಛೇ.

ಗಾಯತ್ರಿ ಲಕ್ಷ್ಮಣ್, ಮಂಗಳೂರು
ಕನ್ನಡ ಪತ್ರಿಕೆಗಳು ನಮ್ಮ 'ಲಂಕೇಶ್' ತರಹ ನಿಷ್ಠುರವಾಗಿರಲ್ಲ ಯಾಕೆ?
ಜಾತಿ, ದುಡ್ಡು, ಸ್ಟೇಟು, ಸೀಟು, ಜಾಗ. ಹೀಗೆ ತರಹೇವಾರಿ ಮುಲಾಜುಗಳಿರುತ್ತವೆ ಗೊತ್ತಾ.

ಗೀತಾ ಲಕ್ಷ್ಮಿ, ತೀರ್ಥಹಳ್ಳಿ
ನನ್ನ ಹುಡುಗ ಮುಖ ಸಿಂಡರಿಸಿಕೊಂಡರೆ ನನಗೆ ನಗು ಬರುತ್ತಲ್ಲಾ?
* ಆತ ಸಿಂಡರ ಮುಖದ ಸುಂದರನಾಗಿರಬೇಕಲ್ಲವೆ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಪ್ರಾಯಕ್ಕೆ ಬಂದ ಹುಡುಗನಿಗೆ ಚಿಗುರು ಮೀಸೆ, ಹುಡುಗಿಗೆ?
* ಬಳಕುವ ಸೊಂಟ.

ಬಿ.ಎಸ್. ಇಮ್ಮಾನುವೇಲ, ಮಸರಕಲ
ಕೋಟ್ಯಾನುಕೋಟಿ ನಕ್ಷತ್ರಗಳಲ್ಲಿ 'ಲಂಕೇಶ್' ಎಂಬ ನಕ್ಷತ್ರವನ್ನು ಗುರುತಿಸುವುದು ಹೇಗೆ?



* ನಮಗೂ ಗೊತ್ತಿಲ್ಲ, ಆದರೆ ಪುಟ್ಟ ಇಶಾಳಂತೂ ಗುರುತಿಸುತ್ತಾಳೆ. ಅವಳನ್ನೇ ಕೇಳಿ.

ವೈ.ವಿ. ಸಂತೋಷ್, ಕಂಪ್ಲಿ
ಹೆಣ್ಣಿಗೆ ವಯಸ್ಸಾಗುತ್ತಿದ್ದಂತೆ ಅನುಮಾನಗಳು ಹುಟ್ಕೊಳೋದೇಕೆ?
* ಅಂಕಲ್‌ಗಳ ಕಿತಾಪತಿ ಬುದ್ಧಿ ಗೊತ್ತಿರೋದ್ರಿಂದ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ರಾಜ್ಯ ಮಂತ್ರಿ ಮಂಡಲದಲ್ಲಿ ಹೆಣ್ಣಿಲ್ಲದಿರುವುದಕ್ಕೆ ಕಾರಣ?
* ಕವಿತಾ, ಅನಿತಾ, ಅನಸೂಯ, ಭವಾನಿಗಳನ್ನು ಏನಂದುಕೊಂಡಿದ್ದೀರಿ?

ಕವಿತಾ ಮಧುಸೂದನ್, ದಾವಣಗೆರೆ
ಗೌಡರ ಕುಟುಂಬ ಕಾಂಗ್ರೆಸ್ಸಿಗರಂತೆ ಗುಟ್ಟಾಗಿ ಆಸ್ತಿ ಮಾಡಿಕೊಳ್ಳದೆ ನಾಡಿಗೆಲ್ಲಾ ಗೊತ್ತಾಗುವಂತೆ ಸಿಗಾಕಿಕೊಂಡಿದೆಯಲ್ಲ?
* ಇಡೀ ಪ್ರಪಂಚಕ್ಕೆ ಗೊತ್ತಾದರೂ ಮೈಟ್ ಮಾಡಲ್ಲವಂತೆ.

ಕೆ.ಟಿ. ಸೌಮ್ಯ, ಕೊಡಗನೂರು
ಹುಡುಗಿಯರು ಅಯಸ್ಕಾಂತದಂತೆ, ಹುಡುಗರು?
* ಕಬ್ಬಿಣ ಅನ್ನದೇ ವಿಧಿ ಇಲ್ಲ.

ಎಸ್. ಶಶಿಧರ, ಬೆಂಗಳೂರು
'ಮುಕ್ತ' ಧಾರಾವಾಹಿಯಲ್ಲಿ ಸ್ವಾಮೀಜಿ ತಲೆ ಬೋಳಿಸಿಕೊಂಡಿಲ್ಲವೇಕೆ?
* 'ಮುಕ್ತ'ದಲ್ಲಿ ಲಾಜಿಕ್ ಯಾವಾಗ ಬಂತೂಂತ.

ಛೀ ತುಂಟಿ!

ತನ್ನ ಹೆಂಡತಿ ಆರು ತಿಂಗಳಿಂದ ಸಹಕರಿಸುತ್ತಿಲ್ಲ ಎಂದು ಡಾಕ್ಟರ್ ಬಳಿ ಗಂಡ ದೂರಿದ. ಯಾಕೆಂದು ವಿಚಾರಿಸಲು ಹೆಂಡತಿಯನ್ನು ಕರೆಸಿದ ಡಾಕ್ಟರ್ "ಯಾಕಮ್ಮ ಹೀಗೆ ಮಾಡುತ್ತಿದ್ದೀಯಾ?" ಎಂದು ಕೇಳಿದ.

"ಅಯ್ಯೋ ಯಾಕೆ ಅಂಥ ಹೇಳಲಿ. ಕಳೆದ ಆರು ತಿಂಗಳಿಂದ ಪ್ರತಿ ದಿನ ಹಣವಿಲ್ಲದಿದ್ದರೂ ಆಫೀಸಿಗೆ ಟ್ಯಾಕ್ಸಿಯಲ್ಲಿ ಹೋಗುತ್ತಿದ್ದೇನೆ. ಅದಕ್ಕೆ ಟ್ಯಾಕ್ಸಿ ಡ್ರೈವರ್ 'ಹಣ ನೀಡುತ್ತೀಯೋ ಅಥವಾ...' ಅಂತಾನೆ. ನಾನು 'ಅಥವಾ..' ಎಂಬುದನ್ನೇ ಆಯ್ಕೆ ಮಾಡ್ತೀನಿ. ಹಾಗೆ ಆಯ್ಕೆ ಮಾಡೋದ್ರಿಂದ ಆಫೀಸಿಗೆ ಹೋಗೋದು ತಡವಾಗುತ್ತೆ. ಅದನ್ನು ಕಂಡ ನನ್ನ ಬಾಸ್ 'ಇವತ್ತನ್ನು ರಜೆ ಅಂತೆ ದಾಖಲಿಸಲೋ, ಅಥವಾ...' ಅಂತಾನೆ. ಆಗಲೂ ನಾನು 'ಅಥವಾ...'ನೇ ಆಯ್ಕೆ ಮಾಡ್ಕೋತೀನಿ. ಮನೆಗೆ ಹಿಂದಿರುಗುವಾಗ ಮತ್ತದೇ ಕತೆ. ಹಣ ಇರಲ್ಲವಾದ್ದರಿಂದ 'ಅಥವಾ'ನೇ ಆಯ್ಕೆ ಮಾಡ್ತೀನಿ. ಅದಕ್ಕೆ ಡಾಕ್ಟರ್, ನಾನು ಮನೆಗೆ ಹಿಂದಿರುಗಿದ ನಂತರ ಮೂಡೇ ಇರಲ್ಲ" ಅಂತ ವಿವರಿಸುತ್ತಾಳೆ.



ಇದನ್ನು ಕೇಳಿ ಡಾಕ್ಟರ್ "ಇದನ್ನೆಲ್ಲ ನಿನ್ನ ಗಂಡನಿಗೆ ಹೇಳಬೇಕೋ, ಅಥವಾ....." ಎಂದು ಕೇಳಿದ.

ಪವಿತ್ರ ಶೆಟ್ಟಿ, ಶಿವಮೊಗ್ಗ
ಗಣಿ ಅಗೆದು ರೆಡ್ಡಿ ಇಲಿ ಹಿಡಿದಿದ್ದೇಕೆ?
* ಅದು ಇಲಿ ಅಲ್ಲ, ಹೆಗ್ಗಣ!

ಬಹುಮಾನಿತ ಪ್ರಶ್ನೆ

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:
ಜನಾರ್ಧನ ರೆಡ್ಡಿಯ ಗಣಿ ಬಾಂಬ್ ಸ್ಫೋಟಗೊಳ್ಳಲಿಲ್ಲವೆಂದು ಸದಾನಂದ ಗೌಡ ಖುಷಿಯಾಗಿರುವುದು ಯಾಕೆ?

ಆಗಸ್ಟ್ 23ರ ಸಂಚಿಕೆಯ ನಮ್ಮ ಪ್ರಶ್ನೆ: ವಾಜಪೇಯಿ ಕಾಲಿಗೆ ಬಿದ್ದ ಕುಮಾರಸ್ವಾಮಿ ಕೊಟ್ಟ ಬೊಕೆಯಲ್ಲಿ ಏನಿದ್ದಿರಬಹುದು?
ನಿಮ್ಮ ಉತ್ತರ: ಜಾತ್ಯತೀತ ಹೂವಿನ'ದಳ'ಗಳ ನಡುವೆ ಶ್ರೀರಾಮನ ಪಾದುಕೆ!
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಹುಸೇನ್, ಉಜಿರೆ

ನೆನಪು ಸಮಾಗಮದ ಒಂದು ರೂಪ

'ನನ್ನ ವಿರುದ್ಧ ಯಾವ ಗುಂಪು ಇಲ್ಲ. ಇದ್ದರೆ ಯಡಿಯೂರಪ್ಪ ಮಾತ್ರ' -ಯತ್ನಾಳ

ರೆಡ್ಡಿ ಗಣಿ ಸ್ಫೋಟಕ್ಕೆ ಸಂಸದ ಬಸವರಾಜ ಪಾಟೀಲ್ ಯತ್ನಾಳ್ ಕುಮ್ಮಕ್ಕೇ ಕಾರಣ ಎಂದು ತಿಳಿದ ಉಪಮುಖ್ಯಮಂತ್ರಿ ಯಡಿಯೂರಪ್ಪ ಮತ್ತವರ ಸಚಿವರ ತಂಡ ಹೈಕಮಾಂಡ್ ಬಳಿ ದೂರು ಕೊಂಡೊಯ್ದು ಯತ್ನಾಳ್ ವಿರುದ್ಧ ಶಿಸ್ತುಕ್ರಮಕ್ಕೆ ಆಗ್ರಹಿಸಿರುವ ಬೆನ್ನಿಗೇ, ಸಂಸದ ಬಸವರಾಜ್ ಪಾಟೀಲ್ ಯತ್ನಾಳ್ 'ಲಂಕೇಶ್' ವಾರಪತ್ರಿಕೆಯೊಂದಿಗೆ ಮಾತನಾಡಿದ್ದಾರೆ. ಅವರ ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

ಲಂಕೇಶ್: ಪಕ್ಷದ ಒಂದು ಗುಂಪು ನಿಮ್ಮ ವಿರುದ್ಧ ಶಿಸ್ತುಕ್ರಮಕ್ಕೆ ಒತ್ತಾಯಿಸುತ್ತಿದೆಯಲ್ಲಾ?

ಯತ್ನಾಳ್: ನನ್ನ ವಿರುದ್ಧ ಯಾವ ಗುಂಪು ಇಲ್ಲ. ಇದ್ದರೆ ಅದು ಯಡಿಯೂರಪ್ಪ ಮಾತ್ರ. ಒಂಟಿದನಿಗೆ ಹೈಕಮಾಂಡ್ ಬೆಂಬಲ ನೀಡುವುದಾದರೆ ಬಿಜೆಪಿ ರಾಜ್ಯದಲ್ಲಿ ನೆಲಕಚ್ಚುವುದು ಗ್ಯಾರಂಟಿ. ಅದು ಗೊತ್ತಿರುವುದಲ್ಲದೆ, ಈ ಯಡಿಯೂರಪ್ಪನ ಬಂಡವಾಳ ಏನೆಂಬುದು ಹೈಕಮಾಂಡ್‌ಗೆ ಗೊತ್ತು. ಆದ್ದರಿಂದ ಹೈಕಮಾಂಡ್ ಅವರ ಆಗ್ರಹಕ್ಕೆ ಮಣಿಯುವುದಿಲ್ಲವೆಂಬುದು ನನ್ನ ಖಚಿತ ಅಭಿಪ್ರಾಯ.

ಪ್ರ: ಯಡಿಯೂರಪ್ಪ ಒಬ್ಬರೇ ಅಲ್ಲ ಸಂಪುಟದಲ್ಲಿರುವ ಸಚಿವರೆಲ್ಲರೂ ಹೋಗಿದ್ದಾರಲ್ಲಾ?

◆ ನೋಡಿ, ಇವತ್ತು ದೆಹಲಿಗೆ ಹೋಗಿರುವ ಸಚಿವರೆಲ್ಲರೂ ಮನಃಪೂರ್ವಕವಾಗಿ ಅಲ್ಲಿಗೆ ಹೋಗಿಲ್ಲ, ಕೆಲವರು ಅಧಿಕಾರಕ್ಕೆ ಅಂಟಿಕೂರಲು ಹೋಗಿದ್ದರೆ, ಮತ್ತೆ ಕೆಲವರನ್ನು ತಮ್ಮ ಮಾತು ಕೇಳದಿದ್ದರೆ ವಿಧಾನಸಭೆ ವಿಸರ್ಜಿಸುತ್ತೇನೆ ಎಂದು ಬೆದರಿಸಿ ಕರೆದೊಯ್ದಿದ್ದಾರೆ. ಯಡಿಯೂರಪ್ಪಾಗೆ ವಿಧಾನಸಭೆಯನ್ನು ವಿಸರ್ಜಿಸುವ ತಾಕತ್ತಿದ್ದರೆ ವಿಸರ್ಜಿಸಲಿ ನೋಡೋಣ.

ಪ್ರ: ಹಾಗಾದರೆ ಹೈಕಮಾಂಡ್ ಬೆಂಬಲ ನಿಮ್ಮ ಕಡೆಗಿದೆಯೇ?

◆ ಇಲ್ಲಿ ವೈಯಕ್ತಿಕ ಪ್ರಶ್ನೆ ಮುಖ್ಯ ಅಲ್ಲ. ಯತ್ನಾಳ್ ಆಗಲಿ, ಯಡಿಯೂರಪ್ಪ ಆಗಲಿ ಪಕ್ಷಕ್ಕೆ ಮುಖ್ಯ ಅಲ್ಲ. ಪಕ್ಷದ ಸಿದ್ಧಾಂತ, ಅದರ ನೀತಿ ನಿಯಮಗಳು ಮುಖ್ಯ. ಬಿಜೆಪಿ ಮೊದಲಿನಿಂದಲೂ ಭ್ರಷ್ಟಾಚಾರದ ವಿರುದ್ಧ ದನಿ ಎತ್ತುತ್ತಲೇ ಬಂದಿದೆ. ಆ ಕಾರಣಕ್ಕಾಗಿಯೇ ತುರ್ತುಪರಿಸ್ಥಿತಿ ಕಾಲದಲ್ಲಿ ಜೆ.ಪಿ.ಯೊಂದಿಗೆ ಸೇರಿದ ಪಕ್ಷದ ನಾಯಕರು ಇಂದಿರಾಗಾಂಧಿ ಆಡಳಿತದ ಭ್ರಷ್ಟಾಚಾರದ ವಿರುದ್ಧ ಹೋರಾಡಿದ್ದು, ಆದರೆ ಈಗೇನಾಗಿದೆ ನೋಡಿ...

ಪ್ರ: ಅಂದರೆ, ಈ ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲವೆಂದು ಅರ್ಥವೇ?

◆ ಎಲ್ಲವೂ ಸರಿಯಿಲ್ಲವೆಂದಲ್ಲ, ಏನೂ ಸರಿಯಿಲ್ಲ. ಅಧಿಕಾರಕ್ಕೆ ಬಂದು ಆರು ತಿಂಗಳಾಯಿತು. ಕನಿಷ್ಠ ಒಂದಾದರೂ ಹೇಳಿಕೊಳ್ಳುವ ಸಾಧನೆ ಸರ್ಕಾರದಿಂದ ಆಗಿದೆಯೇ? ತೋರಿಸಲಿ. ಅಧಿಕಾರಿಗಳ ವರ್ಗಾವಣೆ ಧಂದೆ, ಮೈನಿಂಗ್ ಲೂಟಿ, ಗಣಿ ಮಾಲೀಕರಿಗೆ ಬ್ಲಾಕ್‌ಮೇಲ್ ಮಾಡುತ್ತಲೇ ರಾಜ್ಯವನ್ನು ಕೊಳ್ಳೆ ಹೊಡೆಯುತ್ತಿರುವ ಗೌಡರ ಕುಟುಂಬ, ಇವತ್ತು ಬಿಜೆಪಿಯ ಮಾನವನ್ನು ಬೀದಿಯಲ್ಲಿ ಹರಾಜು ಹಾಕುತ್ತಿದೆ. ಬಿಜೆಪಿ ರಾಜ್ಯದ ಜನರ ಎದುರು ತಲೆ ಎತ್ತಿ ನಿಲ್ಲದ ಪರಿಸ್ಥಿತಿ ನಿರ್ಮಿಸುತ್ತಿದೆ. ಹಿಂದೆ ಉತ್ತರ ಪ್ರದೇಶದಲ್ಲಿ ಮಾಯಾವತಿ ಮಾಡಿದ ರೀತಿಯಲ್ಲೇ, ದೇವೇಗೌಡರು, ಅವರ ಪುತ್ರ ಕುಮಾರಸ್ವಾಮಿ ಮಾಡುತ್ತಿದ್ದಾರೆ. ಹಾಗಾದರೆ ಇಂತಹ ಸಮ್ಮಿಶ್ರ ಸರ್ಕಾರ ಯಾರಿಗೆ ಬೇಕಿದೆ.

ಪ್ರ: ನಿಮ್ಮ ಮಾತಿನ ಅರ್ಥ?

◆ ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾಗಿದೆ. ಏನಾದರೂ ಅಭಿವೃದ್ಧಿಯಾಗಿದೆಯಾ ಎಂದರೆ ಅದು ಶೂನ್ಯ. ಉತ್ತರ ಕರ್ನಾಟಕದ ಕೃಷ್ಣಾ ಭೀಮಾ ನದಿಯಲ್ಲಿ ಪ್ರವಾಹ ಬಂದು ನೂರಾರು ಹಳ್ಳಿಗಳು ಮುಳುಗಡೆಯಾಗಿವೆ. ಸಂತ್ರಸ್ತರಿಗೆ ತುರ್ತು ಪರಿಹಾರ ನೀಡಬೇಕಾದ ರಾಜ್ಯ ಸರ್ಕಾರ ಮಾಡುತ್ತಿರುವುದಾದರೂ ಏನನ್ನು?



ಕೇಂದ್ರದಿಂದ ಪರಿಹಾರ ಬಂದಿಲ್ಲವೆಂದು ದೂರು ನೀಡುವವರು, ಈ ಬಗ್ಗೆ ರಾಜ್ಯದ ಸಂಸದರನ್ನು ಸೌಜನ್ಯಕ್ಕೂ ಮಾತನಾಡಿಸಿಲ್ಲ, ರಾಜ್ಯ ಸರ್ಕಾರದಿಂದ ಕೈಗೊಳ್ಳಬೇಕಾದ ಪರಿಹಾರಕ್ಕೆ ಗಮನ ಹರಿಸದೆ, ಹೆಲಿಕಾಪ್ಟರ್‌ನಲ್ಲಿ ಸಮೀಕ್ಷೆ ನಡೆಸಿ, ಹಳ್ಳಿಯ ಮನೆಯಲ್ಲಿ ಮಲಗಿ ಪತ್ರಿಕೆಗಳಲ್ಲಿ ಮುಖ್ಯಮಂತ್ರಿಗಳ ಫೋಟೋ ಬಂದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಅದಕ್ಕೆ ಇಚ್ಛಾಶಕ್ತಿ ಇರಬೇಕು. ಇವತ್ತು ನಮ್ಮದೇ ಪಕ್ಷದ ಪಾಲಿರುವ ಸಮ್ಮಿಶ್ರ ಸರ್ಕಾರವಿದ್ದರೂ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ. ನಮ್ಮವರೇ ಹಣಕಾಸು ಮಂತ್ರಿಯಾದರೂ ಏನೂ ಕೊಡುಗೆ ಇಲ್ಲ, ಇಲ್ಲೇನಿದ್ದರೂ ದೇವೇಗೌಡರ ಕುಟುಂಬ ರಾಜ್ಯದ ಲೂಟಿ ಹೊಡೆಯುವುದಕ್ಕೆ, ನಮ್ಮ ಪಕ್ಷ ಬೆಂಬಲ ನೀಡಿದಂತಾಗುತ್ತಿದೆ ಅಷ್ಟೇ.

ಪ್ರ: ಹಾಗಾದರೆ, ಈ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆಯೇ?

◆ ಅದನ್ನು ನಾನು ವಿವರಿಸಬೇಕಿಲ್ಲ, ಕಳೆದ ಎರಡು ತಿಂಗಳಿನಿಂದ ನಡೆಯುತ್ತಿರುವ ವಿದ್ಯಮಾನಗಳೇ ನಿಮ್ಮ ಮುಂದಿವೆ. ದೇವೇಗೌಡರು ಮತ್ತವರ ಮಕ್ಕಳು ಹೇಗೆ ರಾಜ್ಯವನ್ನು ಲೂಟಿ ಹೊಡೆಯುತ್ತಿದ್ದಾರೆ ಎಂಬುದನ್ನು ಅವೇ ತಿಳಿಸುತ್ತವೆ.

ಪ್ರ: ಮುಖ್ಯಮಂತ್ರಿ ಮತ್ತವರ ಕುಟುಂಬದ ಮೇಲೆ 'ಗಣಿಕಪ್ಪ'ದ ಆರೋಪ ಹೊರಿಸಿರುವ ಜನಾರ್ಧನ ರೆಡ್ಡಿಗೆ ನಿಮ್ಮ ಪಕ್ಷದ ಬೆಂಬಲವಿದೆಯೇ?

◆ ರೆಡ್ಡಿಯೊಬ್ಬರೇ ಅಲ್ಲ, ಭ್ರಷ್ಟಾಚಾರದ ವಿರುದ್ಧ ದನಿ ಎತ್ತುವ ಯಾರೇ ಆಗಲಿ ಅವರನ್ನು ಬೆಂಬಲಿಸುವುದು ಬಿಜೆಪಿಯ ಎಲ್ಲರ ಕರ್ತವ್ಯ ಆಗಿದೆ. ಇಂತಹ ಸನ್ನಿವೇಶದಲ್ಲಿ ಯಡಿಯೂರಪ್ಪನವರೂ ಜನಾರ್ಧನ ರೆಡ್ಡಿ ಬಳಿಯಿರುವ ದಾಖಲೆ ಪರಿಶೀಲಿಸಿ ಅವರ ಬೆಂಬ ಲಕ್ಕೆ ನಿಲ್ಲಬೇಕಿತ್ತು, ಕೇವಲ ಕುರ್ಚಿಗಾಗಿ ಭ್ರಷ್ಟಾಚಾರಿಗಳನ್ನು ಬೆಂಬಲಿಸಿದರೆ ಮುಂದೆ ಅದೇ ಯಡಿಯೂರಪ್ಪನವರ ಭವಿಷ್ಯಕ್ಕೆ ಕಪ್ಪುಚುಕ್ಕೆಯಾಗುತ್ತದೆ. ಈ ಬಗ್ಗೆ ಅವರು ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು.

ಪ್ರ: ಒಂದು ವೇಳೆ ಯಡಿಯೂರಪ್ಪ ಇದಕ್ಕೆ ಬೆಂಬಲಿಸದಿದ್ದರೆ?

◆ ಮುಂದೆ ಅದಕ್ಕೆ ಅವರೇ ಬೆಲೆ ತೆರಬೇಕಾಗುತ್ತದೆ. ಇವತ್ತು ಪಕ್ಷದಲ್ಲಿ ಯಾರಿಗೂ ಈ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ, ಕಾರ್ಯಕರ್ತರಿರಲಿ, ಶಾಸಕರನ್ನೂ ಸಹ ಸೌಜನ್ಯದಿಂದ ನಡೆಸಿಕೊಳ್ಳುತ್ತಿಲ್ಲ. ಇಂತಹ ಸಂದರ್ಭದಲ್ಲಿ ಪಕ್ಷ ಒಮ್ಮತದಿಂದ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕಿಳಿದರೆ, ಮುಂದೆ ರಾಜ್ಯದಲ್ಲಿ ಏಕಾಂಗಿಯಾಗಿ ಅಧಿಕಾರ ಹಿಡಿಯಬಹುದು.

ಪ್ರ: ಅಂದರೆ, ಬೆಂಬಲ ವಾಪಸ್ ಪಡೆಯಬೇಕೆಂಬುದು ನಿಮ್ಮ ಇಂಗಿತವೇ?

◆ ಮುಂದಿನದನ್ನು ನೀವೇ ಊಹಿಸಿಕೊಳ್ಳಿ.....

ಪ್ರ: ಪಕ್ಷದ ನಿರ್ಧಾರವನ್ನು ಯಡಿಯೂರಪ್ಪ ಒಪ್ಪದಿದ್ದರೆ?

◆ ಹಾಗಾದರೆ ಅವರು ಪಕ್ಷದಲ್ಲಿ ಏಕಾಂಗಿಯಾಗುತ್ತಾರೆ.

ಪ್ರ: ಅಂದರೆ, ಅವರ ಬೆಂಬಲಿಗ ಶಾಸಕರು ಯಾರೂ ಇಲ್ಲವೆ?

◆ ಇರಬಹುದು, ಒಂದದಿನ್ನೈದರಿಂದ ಇಪ್ಪತ್ತು ಮಂದಿ. ಅವರ್ಯಾರು ಮೂಲ ಬಿಜೆಪಿಯವರಲ್ಲ, ಚುನಾವಣೆ ವೇಳೆ ಬಿಜೆಪಿ ಅಲೆ ನೋಡಿ ಜೆಡಿಯು, ಜೆಡಿಎಸ್, ಕಾಂಗ್ರೆಸ್‌ನಿಂದ ವಲಸೆ ಬಂದ ಪಕ್ಷಾಂತರಿಗಳು. ಈ ಮಂದಿ ಹಿಂದೆಯೇ ಪಕ್ಷವನ್ನು ಯಡಿಯೂರಪ್ಪನ ಮುಖಾಂತರ ಇಬ್ಭಾಗ ಮಾಡಿ ಜೆಡಿಎಸ್ ಸೇರಲು ಹವಣಿಸಿದ್ದರು. ಮುಂದೆಯೂ ಇವರು ಪಕ್ಷದಲ್ಲಿರುವ ಗ್ಯಾರಂಟಿ ಇಲ್ಲ, ಇಂತಹ ಸಂದರ್ಭದಲ್ಲಿ ಹೈಕಮಾಂಡ್ ರೆಡ್ಡಿಯವರ ಮೇಲೆ ಕ್ರಮ ಕೈಗೊಳ್ಳುವ ಬದಲು, ಪಕ್ಷದ ಒಳಿತಿನ ಬಗ್ಗೆ ಯೋಚಿಸಬೇಕು. ಅದಿಲ್ಲದಿದ್ದರೆ, ಒಂದು ಪಕ್ಷ ಉಳಿಸುವುದು ಇಲ್ಲವೇ ಯಡಿಯೂರಪ್ಪ..... ಇವೆರಡೇ ಹೈಕಮಾಂಡ್ ಮುಂದಿರುವ ಆಯ್ಕೆ.


-ಸ್ವಾಮಿಗೌಡ

ಬಿಜೆಪಿಯಲ್ಲಿ ಬಂಡಾಯ

ಶ್ರಾವಣದ ಅಮವಾಸ್ಯೆ ರಾಜ್ಯ ಬಿಜೆಪಿಗೆ ಶುಭವನ್ನೇನೂ ತಂದಿಲ್ಲ, ಆದ್ದರಿಂದಲೇ ಬಿಜೆಪಿಯಲ್ಲಿ ಆಂತರಿಕವಾಗಿ ಕುದಿಯುತ್ತಿದ್ದ ಭಿನ್ನಮತ ಸ್ಫೋಟಗೊಂಡಿದೆ. ರೆಡ್ಡಿ, ಯತ್ನಾಳ್, ಲಿಂಬಾವಳಿಯನ್ನು ಪಕ್ಷದಿಂದ ಹೊರಹಾಕಲು ಯಡ್ಡಿ ಗುಂಪು ತಂತ್ರ ಹೆಣೆಯುತ್ತಿದ್ದರೆ, ಯಡ್ಡಿಯ ಬುಡಕ್ಕೆ ಕೊಡಲಿಪೆಟ್ಟು ನೀಡಲು ಅವರ ವಿರೋಧಿ ಗ್ಯಾಂಗು ಪ್ರತಿತಂತ್ರ ರೂಪಿಸುತ್ತಿದೆ.

ಮುಖ್ಯಮಂತ್ರಿ ಕುಮಾರಸ್ವಾಮಿ ಅಧಿಕಾರಕ್ಕೆ ಬಂದ ನಂತರ ಗಣಿ ಮಾಲೀಕರಿಂದ 150 ಕೋಟಿ ಲಂಚ ಪಡೆದಿದ್ದಾರೆ ಎಂಬ ಆರೋಪವನ್ನು ಜನಾರ್ಧನ ರೆಡ್ಡಿ ಹೊರ ಹಾಕಿದ ನಂತರ, ಅದುವರೆವಿಗೂ ಪಕ್ಷದಲ್ಲಿ ಒಳಗೊಳಗೆ ಕುದಿಯುತ್ತಿದ್ದ ಭಿನ್ನಮತ, ಈಗ ಜ್ವಾಲಾಮುಖಿಯಾಗಿ ಹೊರಬರಲು ಸಿದ್ಧವಾಗಿದೆ, ಹಾಗೊಂದು ವೇಳೆ ಇದು ಸ್ಫೋಟಗೊಂಡರೆ ರಾಜ್ಯದಲ್ಲಿ ಬಿಜೆಪಿ ಇಬ್ಭಾಗವಾಗುವುದಂತೂ ಸತ್ಯ.

ಸ್ವಯಂಕೃತಾಪರಾಧ



ರಾಜ್ಯದಲ್ಲಿ ಜೆಡಿಎಸ್ ಜೊತೆಗೂಡಿ 40 ತಿಂಗಳ ಸಮ್ಮಿಶ್ರ ಆಡಳಿತದ ಅಧಿಕಾರ ನಡೆಸುವ ತೀರ್ಮಾನವನ್ನು ಬಿಜೆಪಿಯ ರಾಷ್ಟ್ರೀಯ ವರಿಷ್ಠರು ತೆಗೆದುಕೊಂಡಾಗ, ಸಮ್ಮಿಶ್ರ ಸರ್ಕಾರದಲ್ಲಿ ತಮ್ಮ ಪಕ್ಷಕ್ಕೆ ದೊರಕುವ ಉಪಮುಖ್ಯಮಂತ್ರಿ ಸ್ಥಾನವನ್ನು ಯಾರು ವಹಿಸಬೇಕೆಂಬ ಪ್ರಶ್ನೆ ಎದುರಾದಾಗ ಬಿಜೆಪಿ ವರಿಷ್ಠರ ಮುಂದೆ ಸಹಜವಾಗಿ ಇದ್ದ ಹೆಸರು ಯಡಿಯೂರಪ್ಪನವರದೇ. ಅಂತಹ ಸಂದರ್ಭದಲ್ಲಿಯೇ ಬಿಜೆಪಿಯ ಯಡಿಯೂರಪ್ಪ ವಿರೋಧಿ ಗ್ಯಾಂಗ್‌ನ ಪ್ರಮುಖ, ಸಂಸದ ಬಸವರಾಜ್ ಪಾಟೀಲ್ ಯತ್ನಾಳ್ ವಿರೋಧ ವ್ಯಕ್ತಪಡಿಸಿದ್ದರು. ಅಧಿಕಾರಕ್ಕೇರುವ ಮುನ್ನವೇ ಅಪಸ್ವರ ಬೇಡವೆಂದು ಹೈಕಮಾಂಡೇನೋ ಅಂದು ಯತ್ನಾಳ್ ಅವರ ಬಾಯಿ ಮುಚ್ಚಿಸಿತ್ತು.

ಅಧಿಕಾರ ಕೈಗೆ ಸಿಕ್ಕಿದ್ದೇ ತಡ, ಯಡಿಯೂರಪ್ಪ ಪಕ್ಕದಲ್ಲಿಟ್ಟುಕೊಂಡದ್ದು ಯಾರನ್ನ? ಬಿಜೆಪಿಗೆ ನಾಲ್ಕು ಓಟು ಹಾಕಿಸಲು ಲಾಯಕ್ಕಿಲ್ಲದ ಗಟ್ಟಗಿತ್ತಿ(?) ಶೋಭಾ ಕರಂದ್ಲಾಜೆ, ಉಂಡೆ ನಾಮದ ಆಸಾಮಿ ರಾಮಚಂದ್ರೇಗೌಡ, ನಿಷ್ಪಟ್ಟು ಕೋಡುಬಳೆಪ್ರಿಯ ಡಿ.ಎಚ್. ಶಂಕರಮೂರ್ತಿ, ನೆಲಗಳ್ಳ ಮಾಲೂರಿನ ಕೃಷ್ಣಯ್ಯ ಶೆಟ್ಟಿಯಂತ ಎಲಿಮೆಂಟುಗಳನ್ನು.

2004 ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ 79 ಸ್ಥಾನ ಪಡೆದಿದ್ದ ಬಿಜೆಪಿಗೆ ಉತ್ತರ ಕರ್ನಾಟಕ ಭಾಗದಿಂದ 42 ಶಾಸಕರು ಆರಿಸಿಬಂದಿದ್ದು ಬಿಜೆಪಿಗೆ ಅಲ್ಲಿರುವ ಗಟ್ಟಿನೆಲೆಯಿಂದಲೇ. ಇನ್ನುಳಿದಂತೆ ಕರಾವಳಿ ಹಾಗೂ ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರಿನಲ್ಲಿ ಪಕ್ಷ ಪ್ರಾಬಲ್ಯ ಮೆರೆದದ್ದೂ ದತ್ತಪೀಠ ವಿವಾದ ಹಾಗೂ ಬಂಗಾರಪ್ಪನವರ ವರ್ಚಸ್ಸಿನಿಂದಲೇ.

ಆದರೆ ಯಡಿಯೂರಪ್ಪ ಸಂಪುಟದಲ್ಲಿ ಈ ಭಾಗಕ್ಕೆಲ್ಲೂ ಅವಕಾಶವನ್ನೇ ನೀಡಲಿಲ್ಲ, ಆದ್ದರಿಂದಲೇ ಅಂದು ಸಂಸದ ಯತ್ನಾಳ್ ಯಡಿಯೂರಪ್ಪನವರ ವಿರುದ್ಧ ಬಂಡಾಯ ಹಾರಿಸಿದ್ದು,

ಇವತ್ತು ಪಕ್ಷದಲ್ಲಿರುವ 79 ಶಾಸಕರ ಪೈಕಿ ಕೇವಲ ಇಪ್ಪತ್ತು ಮಂದಿ ಮಾತ್ರ ಯಡಿಯೂರಪ್ಪನವರಿಗೆ ನಿಷ್ಠರಾಗಿದ್ದಾರೆಂದರೆ ಪಕ್ಷದಲ್ಲಿ ಯಡ್ಡಿಯ ಸ್ಥಿತಿ ಏನೆಂಬುದು ಬಯಲಾಗುತ್ತದೆ. ಇಂತಹ ಸ್ಥಿತಿಯಲ್ಲಿ ಕುದಿಯುತ್ತಿದ್ದ ಭಿನ್ನಮತೀಯರಿಗೆ ಬ್ರಹ್ಮಾಸ್ತ್ರವಾಗಿ ಸಿಕ್ಕಿದ್ದೇ ವಿಧಾನ ಪರಿಷತ್ ಸದಸ್ಯ ರೆಡ್ಡಿ ಸಿಡಿಸಿದ ಗಣಿ ಕಪ್ಪ ಬಾಂಬ್. ರೆಡ್ಡಿ ಮುಖ್ಯಮಂತ್ರಿ ಕುಮಾರಸ್ವಾಮಿ ವಿರುದ್ಧ ಬ್ರಹ್ಮಾಸ್ತ್ರ ಪ್ರಯೋಗಿಸಿದರು. ಆದರೆ ಅದೀಗ ಯಡಿಯೂರಪ್ಪನವರ ಬುಡಕ್ಕೆ ತಗುಲುತ್ತಿದೆ.

ರೆಡ್ಡಿಗೆ ಬೆಂಬಲ

ಕಳೆದ ಜುಲೈ ತಿಂಗಳಿನಲ್ಲಿ ಮುಖ್ಯಮಂತ್ರಿ ಕುಮಾರಣ್ಣ ಮತ್ತವರ ಕುಟುಂಬದ ವಿರುದ್ಧ ಜನಾರ್ಧನ ರೆಡ್ಡಿ 150 ಕೋಟಿ ರೂಪಾಯಿ ಲಂಚದ ಆರೋಪ ಹೊರಿಸಿದಾಗ, ಯಡಿಯೂರಪ್ಪ ಸೇರಿದಂತೆ ಸಂಪುಟದಲ್ಲಿರುವ ಸಚಿವರು ರೆಡ್ಡಿಯ ಬಾಯಿಮುಚ್ಚಿಸಲು ಯತ್ನಿಸಿದರೆ, ರೆಡ್ಡಿಗೆ ಭಿನ್ನಮತೀಯರ ಗುಂಪು ಬಹಿರಂಗವಾಗಿ ನೀರೆರೆದಿದ್ದು ಸುಳ್ಳಲ್ಲ...

ನಂತರ ಹೈಕಮಾಂಡ್ ಒತ್ತಾಯಕ್ಕೆ ರೆಡ್ಡಿ ತನ್ನ ಹೇಳಿಕೆಯಲ್ಲಿ ಬದಲಾವಣೆ ಮಾಡಿದ್ದರು. ಆಗ ಬಹಿರಂಗವಾಗಿಯೇ ತೊಡೆ ತಟ್ಟಿದ್ದರು ಯಡಿಯೂರಪ್ಪ, ಆದರೆ ಭಿನ್ನಮತೀಯ ಬಣ ರೆಡ್ಡಿಯಿಂದ ಸದನದಲ್ಲಿಯೇ ಮುಖ್ಯಮಂತ್ರಿ ಕುಮಾರಸ್ವಾಮಿ, ಗೃಹಮಂತ್ರಿ ಎಂ.ಪಿ. ಪ್ರಕಾಶ್, ಅರಣ್ಯ ಮಂತ್ರಿ ಚೆನ್ನಿಗಪ್ಪ ವಿರುದ್ಧ ಮತ್ತೆ ಗಣಿಕಪ್ಪದ ಆರೋಪ ಹೊರಿಸಿ ಸೇಡು ತೀರಿಸಿಕೊಂಡಿತ್ತು,

ಆನಂತರದ ಬೆಳವಣಿಗೆಗಳಲ್ಲಿ ರೆಡ್ಡಿಯ ಹಿಂದೆ ನಿಂತ ಅನಂತ್‌ಕುಮಾರ್, ಯತ್ನಾಳ್ ನೇತೃತ್ವದ ಭಿನ್ನಮತೀಯರು ರೆಡ್ಡಿ ಬಳಿಯಿರುವ ಗಣಿ ಲಂಚಕ್ಕೆ ಸಂಬಂಧಿಸಿದ ದಾಖಲೆಗಳನ್ನು ಖುದ್ದು ನೋಡಿದ್ದಾ[ರೆ]. ನಂತರವೇ ರೆಡ್ಡಿ ಒಂದೊಂದೇ ದಾಖಲೆಗಳನ್ನು ಹೊ[ರ] ಹಾಕುವಂತೆ ಸಲಹೆ ಮಾಡಿದ್ದಾರೆ.

ಪಕ್ಷದೊಳಗೆ ತನಗೆ ದೊರೆತ ನೈತಿಕ ಬೆಂಬ[ಲ]ದಿಂದಲೇ ಶ್ರಾವಣದ ಅಮವಾಸ್ಯೆಯಂದು ರೆ[ಡ್ಡಿ] ದೇವೇಗೌಡರ ಕುಟುಂಬದ ಮೇಲೆ ಯುದ್ಧ ಸಾ[ರಿ] ಮೊದಲ ಅಸ್ತ್ರ ಪ್ರಯೋಗಿಸಿದ್ದು.

ರೆಡ್ಡಿ ಮತ್ತು ಆತನ ಬೆನ್ನಿಗೆ ನಿಂತಿರುವ ಯತ್ನಾ[ಳ್] ಲಿಂಬಾವಳಿಯನ್ನು ಪಕ್ಷದಿಂದ ಹೊರಹಾಕಿಸುವ[ರೆಗೂ] ಯಡಿಯೂರಿಗೆ ದುಂಬಾಲು ಬಿದ್ದಿದೆ ಗೌಡರ ಕುಟುಂ[ಬ]. ಹೇಗಾದರೂ ಸರಿ, ಪಕ್ಷ ಬಲಿಯಾದರೂ ಪರವಾಗಿ[ಲ್ಲ] ಮುಖ್ಯಮಂತ್ರಿಯಾಗಲೇಬೇಕೆಂದು. ಹೊರಟಿರು[ವ] ಯಡಿಯೂರಪ್ಪ ಸಂಪುಟ ಸಭೆ ನಡೆಸಿ ರೆಡ್ಡಿ, ಯತ್ನಾ[ಳ್] ಲಿಂಬಾವಳಿ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ದೆಹಲಿ[ಯ] ವಿಮಾನ ಹತ್ತಿದ್ದಾರೆ.

ಅಷ್ಟೊತ್ತಿಗಾಗಲೇ ಕರ್ನಾಟಕದಲ್ಲಿ ಪಕ್ಷದ ವಿದ್ಯಮಾನಗಳ ಬಗ್ಗೆ ವರದಿ ತರಿಸಿಕೊಂಡಿರುವ ಬಿಜೆಪಿ ಹೈಕಮಾಂಡ್ ಯಡ್ಡಿ ಮಾತು ಕೇಳಿದರೆ ಪಕ್ಷ ಇಬ್ಭಾಗವಾಗುವುದನ್ನು ಖಾತರಿಪಡಿಸಿಕೊಂಡಿದೆ. ಈ ಯುದ್ಧದಲ್ಲಿ ಯಾವ ಬಣ ಗೆದ್ದರೂ, ಬಿಜೆಪಿ ನಾಶವಾಗುವುದಂತೂ ಖಚಿತ.



ಕವಿತಾಳ ವ್ಯವಹಾರಗಳು

ಜಯಹೇ ಹೊನ್ನಸಿರಿ!



ಕವಿತಾ ಬಿನ್ ಹೊನ್ನಪ್ಪರ ಕೃಪೆಯಿಂದ ಮೈಸೂರು ನಿವಾಸಿ ಶ್ರೀ ಕೆ.ಎಂ. ಹೊನ್ನಪ್ಪ ಮತ್ತು ಶ್ರೀಮತಿ ಜಯಮ್ಮ ಹೊನ್ನಪ್ಪ ದಂಪತಿಗಳು ಮೈಸೂರು ಮತ್ತು ಬೆಂಗಳೂರಿನ ಕೆಂಗೇರಿ ಹೋಬಳಿಗಳಲ್ಲಿ ಸುಮಾರು 55 ಎಕರೆ ಆಸ್ತಿ ಗಳಿಸಿದರಾ? ಮೂಲತಃ ಸಾಮಾನ್ಯ ರೈತ ಕುಟುಂಬದ ಹೊನ್ನಪ್ಪ ಜಯಮ್ಮ ದಂಪತಿಗಳ ಪುತ್ರಿ ಕವಿತಾ ಅಷ್ಟೊಂದು ಶ್ರೀಮಂತೆಯಾದದ್ದು ಹೇಗೆ?

ಉತ್ತರ: ಅವರು ಕೇವಲ ಕವಿತಾ ಬಿನ್ ಹೊನ್ನಪ್ಪ ಅಲ್ಲ; ಅವರೆಂದೋ ಕವಿತಾ ಕೊಂ ಬಾಲಕೃಷ್ಣೇಗೌಡ ಆಗಿಬಿಟ್ಟಿದ್ದಾರಲ್ಲವೇ? ಮಾಜಿ ಪ್ರಧಾನಿಯ ಸೊಸೆ ಕವಿತಾ ತಾವು 'ಗಳಿಸಿದ' ಹೊನ್ನಸಿರಿಯೆಲ್ಲವನ್ನೂ ಕೇವಲ ತಮ್ಮ ಅಥವಾ ಗಂಡನ ಹೆಸರಲ್ಲಿ ಬರೆಸಿಕೊಳ್ಳುವಷ್ಟು ಸ್ವಾರ್ಥಿಯೇ? No, ಅದಕ್ಕೇ ಅವರು ತಮ್ಮ ಮಾತಾಶ್ರೀ, ಪಿತೃಶ್ರೀಗಳ ಹೆಸರಲ್ಲಿ ಆಸ್ತಿ ಖರೀದಿಗಿಳಿಯುತ್ತಾರೆ.

ಇನ್‌ಕಂ ಟ್ಯಾಕ್ಸ್ ತಪ್ಪಿಸಲು, ತಮ್ಮ ಹೆಸರನ್ನು ಆದಷ್ಟು ಗೌಪ್ಯವಾಗಿಡಲು ಕವಿತಾರವರು ಅನುಸರಿಸುವ ಈ ಮಾತೃ-ಪಿತೃ 'ದೇಣಿಗೆ' ಕಾರ್ಯಕ್ರಮವೇ ಕುತೂಹಲಕಾರಿಯಾಗಿದೆ. ಕವಿತಾರವರು ತಮ್ಮ ಅಕೌಂಟನಿಂದ ಜಯಮ್ಮ ಅಥವಾ ಹೊನ್ನಪ್ಪರ ಹೆಸರಲ್ಲಿ ಚೆಕ್ ನೀಡುತ್ತಲೇ ಹೋಗುತ್ತಾರೆ. ಇತ್ತ ಜಯಮ್ಮ, ಹೊನ್ನಪ್ಪ ದಂಪತಿಗಳು ಭೂಮಿ ಖರೀದಿಸುತ್ತಲೇ ಬರುತ್ತಾರೆ. ಅಂದರೆ ಇದೆಲ್ಲ ಕವಿತಾ ಕೊಂ ಬಾಲಕೃಷ್ಣೇಗೌಡರ ಬೇನಾಮಿ ಆಸ್ತಿ ಅಷ್ಟೇ.

ಜಯಮ್ಮರು ಯಾವುದೋ ಆಸ್ತಿ ಖರೀದಿಸುವ ಮುನ್ನ ಕವಿತಾರ ಕರ್ನಾಟಕ ಬ್ಯಾಂಕ್ ಅಕೌಂಟ್, ಮಿನರ್ವ ಸರ್ಕಲ್ ಬ್ರ್ಯಾಂಚ್‌ನ ಎಸ್.ಬಿ. ಅಕೌಂಟ್ ನಂಬರ್ (0622500101310601) ನಿಂದ ಜಯಮ್ಮರಿಗೆ ಚೆಕ್ ವಿತರಣೆ ಆಗುತ್ತದೆ.

ಈ ಅಕೌಂಟನಿಂದ ಜಯಮ್ಮರಿಗೆ 20.3.2006 ರಂದು 27 ಲಕ್ಷ ರೂ.ಗಳ ಚೆಕ್ ದೊರೆಯುತ್ತದೆ. ನಂತರ 12.4.2006 ರಂದು 66 ಲಕ್ಷ ರೂ.ಗಳ ಚೆಕ್ ಸಿಗುತ್ತದೆ. ಅಂದೇ ಜಯಮ್ಮರು ಮೈಸೂರು ತಾಲ್ಲೂಕು ಇಲವಾಲ ಹೋಬಳಿಯ ಹುಯಿಲಾಳು ಗ್ರಾಮದಲ್ಲಿ 86 ಲಕ್ಷ ಮೊತ್ತದ ಭೂಮಿಯನ್ನು ರಿಜಿಸ್ಟ್ರೇಷನ್ ಮಾಡಿಸುತ್ತಾರೆ. ಪಿ.ಎಮ್. ವಿಜಯಕುಮಾರ್, ಪಿ.ಎಮ್. ಕುಶಾಕುಮಾರ್ ಎಂಬುವವರಿಂದ ಮಾರಲ್ಪಟ್ಟ ಸರ್ವೆ ನಂ. 214 ರಲ್ಲಿರುವ ಈ ಭೂಮಿಯ ವಿಸ್ತೀರ್ಣ ಸುಮಾರು 43 ಎಕರೆ ಮಾತ್ರ! ಅಂದೇ ಬೆಂಗಳೂರಿನ ಕೆಂಗೇರಿ ಹೋಬಳಿಯ ದೇವಗೆರೆ ಗ್ರಾಮದಲ್ಲಿ 2.27 ಎಕರೆ ಖರೀದಿಸುತ್ತಾರೆ.

ಅಂದಂತೆ ಸರ್ವೆ ನಂ. 9 ರಲ್ಲಿರುವ ಈ 2 ಎಕರೆ 27 ಗುಂಟೆ ಜಯಮ್ಮರಿಗೆ (I mean ಕವಿತಾರಿಗೆ!) ಅತ್ಯಮೂಲ್ಯ! ಏಕೆಂದರೆ 2002 ರ ಡಿಸೆಂಬರ್‌ನಲ್ಲಿ ಅವರು ಆ ಪ್ರದೇಶದಲ್ಲಿನ ಹತ್ತು ತುಂಡು ಭೂಮಿಗಳನ್ನು (ಒಟ್ಟು ವಿಸ್ತೀರ್ಣ ಸುಮಾರು 9 ಎಕರೆ) ಖರೀದಿಸಿರುತ್ತಾರೆ.

ಈ ಎಲ್ಲ ಹತ್ತು ತುಂಡು ಭೂಮಿಗಳ ಖರೀದಿ 2.12.2002 ರಂದು ನಡೆದು ಹೋಗುತ್ತದೆ. ನವೆಂಬರ್‌ನ ಅಂತ್ಯ ಡಿಸೆಂಬರ್‌ನ ಪ್ರಾರಂಭದಲ್ಲಿ ಕವಿತಾರ ಅಕೌಂಟನಿಂದ ಜಯಮ್ಮರಿಗೆ ಎಷ್ಟು ಚೆಕ್ ಸಂದಾಯವಾದವು? ಅವುಗಳ ಒಟ್ಟು ಮೊತ್ತ ಎಷ್ಟು?

ಇನ್ನೊಂದು ಆಸಕ್ತಿದಾಯಕ ವಿಷಯ ಗೊತ್ತಾ? ಇದೇ ಸರ್ವೆ ನಂ. 9 ರಲ್ಲಿ 2.20 ಎಕರೆ ಭೂಮಿ ಕವಿತಾ ತಂದೆ ಹೊನ್ನಪ್ಪರ ಹೆಸರಲ್ಲಿ ಮೊದಲೇ ಖರೀದಿಯಾಗಿರುತ್ತದೆ. ಸರ್ವೆ ನಂ. 6 ರಲ್ಲಿನ 2 ಎಕರೆ 14 ಗುಂಟೆಯೂ ಹೊನ್ನಪ್ಪರ ಆಸ್ತಿಯೇ!

ಚೆಕ್ ಟ್ರಾನ್ಸ್‌ಫರ್: ಚಕಾಚಕ್!

ಕವಿತಾ ಮೇಡಮ್ಮರ ಹಣಕಾಸು ವಹಿವಾಟು ಅರ್ಥ ಮಾಡಿಕೊಳ್ಳುವುದೇ ಕಷ್ಟ. ಅವರ ಅಕೌಂಟಿಂದ ಗಂಡ ಬಾಲಕೃಷ್ಣೇಗೌಡ, ಮೈದುನ ಡಾ. ಮುನ್ನಾಭಾಯಿ ರಮೇಶ್, ಕುಟುಂಬದ ಹಲವಾರು ಕಂಪನಿಗಳಲ್ಲದೆ ತಂದೆ-ತಾಯಿ ಹೊನ್ನಪ್ಪ ಜಯಮ್ಮರ ಹೆಸರಿಗೆ ಚೆಕ್‌ಗಳು ಚಕಾಚಕ್ ಪಾಸಾಗುತ್ತಲೇ ಇರುತ್ತವೆ.

ಇತ್ತೀಚೆಗೆ ಅಂದರೆ ಆಗಸ್ಟ್ 2 ರಂದು ಪುನಃ ಜಯಮ್ಮರಿಗೆ 6 ಲಕ್ಷ ರೂ. ಮೊತ್ತದ ಚೆಕ್ ಸಂದಾಯವಾಗುತ್ತದೆ. ಅದಿರಲಿ, ಜುಲೈ 21 ರಂದು ಜಯಮ್ಮನವರೇ ಕವಿತಾ ಅಕೌಂಟಿಗೆ 55 ಲಕ್ಷ ಜಮೆ ಮಾಡಿದ್ದಾರೆ! ಈ ಹಿಂದೆ ಏಪ್ರಿಲ್‌ನಲ್ಲೂ 10 ಲಕ್ಷ ಜಮೆ ಮಾಡಿದ್ದರು.

ಕವಿತಾರಿಂದ ತಾಯಿ ಜಯಮ್ಮರಿಗೆ ಜೂನ್ 22 ರಂದು 6 ಲಕ್ಷ 84 ಸಾವಿರ 399 ರೂ. ಮೌಲ್ಯದ ಚೆಕ್, ಏಪ್ರಿಲ್ 12 ರಂದು 66 ಲಕ್ಷ ರೂ. ಚೆಕ್ (ಅಂದೇ ಜಯಮ್ಮ 46 ಎಕರೆ ಭೂಮಿ ಖರೀದಿಸುತ್ತಾರಲ್ಲವೇ?) ಮಾರ್ಚ್ 20 ರಂದು 27 ಲಕ್ಷ ರೂ.ಗಳ ಚೆಕ್ ಸಂದಾಯವಾಗಿವೆ.

ಇವೆಲ್ಲಕ್ಕಿಂತ ಮುಖ್ಯವಾದುದು ಜೂನ್ 22 ರಂದು ಜಯಮ್ಮರಿಗೆ ಕವಿತಾ ನೀಡುವ ಚೆಕ್ ಉಡುಗೊರೆ! ಅದರ ಮೌಲ್ಯ 1 ಕೋಟಿ 10 ಲಕ್ಷ 4 ಸಾವಿರ ಮಾತ್ರ!! ಅಂದೇ ತಂದೆ ಹೊನ್ನಪ್ಪ ಪುತ್ರಿ ಕವಿತಾ ಅಕೌಂಟಿಗೆ 7 ಲಕ್ಷ ರೂ. ಜಮೆ ಮಾಡುತ್ತಾರೆ!!

ಅದ್ಯಾವುದೋ ಮೂಲದಿಂದ ಮಗಳಿಗೆ, ಮಗಳಿಂದ ಅಪ್ಪನಿಗೆ, ಅಪ್ಪನಿಂದ ಮಗಳಿಗೆ, ಮಗಳಿಂದ ತಾಯಿಗೆ, ತಾಯಿಯಿಂದ ಕಂದಾಯ ಇಲಾಖೆಗೆ.... ಚೆಕ್‌ಗಳು ಚಕಾಚಕ್ ಮೂವ್ ಆಗುತ್ತಲೇ ಇರುತ್ತವೆ. ಕವಿತಾರ ಆಸ್ತಿ ಖರೀದಿಯೇನೋ ಸಕ್ರಮವೇ ಇರಬಹುದು. ಆದರೆ ಅದಕ್ಕೆ ವ್ಯಯಿಸಿದ ಹಣ ಅಕ್ರಮವಾದುದು ಎಂಬುದು ನಿಚ್ಚಳ. ಏಕೆಂದರೆ ಕವಿತಾರ ವ್ಯವಹಾರಗಳೇ ಅಷ್ಟು ನಿಗೂಢವಾಗಿವೆ! ತಂದೆ-ತಾಯಿ ಹೆಸರಲ್ಲಿ ಬೇನಾಮಿ ಆಸ್ತಿ ಮಾಡಿದ ಕೀರ್ತಿ ಕವಿತಾರವರದ್ದು.

ಒಟ್ನಲ್ಲಿ ಇದು ಭೂಮಿಗೀತ... ಅಂದರೆ ಭೂಮಿಕವಿತ...

ಜಯಹೇ ಹೊನ್ನಸಿರಿ...

-ಮಲ್ಲಿ

ಅಗ್ರೀಮೆಂಟೂ, ಲೋನೂ ಒಂದೇ ದಿನ!

ಸಾಮಾನ್ಯವಾಗಿ ಯಾರೇ ಒಂದು ಆಸ್ತಿ ಖರೀದಿಸಲಿಚ್ಛಿಸಿ ಬ್ಯಾಂಕ್‌ನಲ್ಲಿ ಸಾಲ ಮಾಡಬೇಕೆಂದಿದ್ದರೆ ಅದಕ್ಕೆ ಹಲವು ಷರತ್ತುಗಳಿರುತ್ತವೆ. ಮೊದಲು ತಾವು ಖರೀದಿಸಬೇಕೆಂದಿರುವ ಆಸ್ತಿಯ ವಿವರ, ಮತ್ತು ಅದನ್ನು ಮಾರುತ್ತಿರುವವರೊಂದಿಗಿನ ಪೂರ್ವಭಾವಿ ಒಡಂಬಡಿಕೆ ಅಗತ್ಯವಾಗಿರುತ್ತವೆ. ಏಕೆಂದರೆ, ಆ ಆಸ್ತಿಯ ಮೌಲ್ಯ ಎಷ್ಟು? ಅದನ್ನು ಎಷ್ಟು ಮೊತ್ತಕ್ಕೆ ಖರೀದಿಸಲಾಗುತ್ತಿದೆ? ಬ್ಯಾಂಕಿನಿಂದ ಎಷ್ಟು ಸಾಲ ಕೊಡಬಹುದು? ಎಂದೆಲ್ಲ ನಿರ್ಧರಿಸುವುದೇ ಈ ಒಡಂಬಡಿಕೆಯ ಆಧಾರದ ಮೇಲೆ.

ಆದರೆ ದೇವೇಗೌಡರ ಫ್ಯಾಮಿಲಿಯ ಪ್ರಭಾವ ಎಂತಹದ್ದೆಂದರೆ, ವೈಟ್‌ಫೀಲ್ಡ್‌ನ ಆಸ್ತಿಯನ್ನು ಖರೀದಿಸುವುದೆಂದು ಆಗಸ್ಟ್ 12, 2005 ರಂದು ಅದರ ಜಿಪಿಎ ಹೋಲ್ಡರ್ ಮಿಲೆನಿಯಾ ರಿಯಾಲ್ಟರ್ಸ್‌ರವರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಅದೇ ದಿನ ಕರ್ನಾಟಕ ಬ್ಯಾಂಕಿನ ಮಿನರ್ವ ಬ್ರ್ಯಾಂಚ್ ಸಾಲವನ್ನು ಮಂಜೂರು ಮಾಡುತ್ತದೆ. ಅಷ್ಟೇ ಅಲ್ಲ, ಅದೇ ಆಗಸ್ಟ್ 12 ರ ದಿನಾಂಕ ಹೊಂದಿರುವ ಚೆಕ್‌ಗಳನ್ನು ಆಸ್ತಿ ಖರೀದಿಯ ಭಾಗವಾಗಿ ಗೌಡರ ಮನೆಯ 'ಸ್ತ್ರೀಶಕ್ತಿ' ಗುಂಪು ಮಿಲೆನಿಯಾ ರಿಯಾಲ್ಟರ್ಸ್‌ಗೆ ನೀಡಿಬಿಡುತ್ತದೆ!

ಇದಕ್ಕೆ ಇಪ್ಪತ್ತು ದಿನಗಳ ಮುನ್ನ (22.7.05) ಮೂವತ್ತು ಲಕ್ಷ ರೂಪಾಯಿಯನ್ನು ಮುಂಗಡವಾಗಿ ನೀಡಿದ್ದ ಗೌಡರ ಕುಟುಂಬದ ಮಹಿಳಾಮಣಿಗಳು ಅದೇ ಆಗಸ್ಟ್ 12 ರಂದು ತಲಾ ಐದೈದು ಕೋಟಿ ರೂಪಾಯಿಗಳನ್ನು ಕರ್ನಾಟಕ ಬ್ಯಾಂಕ್ ಚೆಕ್‌ಗಳನ್ನು ಕೊಟ್ಟೇ ಬಿಡುತ್ತಾರೆ.

ಸಾಮಾನ್ಯವಾಗಿ ಯಾವುದೇ ಬ್ಯಾಂಕ್ ಒಂದೆರಡು ಲಕ್ಷ ಸಾಲ ನೀಡುವುದಕ್ಕೆ ಒಂದು ತಿಂಗಳಾದರೂ ತೆಗೆದುಕೊಳ್ಳುತ್ತದೆ. ಯಾಕೆ ಸಾಲ, ಅದಕ್ಕೆಂದು ನೀವು ಒತ್ತೆ ನೀಡಬೇಕಿರುವ ಆಸ್ತಿಯ ಮೌಲ್ಯ, ಸಾಲವನ್ನು ತೀರಿಸಲು ನಿಮ್ಮ ಆದಾಯದ ಬಲ, ಇದೆಲ್ಲವನ್ನೂ ಕೂಲಂಕಷವಾಗಿ ಪರೀಕ್ಷಿಸಿದ ನಂತರವೇ ಬ್ಯಾಂಕ್‌ಗಳು ಸಾಲ ನೀಡುತ್ತವೆ.

ಆದರೆ ಗೌಡರ ಕುಟುಂಬ ಅದೇನು ತರ್ಕ, ಕುತರ್ಕ ಮಾಡಿತೋ.... ಇವರು 36,06,43,500 ರೂಪಾಯಿಗಳ ಆಸ್ತಿ ಖರೀದಿಸಲು ಒಪ್ಪಂದ ಮಾಡಿಕೊಂಡ ದಿನವೇ ಸಾಲ ಮಂಜೂರಾಗುತ್ತದೆ. ಆ ಹಣವನ್ನು ಉಪಯೋಗಿಸಿಕೊಂಡೇ ಅವರೆಲ್ಲ ಆಸ್ತಿಯನ್ನು ಖರೀದಿಸಿಯೂ ಬಿಡುತ್ತಾರೆ.

ಇದಪ್ಪಾ ಹೊಲಿಸ್, ಹೇಗಿದೆ ಬಲ ಅನ್ನೋದು?!

2 ಹೆಸರು, 4 ವಿಳಾಸ!

ದೇವೇಗೌಡರ ಹಿರಿಯ ಸೊಸೆ ಕವಿತಾ ಬಾಲಕೃಷ್ಣೇಗೌಡ ಹೇಗೆ ಬೇರೆಬೇರೆ ಭೂಮಿಗಳನ್ನು 'ಶ್ರೀಮತಿ ಎಚ್. ಕವಿತಾ' ಬಿನ್ ಹೊನ್ನಪ್ಪ ಅಂತಲೂ, 'ಶ್ರೀಮತಿ ಕವಿತಾ, ವೈಫ್ ಆಫ್ ಬಾಲಕೃಷ್ಣೇಗೌಡ' ಅಂತಲೂ ಖರೀದಿಸಿರುವುದು ಈಗ ಹಳೆಯ ವಿಷಯ. ಹೊಸ ವಿಷಯ ಏನೆಂದರೆ ಹೀಗೆ ತನ್ನ ಹೆಸರನ್ನು ಬೇಕಾದಂತೆ ಬದಲಾಯಿಸಿದ ಕವಿತಾ ತನ್ನ ವಿಳಾಸಗಳನ್ನೂ ಬದಲಾಯಿಸಿ, ಇಷ್ಟೆಲ್ಲ ಆಸ್ತಿ ಖರೀದಿಸಿರುವುದು ಬೇರೆಬೇರೆ ವ್ಯಕ್ತಿಗಳು ಎಂಬಂತೆ ತೋರಿಸಲು ಹೆಣಗಾಡಿರುವುದು.

ಉದಾಹರಣೆಗೆ ಅಕ್ಟೋಬರ್ 19, 2005 ರಲ್ಲಿ ಬೆಂಗಳೂರಿನ ಬದರಹಳ್ಳಿಯ ಸರ್ವೇ ನಂ. 97 ರ ಭೂಮಿಯನ್ನು ಖರೀದಿಸಿದ 'ಕವಿತಾ.ಎಚ್' ತಾನು ಕೆ.ಎಂ. ಹೊನ್ನಪ್ಪನವರ ಮಗಳೆಂದೂ, ತನ್ನ ವಿಳಾಸ 1239, 6 ನೇ ಕ್ರಾಸ್, ಚಂದ್ರಾಲೇಔಟ್, ಬೆಂಗಳೂರು 40 ಎಂದೂ ನಮೂದಿಸಿದ್ದಾರೆ. ಇದಾದ ಎರಡು ತಿಂಗಳ ನಂತರ ಅದೇ ಬದರಿಹಳ್ಳಿಯಲ್ಲಿ ಮತ್ತೊಂದು ಭೂಮಿ ಖರೀದಿಸಿದಾಗ ತನ್ನ ಹೆಸರನ್ನು 'ಎಚ್. ಕವಿತಾ' ಎಂದು ದಾಖಲಿಸಿ, ತಾನು ವಾಸಿಸುತ್ತಿರುವುದು 185, 7 ನೇ ಕ್ರಾಸ್, ಬಾಪೂಜಿ ಲೇಔಟ್, ವಿಜಯನಗರ, ಬೆಂಗಳೂರು ಎಂದು ನೀಡಿದ್ದಾರೆ.

ಹೀಗೆ ಹೆಸರಿನಲ್ಲಿನ ಇನಿಷಿಯಲ್ ಅನ್ನು ಹಿಂದೆ, ಮುಂದೆ ಮಾಡುವ ಕವಿತಾ ಮೂರು ತಿಂಗಳ ನಂತರ ವೈಟ್‌ಫೀಲ್ಡ್‌ನ ಕಟ್ಟಡವನ್ನು ಗೌಡರ ಕುಟುಂಬದ ಇತರೆ ಮಹಿಳೆಯರೊಂದಿಗೆ ಖರೀದಿಸುವಾಗ ತಾನು ಎಚ್.ಡಿ. ಬಾಲಕೃಷ್ಣೇ ಗೌಡರ ಪತ್ನಿಯೆಂದೂ, ತಾನು 12, 80 ಫೀಟ್ ರೋಡ್, ಬೆಂಗಳೂರಿನಲ್ಲಿ ವಾಸಿಸುತ್ತಿದ್ದೇನೆಂದೂ ದಾಖಲಿಸಿದ್ದಾರೆ.

ವೈಟ್‌ಫೀಲ್ಡ್ ಆಸ್ತಿಯ ಖರೀದಿಯ ನಂತರ ಮತ್ತೆ 'ಕೆ.ಎಂ. ಹೊನ್ನಪ್ಪನವರ ಮಗಳಾಗಿರುವ ಎಚ್. ಕವಿತಾ, ಎಲ್. ನರೋನ ಎಂಬ ಕಿಡಿಗೇಡಿಯಿಂದ 2006 ರ ಜೂನ್ ತಿಂಗಳಲ್ಲಿ ಶ್ರೀರಂಗಪಟ್ಟಣದ ಆಸ್ತಿಯನ್ನು ಖರೀದಿಸುವಾಗ ತಾನು 277, 2 ನೇ ಕ್ರಾಸ್, ಮಾನಸಾ ರಸ್ತೆ, ಇಂದಿರಾ ನಗರ, ಮೈಸೂರು-ಇಲ್ಲಿ ವಾಸಿಸುತ್ತಿದ್ದೇನೆಂದು ಹೇಳುತ್ತಾರೆ.

ಕವಿತಾ ಎಂಬುದು ಸಾಮಾನ್ಯ ಹೆಸರಾಗಿರುವುದರಿಂದ, ಹೀಗೆ ಬೇರೆ ಬೇರೆ ವಿಳಾಸಗಳನ್ನು ನೀಡಿ, ಅಷ್ಟೆಲ್ಲ ಆಸ್ತಿಯನ್ನು ಖರೀದಿಸಿರುವವರು ಬೇರೆ ಬೇರೆ ಕವಿತಾಗಳು ಎಂಬಂತೆ ತೋರಿಸಲು ಪ್ರಯತ್ನಿಸಿದ್ದಾರೆ.

ಇದು ಕಪಟತನವಲ್ಲದೆ ಮತ್ತೇನು?

ಕಪ್ಪುಹಣ: ಸಾಬೀತಾದರೆ ಜೈಲು

ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ಸದಸ್ಯರು ಗಣಿ ಮಾಲೀಕರು, ಅದಿರು ಸಾಗಣೆದಾರರು ಮತ್ತು ರಫ್ತುದಾರರಿಂದ 150 ಕೋಟಿ ರೂಪಾಯಿ ಹಣವನ್ನು ಅಕ್ರಮವಾಗಿ ಪಡೆದಿದ್ದಾರೆಂಬುದು ಈಗ ಜಗಜ್ಜಾಹೀರ. ಈ ಆರೋಪದ ಬೆನ್ನಲ್ಲೇ ಗೌಡರ ಕುಟುಂಬದ ಸದಸ್ಯರು ರಾಜ್ಯದ ವಿವಿಧ ಭಾಗಗಳಲ್ಲಿ ಖರೀದಿಸುತ್ತಿರುವ ಜಮೀನು ಮತ್ತು ಆಸ್ತಿಗಳನ್ನು ನೋಡಿದರೆ ಮೇಲ್ನೋಟಕ್ಕೆ ಈ ಆರೋಪ ನಿಜ ಎಂದು ಯಾವ ಪ್ರಜ್ಞಾವಂತನೂ ಒಪ್ಪಲೇ ಬೇಕು. ಗೌಡರ ಕುಟುಂಬದಲ್ಲಿ, ಅದರಲ್ಲೂ ದೇವೇಗೌಡರ ಹಿರಿಯ ಸೊಸೆ ಕವಿತಾ ಬಾಲಕೃಷ್ಣೇಗೌಡರ ಹೆಸರಿನಲ್ಲಿ ಅತ್ಯಧಿಕವಾಗಿ ಆಸ್ತಿ ಖರೀದಿಯಾಗಿದೆ. ಭಾರತೀಯ ಜನತಾ ಪಕ್ಷದ ಅಮಾನತ್ತಿನಲ್ಲಿರುವ ಶಾಸಕ ಜನಾರ್ಧನ ರೆಡ್ಡಿ ಮತ್ತು 'ಲಂಕೇಶ್' ಮೂಲಕ ಈ 150 ಕೋಟಿ ರೂಪಾಯಿ ಹಗರಣ ಮತ್ತು ಆಸ್ತಿ ಖರೀದಿಯ ಪ್ರಕರಣ ಬಹಿರಂಗಗೊಳ್ಳುತ್ತಿದ್ದಂತೆ ಬಾಚಿದ ಕಪ್ಪು ಹಣಕ್ಕೆ ಬಿಳಿ ಬಣ್ಣ ಹಚ್ಚುವ, ಖರೀದಿಸಿದ ಆಸ್ತಿಯನ್ನು ಬಂಧು-ಬಾಂಧವರ ಹೆಸರಿಗೆ ನೊಂದಾಯಿಸಿ, ನಮ್ಮಲ್ಲಿರುವುದೆಲ್ಲ ವೈಟ್ ಮನಿ ಮತ್ತು ವೈಟ್ ಆಸ್ತಿ ಎಂದು ನಂಬಿಸುವ ಕಾರ್ಯಾಚರಣೆಗೆ ಗೌಡರ ಕುಟುಂಬ ಇಳಿದಿದೆ. ಆದರೆ ಅದು ಅಷ್ಟು ಸುಲಭವಲ್ಲ. ಈ ಹಗರಣದ ಬಗ್ಗೆ ಸಿಬಿಐನಂತಹ ಸಂಸ್ಥೆಯಿಂದ ತೀವ್ರ ತನಿಖೆ ನಡೆದರೆ ಕಾನೂನಿನ ಪ್ರಕಾರ ಗೌಡರ ಕುಟುಂಬ, ಅದರಲ್ಲೂ ಕವಿತಾ ಬಾಲಕೃಷ್ಣೇಗೌಡ, ಎದುರಿಸಬಹುದಾದ ಶಿಕ್ಷೆಯನ್ನು ನೋಡಿ.

ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಪರಿವರ್ತಿಸುವ ತಡೆಗಟ್ಟುವಿಕೆ ಕಾಯ್ದೆ 2002 ಸೆಕ್ಷನ್ 3 ಮತ್ತು 4 ರಲ್ಲಿ ಈ ಬಗ್ಗೆ ವ್ಯಾಖ್ಯಾನಿಸಲಾಗಿದೆ. (Prevention Of Money Laundering Act, 2002) ಈ ಕಾಯ್ದೆಯ ಪ್ರಕಾರ ಯಾರೇ ಆಗಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಕ್ರಮವಾಗಿ ಗಳಿಸಿದ ಕಪ್ಪು ಹಣವನ್ನು ಅಧಿಕೃತವಾಗಿ ಅಥವಾ ನಿಯಮಬದ್ಧವಾಗಿ ಗಳಿಸಿದ ಹಣ ಎಂದು ಪ್ರತಿಪಾದಿಸಲು ಹೊರಟರೆ ಅಥವಾ ಅಂತಹವರಿಗೆ ಸಹಾಯ ಮಾಡಿದವರೆ ಅವರನ್ನು ಸಹ ಸೆಕ್ಷನ್ 3 ರ ಪ್ರಕಾರ ಆರೋಪಿಯೆಂದು ಪರಿಗಣಿಸಲಾಗುತ್ತದೆ.

ಇಂತಹ ಆರೋಪವು ಸಾಬೀತಾದಲ್ಲಿ ಸೆಕ್ಷನ್ 4 ರ ಪ್ರಕಾರ ಕನಿಷ್ಠ 3 ವರ್ಷದಿಂದ ಗರಿಷ್ಠ 7 ವರ್ಷದವರೆಗೆ ಜೈಲು ಶಿಕ್ಷೆ ನೀಡಬಹುದು. ಅದರ ಜೊತೆಗೆ 5 ಲಕ್ಷ ರೂಪಾಯಿವರೆಗೆ ದಂಡ ವಿಧಿಸಬಹುದು. ಇದರಲ್ಲಿ ಕಪ್ಪುಹಣವನ್ನು ಬಿಳಿ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿರುವ ಕವಿತಾ, ಅವರ ತಂದೆ ಹೊನಪ್ಪ, ತಾಯಿ ಜಯಮ್ಮ, ಕವಿತಾ ಚಿಕ್ಕಮ್ಮ ಶಶಿಕಲಾರವರ ಪುತ್ರ ಬಿ.ಎಸ್. ಪ್ರಸನ್ನಕುಮಾರ್, ಜಯಮ್ಮರವರ ಅಣ್ಣನ ಮಗ ವಿಜಂತ್ ಇವರೂ ಸೇರಿದಂತೆ ದಾನ ಶಿಖಾಮಣಿ ಜಾಕೋಬ್ ವರ್ಗೀಸ್ ಮತ್ತು ಶಾರದಮ್ಮ ಸಹ ಸೆಕ್ಷನ್ 3 ರ ಪ್ರಕಾರ ಶಿಕ್ಷೆಗೆ ಒಳಗಾಗುತ್ತಾರೆ.

ಏಕೆಂದರೆ ಈ ಬಂಧು ಭಾಂಧವ ಬ್ಯಾಂಕ್ ಅಕೌಂಟ್‌ಗಳಿಗೆಲ್ಲಾ ಕವಿತಾರ ಕಪ್ಪು ಹಣ ಹರಿದು ಹೋಗಿದೆ. ಈ ಬಂಧುಗಳ ಹೆಸರಲ್ಲಿ ಆಸ್ತಿಗಳು ರಿಜಿಸ್ಟರ್ ಆಗಿದೆ. ಇವರಲ್ಲದೆ, ಪ್ರಿವೆನ್‌ಷನ್ ಆಫ್ ಮನಿ ಲಾಂಡರಿಂಗ್ ಆಕ್ಟ್ ಪ್ರಕಾರ ಕರ್ನಾಟಕ ಬ್ಯಾಂಕ್ ಕೂಡ ಆರೋಪಿ ಸ್ಥಾನದಲ್ಲಿ ನಿಲ್ಲುತ್ತದೆ. ಬೆಂಗಳೂರಿನ ವೈಟ್‌ಫೀಲ್ಡ್ ಸಮೀಪ ಸುಮಾರು 195 ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿರುವ ಬೃಹತ್ ಕಟ್ಟಡವನ್ನು ಖರೀದಿಸಿರುವ ಗೌಡರ ಕುಟುಂಬ ಮಾರಾಟ ಒಪ್ಪಂದ (ಸೇಲ್ ಡೀಡ್)ದಲ್ಲಿ ಬೆಲೆಯನ್ನು 33 ಕೋಟಿ ರೂಪಾಯಿ ಎಂದು ನಮೂದಿಸಿ, "ಅಪಮೌಲ್ಯ" ಕಾಯ್ದೆಯನ್ನು ಉಲ್ಲಂಘಿಸಿದೆ. ಈ ಕಟ್ಟಡಕ್ಕೆ ಕರ್ನಾಟಕ ಬ್ಯಾಂಕು ಬೇನಾಮಿ ಎಫ್.ಡಿ.ಆರ್. (ಫಿಕ್ಸೆಡ್ ಡಿಪಾಸಿಟ್ ರಸೀದಿ) ಅಂದರೆ ಬೇರೆಯವರ ಹೆಸರಿನಲ್ಲಿರುವ ಠೇವಣಿಯ ಆಧಾರದ ಮೇಲೆ 30 ಕೋಟಿ ರೂಪಾಯಿ ಅವಧಿ ಆಧಾರಿತ (ಲಿಮಿಟೆಡ್ ಪಿರಿಯೆಡ್) ಸಾಲ ನೀಡಿದೆ. ಬೇರೆಯವರು ಇಟ್ಟಿರುವ ಠೇವಣಿ ಆಧಾರದ ಮೇಲೆ ಮತ್ತೊಬ್ಬರಿಗೆ ಸಾಲ ನೀಡುವ ಈ ಕ್ರಮ ಬ್ಯಾಂಕಿಂಗ್ ಪದ್ಧತಿಯಲ್ಲ, ಇದು ರಿಸರ್ವ್ ಬ್ಯಾಂಕ್ ನಿಯಮಾವಳಿಗೆ ವಿರುದ್ಧ. ಇಂತಹ ಒಂದು ವ್ಯವಹಾರ ಈಗ ನಾನಾ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ.

ಸ್ತ್ರೀಶಕ್ತಿಯ ಸೀರೆ ಖರೀದಿ ಪರಿ!

ಗೌಡರ ಕುಟುಂಬದ ಸ್ತ್ರೀಶಕ್ತಿಯ ಬಿಸಿನೆಸ್ ವುಮನ್‌ಗಳ ಕೈಲಿ ಈಗ ಹಣ ಹೇಗೆ ಥಕಥೈ ಎಂದು ಕುಣಿಯುತ್ತಿದೆಯೆಂಬುದಕ್ಕೆ ಇದೊಂದು ಉದಾಹರಣೆ. ಕಮರ್ಷಿಯಲ್ ಸ್ಟ್ರೀಟ್‌ನಲ್ಲಿರುವ ಪ್ರತಿಷ್ಠಿತ ಸೀರೆ ಮಳಿಗೆಯೊಂದರ ಸೇಲ್ಸ್‌ಗರ್ಲ್ ಒಬ್ಬರು ಹೇಳುತ್ತಾರೆ. ಗೌಡರ ಕುಟುಂಬದ ಸ್ತ್ರೀಶಕ್ತಿ ಮಳಿಗೆಗೆ ಬಂದರೆ, ಬೇರೆ ಸ್ತ್ರೀಯರಂತೆ ಸೆಲೆಕ್ಷನ್‌ಗಾಗಿ ಗಂಟೆಗಟ್ಟಲೆ ವ್ಯರ್ಥ ಮಾಡುವುದಿಲ್ಲವಂತೆ. ಅವರದೇನಿದ್ದರು ಫೈ ಮಿನಿಟ್ಸ್ ಶಾಪಿಂಗ್! ಈ ಸೀರೆ ಎಷ್ಟು? 5 ಸಾವಿರ. ಆ ಸೀರೆ ಎಷ್ಟು? 10 ಸಾವಿರ. ಅದೆಷ್ಟು? 25 ಸಾವಿರ. ನಿಮ್ಮಲ್ಲಿ ಹೈಯಸ್ಟ್ ರೇಂಜ್ ಇದೆಯಾ? ಇಲ್ಲಾ ಮೇಡಂ. 55 ಸಾವಿರದ್ದು ಇದೆ. ಹಾಗಾದ್ರೆ ಬೇರೆ ಬೇರೆ ಬಣ್ಣದ 55 ಸಾವಿರ ರೂಪಾಯಿಯ ಒಂದ್ 5 ಸೀರೆನ ಪ್ಯಾಕ್ ಮಾಡಿ. ಪರ್ಚೇಸಿಂಗ್ ಓವರ್. ಬಿಲ್ ಪೇಯ್ಡ್!!

ಕವಿತಕ್ಕ ಒಂದೇ ದಿನ 'ಗಂಜಾಂ ನಾಗಪ್ಪ ಅಂಡ್ ಸನ್ಸ್' ಎಂಬ ಚಿನ್ನಾಭರಣ ಅಂಗಡಿಯಲ್ಲಿ ಆಭರಣ ಖರೀದಿಸಿದ್ದನ್ನು ನೋಡಿ. ಒಟ್ಟು ಏಳು ಲಕ್ಷ ಬಿಲ್ಲು, ಚೆಕ್ ಪೇಮೆಂಟು; ಯಥಾಪ್ರಕಾರ ಚೆಕ್ಕು ಕರ್ನಾಟಕ ಬ್ಯಾಂಕಿಂದು (ನಂ. 104142 ದಿನಾಂಕ 27.4.2006).

ಗೌಡರ ರಿಸರ್ವ್ ಬ್ಯಾಂಕ್!

ಓದಿರುವುದು ಜುಜುಬಿ ಪಿಯುಸಿ. ಹುಟ್ಟಿ ಬೆಳೆದಿದ್ದು ಟಿ. ನರಸೀಪುರ ತಾಲ್ಲೂಕಿನ ಕೊಡಿಗಳ್ಳಿಯಲ್ಲಿ. ಇವತ್ತು ಮಣ್ಣಿನ ಮಗ ದೇವೇಗೌಡರ ರಿಸರ್ವ್ ಬ್ಯಾಂಕ್ ಎಂದೇ ಬ್ರಾಂಡ್ ಆಗಿರುವ ಸೊಸೆ ಕವಿತಾ ಬಾಲಕೃಷ್ಣೇಗೌಡ ಇಡೀ ಕರ್ನಾಟಕದ ಭೂಗಳ್ಳರ ಪಡೆಯೇ ಶಾಕ್ ಆಗುವಷ್ಟು ವೇಗವಾಗಿ ಬೆಳೆದಿದ್ದಾರೆ. ತಕ್ಕಮಟ್ಟಿಗಿನ ಅನುಕೂಲಸ್ಥ ರೈತ ಕುಟುಂಬದಿಂದ ಬಂದಿರುವ ಕವಿತಾ 2005 ರ ವರೆಗೂ ರಾಗಿ ಮುದ್ದೆ ತಿರುವಿಕೊಂಡಿದ್ದವಳು ಈಗ ರಾತ್ರೋರಾತ್ರಿ ಯಶಸ್ವಿ ರಿಯಲ್ ಎಸ್ಟೇಟ್ ಬ್ಯುಸಿನೆಸ್ ವುಮೆನ್ ಆಗಿ ರೂಪಾಂತರಗೊಳ್ಳಲು ಗೌಡರ ಮಕ್ಕಳ ಹಗಲು ದರೋಡೆ, ಭ್ರಷ್ಟಾಚಾರಗಳೇ ಪ್ರೇರಣೆಯಾಗಿವೆ.

ಮೊನ್ನೆ ಬಳ್ಳಾರಿಯಲ್ಲಿ ಜನಾರ್ಧನ ರೆಡ್ಡಿ ಬಿಡುಗಡೆ ಮಾಡಿರುವ ಕವಿತಾಳ ಬ್ಯಾಂಕ್ ವ್ಯವಹಾರಗಳನ್ನು ಪರಿಶೀಲಿಸುತ್ತಾ ಹೋದರೆ ದಿಗ್ಭ್ರಮೆಯಾಗುತ್ತದೆ. ಕೇವಲ 2005 ರ ಜನವರಿಯಿಂದ 2006 ರ ಜುಲೈವರೆಗೆ 18 ತಿಂಗಳಲ್ಲಿ ಕವಿತಾ ಅಕೌಂಟಿಗೆ 40 ಕೋಟಿ ರೂ. ಬಂದುಬಿದ್ದಿವೆ. ಈ ಪೈಕಿ ಆ ಹಣವೆಲ್ಲಾ ಬಂದಷ್ಟೇ

ಬಳಿದಾಳೆ ಈಶ

ವೇಗವಾಗಿ ಭೂಮಿ ಖರೀದಿಗೆಂದು ನಾನಾ ದಿಕ್ಕುಗಳಲ್ಲಿ ಹಂಚಿಯೂ ಹೋಗಿದೆ. ಬೆಂಗಳೂರು ನಗರ, ಹೊರ ವಲಯ, ಮಂಡ್ಯ, ಮೈಸೂರುಗಳಲ್ಲಿ ಕವಿತಾ ಇದುವರೆಗೂ ಖರೀದಿಸಿರುವ ಭೂಮಿಯ ಇವತ್ತಿನ ಒಟ್ಟಾರೆ ಬೆಲೆ ಎಷ್ಟಾಗಬಹುದು ಗೊತ್ತೆ?

700 ಕೋಟಿ ರೂಪಾಯಿ!!!

ಆಂಧ್ರಾ ಬ್ಯಾಂಕ್, ವೈಶ್ಯಾ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಯೂನಿಯನ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಕೆನರಾ ಬ್ಯಾಂಕ್‌ಗಳಲ್ಲೂ ಭಾರೀ ಮೊತ್ತದ ವಹಿವಾಟು ನಡೆಸಿರುವ ಕವಿತಾರ ಹಣಕಾಸಿನ ಪ್ರಧಾನ ಧಂದೆ ನಡೆದಿರುವುದು ಬೆಂಗಳೂರಿನ ಮಿನರ್ವ ಸರ್ಕಲ್ ಹತ್ತಿರದ ಕರ್ನಾಟಕ ಬ್ಯಾಂಕಿನಲ್ಲಿ. ಓಡಿ ಅಕೌಂಟ್ ನಂಬರ್ 062700100404201, ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ನಂಬರ್ 0622500101310601 ರಲ್ಲಿ ನಡೆದಿರುವ ವ್ಯವಹಾರಗಳಂತೂ ಸಿಬಿಐ ಇರಲಿ ಸಾಕ್ಷಾತ್ ಬ್ರಹ್ಮನೇ ಬಂದರೂ ಸರಳವಾಗಿ ಅರ್ಥವಾಗದಂತಿವೆ.

ಕಳೆದ 4 ಸಂಚಿಕೆಗಳಲ್ಲಿ ಕವಿತಾರ ಅಕ್ರಮ ರಿಯಲ್ ಎಸ್ಟೇಟ್ ಡೀಲ್‌ಗಳ ವಿವರಗಳನ್ನು ತನಿಖೆ ಮಾಡಿ ಪ್ರಕಟಿಸಿದ್ದ 'ಲಂಕೇಶ್' ವರದಿಗಳಿಗೆ ಇನ್ನಷ್ಟು ಸಮರ್ಥನೆ ನೀಡುವಂತಿವೆ ರೆಡ್ಡಿ ಬಹಿರಂಗಗೊಳಿಸಿರುವ ದಾಖಲೆಗಳು.

ಬೆಂಗಳೂರು, ಮೈಸೂರುಗಳಲ್ಲಲ್ಲದೆ ಬೆಂಗಳೂರು ಸಿಟಿಯೊಳಗೆಯೇ ಕವಿತಾ ಭಾರಿ ಕಟ್ಟಡಗಳನ್ನು ಖರೀದಿಸಲು ಕೋಟಿಗಟ್ಟಲೆ ಹಣ ಹರಿಸಿದ್ದಾರೆ.

ಪ್ರೆಸ್ಟೇಜ್ ಎಸ್ಟೇಟ್ ಎಂಬುವರಿಗೆ ದಿನಾಂಕ 9.9.2005 ರಂದು ಎರಡು ಚೆಕ್‌ಗಳ ಮೂಲಕ (ನಂ. 839961, 839962) ಹತ್ತು ಲಕ್ಷ ರೂ. ಪಾವತಿಸಿದ್ದಾರೆ ಕವಿತಾ. ಬೆಂಗಳೂರಿನಲ್ಲಿ ಪ್ರೆಸ್ಟೇಜ್ ಹೆಸರಿನ ಹಲವಾರು ಕಟ್ಟಡಗಳಿವೆ. ಅವುಗಳಲ್ಲಿ ಒಂದು ರಿಚ್ಮಂಡ್ ಸರ್ಕಲ್‌ನಲ್ಲಿದ್ದರೆ ಇನ್ನೊಂದು ಕಬ್ಬನ್ ಪಾರ್ಕ್ ಪೊಲೀಸ್ ಸ್ಟೇಷನ್ ಎದುರಿಗೆ ಜುಯೆಲ್ಸ್ ದಿ ಪ್ಯಾರಾಗಾನ್ ಹಿಂಭಾಗದಲ್ಲಿದೆ. ಬಹುಪಾಲು ಕವಿತಾ ಖರೀದಿಸಿರುವುದು ಕಬ್ಬನ್ ಪಾರ್ಕ್ ಹತ್ತಿರದ ಕಟ್ಟಡ ಅಥವಾ ಅವರ ಒಂದು ಭಾಗವನ್ನಿರಬೇಕು. ಕವಿತಾರ ಡೀಲ್‌ಗಳು ಇಷ್ಟಕ್ಕೇ ಮುಗಿಯುವುದಿಲ್ಲ, ಕವಿತಾರ ಮಾವ ಕೃಷ್ಣೇಗೌಡರ ಮಗ ವಿಜಯಕುಮಾರನ ಹೆಸರಿನಲ್ಲಿ ಮೈಸೂರು ಸುತ್ತಮುತ್ತ ಭಾರಿ ಭೂ ಖರೀದಿ ಮಾಡಿರುವ ಕವಿತಾ ತನ್ನ ಬ್ಯಾಂಕ್ ಅಕೌಂಟಿನಿಂದಲೇ ವಿಜಯಕುಮಾರನಿಗೆ ಹಣ ಪಾವತಿಸಲು ಚೆಕ್ ಕೊಟ್ಟಿದ್ದಾರೆ. ದಿನಾಂಕ 25.5.05 ಹಾಗೂ 3.12.05 ಚೆಕ್ 116449 ರ ಮೂಲಕ 27.25 ಲಕ್ಷ ಮತ್ತೆ 3.12.2005 ರಲ್ಲಿ 25 ಲಕ್ಷ ವಿಜಯಕುಮಾರ್‌ಗೆ ತಲುಪಿದೆ.


ಕವಿತಾ

ಈ ಕವಿತಾ ಎಂತಾ ಕಿಲಾಡಿ ಹೆಂಗಸೆಂದರೆ 'ಲಂಕೇಶ್'ನಲ್ಲಿ ಆಕೆಯ ಶ್ರೀರಂಗಪಟ್ಟಣದ ಬ್ರಹ್ಮಪುರ ಭೂ ಖರೀದಿಯ ವರದಿ ಪ್ರಕಟವಾಗುತ್ತಿದ್ದಂತೆ ಗಡಿಬಿಡಿಯಿಂದ ಓಡಿ ರಿಜಿಸ್ಟ್ರೇಷನ್ ರದ್ದು ಮಾಡಿ ಜಮೀನನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಿದ್ದರು. ಆದರೆ ಅದರ ಮಾರನೇ ದಿನವೇ ಅದೇ ಜಮೀನು ಬಿ.ಎಸ್. ಪ್ರಸನ್ನಕುಮಾರ್ ಹೆಸರಿನಲ್ಲಿ ರಿಜಿಸ್ಟರ್ ಆಯಿತು. ಈ ಮಹಾನುಭಾವ ಬೇರೆ ಯಾರೂ ಅಲ್ಲ, ಕವಿತಾರ ಚಿಕ್ಕಮ್ಮ ಶಶಿಕಲಾರ ಮಗ. ಕವಿತಾಗೂ ಈ ಪ್ರಸನ್ನಕುಮಾರ್‌ಗೂ ನಿಗೂಢ ಹಣಕಾಸಿನ ಸಂಬಂಧಗಳಿವೆ. ಇದಕ್ಕೆ ಸಾಕ್ಷಿ ಎಂಬಂತೆ ಕವಿತಾರ ಅದೇ ಕರ್ನಾಟಕ ಬ್ಯಾಂಕ್‌ನಿಂದ 10.9.2005 ರಲ್ಲಿ 15 ಲಕ್ಷ ರೂ (ಚೆಕ್ ನಂ. 116702) ಹಾಗೂ 1.6.2006 ರಲ್ಲಿ 6 ಲಕ್ಷ ರೂಪಾಯಿ ಪ್ರಸನ್ನನಿಗೆ ಸಂದಾಯವಾಗಿದೆ. ಈ ಮಧ್ಯೆ ಪ್ರಸನ್ನ ದಿನಾಂಕ 2006 ಮಾರ್ಚ್ 29 ರಂದು ಕವಿತಾ ಅಕೌಂಟಿಗೆ 20 ಲಕ್ಷ ತುಂಬುತ್ತಾನೆ. ಇದು, ಕೇವಲ 6 ತಿಂಗಳ ಹಿಂದೆ ಕವಿತಾ ಕೊಟ್ಟಿದ್ದ 15 ಲಕ್ಷಕ್ಕೆ ಬಡ್ಡಿ ಸೇರಿಸಿ ಪ್ರಸನ್ನ ವಾಪಸ್ ಮಾಡಿರುವ ಮೊತ್ತವಾ ಅಥವಾ ಬೇರೆಲ್ಲೋ ತೊಡಗಿಸಿ ಲಾಭ ಸಹಿತ ವಾಪಸ್ ಬಂದ ಹಣವಾ ತನಿಖೆಯಾಗಬೇಕಿದೆ.

ಕವಿತಾರ ಇನ್ನೊಂದು ಪ್ರಮುಖ ಲ್ಯಾಂಡ್ ಡೀಲ್ ನಡೆದಿರುವುದು ಬೆಂಗಳೂರಿನ ಗೋಲ್ಡನ್ ಗೇಟ್ ಜೊತೆ. 2006 ರ ಮಾರ್ಚ್ ತಿಂಗಳಿನ 15 ಹಾಗೂ 23 ನೇ ತಾರೀಖಿನ ನಡುವೆ ಕೇವಲ 8 ದಿನದಲ್ಲಿ ಗೋಲ್ಡನ ಗೇಟನವರಿಗೆ ಕವಿತಾ ತಿಜೋರಿಯಿಂದ 3 ಕೋಟಿ 75 ಲಕ್ಷ ಹರಿದು ಹೋಗಿದೆ. ಈ ಹಣ ಎಲ್ಲಿಂದ ಬಂತು, ಗೋಲ್ಡನ್ ಗೇಟಿಗೆ ಯಾಕೆ ಕೊಡಲಾಯಿತು?

ಇದೂ ತನಿಖೆಗೆ ಯೋಗ್ಯವಾದ ಸಂಗತಿ. ಇದಿಷ್ಟೇ ಅಲ್ಲ, ಸ್ವತಃ ತನ್ನ ಗಂಡ ಬಾಲಕೃಷ್ಣೇಗೌಡನಿಗೆ ಕವಿತಾ 2005 ರ ಸೆಪ್ಟೆಂಬರ್-ನವೆಂಬರ್ ಅವಧಿಯಲ್ಲಿ 65 ಲಕ್ಷ ರೂಪಾಯಿ ವರ್ಗಾಯಿಸಿದ್ದಾರೆ. ದೇವೇಗೌಡರ ಸುಪುತ್ರ ಡಾ. ಎಚ್.ಡಿ. ರಮೇಶ್‌ಗೆ 2006 ರ ಜನವರಿಯಲ್ಲಿ 5 ಲಕ್ಷ, ಆಗಸ್ಟ್‌ನಲ್ಲಿ 50 ಲಕ್ಷ ಕೊಟ್ಟಿದ್ದಾರೆ ಕವಿತಾ.

ಈಕೆಯ ರಿಯಲ್ ಎಸ್ಟೇಟ್ ಲಿಂಕ್‌ಗಳು ಇಲ್ಲಿಗೂ ಮುಗಿಯುವುದಿಲ್ಲ. ಕವಿತಾರ ಕರ್ನಾಟಕ ಬ್ಯಾಂಕ್ ಅಕೌಂಟನಿಂದಲೇ ಆಂಜಿನಪ್ಪ ಎಂಬುವರಿಗೆ 6 ಲಕ್ಷ (ದಿ 19.1.06 ಚೆಕ್ ನಂಬರ್ 116403), ಚಂದ್ರಶೇಖರ್‌ಗೆ (ಗೌಡರ ಅಳಿಯ) 10 ಲಕ್ಷ (ದಿ 15.12.05 ಚೆಕ್ ನಂ. 116435), ದಾಕ್ಷಾಯಿಣಿ ಎಂಬುವವರಿಗೆ 14.77 ಲಕ್ಷ (ದಿ 5.9.05 ಚೆಕ್ ನಂ. 106132), ದಾಮೋದರ್ ರೆಡ್ಡಿ 10 ಲಕ್ಷ (ದಿ. 25. 10.2005) ಚೆಕ್ ನಂ. 116714), ಗೋಪಾಲ ರೆಡ್ಡಿಗೆ 10 ಲಕ್ಷ (ದಿ. 12.11.05 ಚೆಕ್ ನಂ. 116723), ಗುರ್ ರೆಡ್ಡಿಗೆ 7.50 ಲಕ್ಷ (ದಿ. 31.10.05 ಚೆಕ್ ನಂ. 116718), ಜನಾರ್ಧನ ಎಂಬಾತನಿಗೆ 10 ಲಕ್ಷ (ದಿ. 24.10.05 ಚೆಕ್ ನಂ. 116712), ಕೆ.ಸಿ. ಈರಪ್ಪರೆಡ್ಡಿಗೆ 25 ಲಕ್ಷ (ದಿ. 22.6.03 ಚೆಕ್ ನಂ. 100149), ಕೆ.ಇ. ರಾಜು ರೆಡ್ಡಿಗೆ 21.87 ಲಕ್ಷ (ದಿ. 22.6.06, ಚೆಕ್ ನಂ. 100148), ಜಯರಾಂ ರೆಡ್ಡಿ. ಕೆ. 10 ಲಕ್ಷ (ದಿ. 2.6.06, ಚೆಕ್ ನಂ. 116711), ಕೋದಂಡರಾಮ ರೆಡ್ಡಿಗೆ 7.50 ಲಕ್ಷ (ದಿ 29.10.05 ಚೆಕ್ ನಂ. 116716), ಕೃಷ್ಣಾರೆಡ್ಡಿ ಎಂಬುವನಿಗೆ 10.75 ಲಕ್ಷ (ದಿನಾಂಕ 29.10.05 ಚೆಕ್ ನಂ. 116710) ಕುನ್ನೂರ್ ಎಂಟರ್‌ಪ್ರೈಸಸ್‌ಗೆ 1.31 ಕೋಟಿ (ದಿ 24.8.05 ಚೆಕ್ 106140 ಮಧು ರಾಘವೇಂದ್ರ ಎಂಬುವರಿಗೆ ದಿ. 13.12.05 ರ ಒಂದೇ ದಿನ ಎರಡು ಚೆಕ್‌ಗಳಲ್ಲಿ 2.90 ಕೋಟಿ ದಯಪಾಲಿಸಿದ್ದಾರೆ ಕವಿತಾ.

ಇವೆಲ್ಲಾ ಯಾವ ಡೀಲ್‌ನ ಹಣ?

ಕವಿತಾರ ಚೆಕ್ ಹರಿಯುವ ಧಂದೆ ಇಲ್ಲಿಗೂ ಕೊನೆಯಾಗಿಲ್ಲ, ನಾರಾಯಣರೆಡ್ಡಿ ಎಂಬುವನಿಗೆ 22.10.05 ರಲ್ಲಿ 10 ಲಕ್ಷ, ಸಿಂಗಯ್ಯನಿಗೆ 24.80 ಲಕ್ಷ, ಪ್ರವೀಣ್ ಚಂದ್ರನಿಗೆ 1 ಕೋಟಿ, ಎ. ರಾಮರಾಜುಗೆ 21 ಲಕ್ಷ (ಇವನು ವಿಟ್ರಿಯಾ ಭೂಮಿ ಕದ್ದ ಚಾಮರಾಜು ಬ್ರದರ್ಸ್‌ಗಳಲ್ಲಿ ಒಬ್ಬ) ಎಸ್. ನಾಗರಾಜ ರೆಡ್ಡಿಗೆ 13.25 ಲಕ್ಷ. ಎಸ್. ರಘು ಎಂಬುವನಿಗೆ 42.25 ಲಕ್ಷ, ಎಸ್. ರಮೇಶ್ ರೆಡ್ಡಿಗೆ 15 ಲಕ್ಷ.... ಹೀಗೆ ಕೊನೆಯಿರದಂತೆ ಸಾಗದೆ ಕವಿತಾರ ಹಣಕಾಸಿನ ಧಂದೆಗಳು. ಇದರಲ್ಲಿ ಹೆಚ್ಚುಕಡಿಮೆ ಪ್ರತಿಯೊಂದೂ ಸಂಬಂಧಪಟ್ಟಿರುವುದು ಭೂ ಖರೀದಿಗೇನೆ.

ಜನಾರ್ಧನ ರೆಡ್ಡಿ ಇಂತಾ ಎಷ್ಟೋ ದಾಖಲೆಗಳನ್ನು ಬಹಿರಂಗಪಡಿಸಿ 'ಈ ಕೋಟ್ಯಂತರ ಹಣದ ಮೂಲ ಯಾವುದು?' ಎಂದು ಕೇಳಿದ್ದಕ್ಕೆ ಈಯಮ್ಮ ದೇವೇಗೌಡರ ಸೊಸೆ "ಮಾನನಷ್ಟ ಕೇಸ್ ಹಾಕ್ತೀನಿ" ಎಂದು ಕಿರುಚಿಕೊಂಡಿದೆ.

ಮಾನಹಾನಿ ಕೇಸ್ ಅಂದರೆ ರೋಲ್‌ಕಾಲ್ ಮಾಡುವುದು, ಬಡರೈತರ ಜಮೀನು ಕಿತ್ತುಕೊಳ್ಳುವುದು, ಚರಕ್ ಅಂತಾ ಚೆಕ್ ಹರಿದು ಕೊಡುವಷ್ಟು ಸುಲಭ ಎಂದು ತಿಳಿದುಕೊಂಡಿರಬೇಕು ಈ ಹೆಂಗಸು.

ರೆಡ್ಡಿ ಹೇಳಿರುವಂತೆ ಕವಿತಾ ಬಾಲಕೃಷ್ಣೇಗೌಡ ದೇವೇಗೌಡರ ಕುಟುಂಬದ ರಿಸರ್ವ್ ಬ್ಯಾಂಕ್ ಸರಿ. ಗೌಡ ಅಂಡ್ ಸನ್ಸ್ ಎಂತಾ ಕಿಲಾಡಿಗಳೆಂದರೆ ಕರ್ನಾಟಕದ ಇತರೆಲ್ಲಾ ಭ್ರಷ್ಟ ರಾಜಕಾರಣಿಗಳು ದೂರದ ಲಂಡನ್, ಮುಂಬೈ, ಸಿಂಗಪೂರ್‌ಗಳಲ್ಲಿ ಆಸ್ತಿ ಖರೀದಿ ಮಾಡಿದರೆ ಇವರು ತಮ್ಮದೇ ಹೊಸ ಹಾದಿ ಕಂಡುಕೊಂಡಿದ್ದಾರೆ. ಬೆಂಗಳೂರು-ಮೈಸೂರು ನಡುವೆ ಕಾರಿಡಾರ್ ಯೋಜನೆ ಪೂರ್ತಿಯಾಗಿ ಜನ-ವಾಹನಗಳ ಓಡಾಟ ಶುರುವಾಗಿಬಿಟ್ಟರೆ ಸುತ್ತಲಿನ ಭೂಮಿಗೆ ಚಿನ್ನದ ಬೆಲೆ ಸಿಗುತ್ತದೆ. ನಮ್ಮ ಮುಖ್ಯಮಂತ್ರಿ ರಾಮನಗರ-ಸಾತನೂರಗಳಲ್ಲೂ ಟೌನ್‌ಶಿಪ್ ನಿರ್ಮಿಸುವ ಮಾತಾಡುತ್ತಿರುವುದೂ ಈ ಪ್ರೇರಣೆಯಿಂದಲೇ.

ಅಂದಹಾಗೆ ಇವರೆಲ್ಲಾ ಮಣ್ಣಿನ ಮಗ ದೇವೇಗೌಡರ ವಂಶದ ಕುಡಿಗಳು.

ನಾಚಿಕೆಯಾಗಬೇಕು ದೇವೇಗೌಡರಿಗೆ.

ಫೋರ್ಥ್ ಎಸ್ಟೇಟೋ? ರಿಯಲ್ ಎಸ್ಟೇಟೋ?

ಕರ್ನಾಟಕದಲ್ಲಿ ಪತ್ರಿಕೋದ್ಯಮ ಮತ್ತು ಪತ್ರಕರ್ತರು ಇವತ್ತು 'ಸ್ಪೂನ್ ಫೀಡಿಂಗ್' ಮಾಡಬೇಕಾದ ಸ್ಥಿತಿಯನ್ನು ತಲುಪಿದ್ದಾರೆ. ತನಿಖಾ ಪತ್ರಿಕೋದ್ಯಮ ಎಂಬುದು ಇಲ್ಲಿನ ಪತ್ರಕರ್ತರಲ್ಲಿ ಸತ್ತು ಹೋಗಿದೆ. ಆದುದರಿಂದಲೇ ಜನಾರ್ಧನ ರೆಡ್ಡಿ ದೇವೇಗೌಡರ ಕುಟುಂಬದ ವಿರುದ್ಧ ನೀಡಿದ ಭ್ರಷ್ಟಾಚಾರ ಮತ್ತು ಹಗರಣದ ದಾಖಲೆಗಳು ಇವರಿಗೆ ಸಾಕ್ಷ್ಯಾಧಾರಗಳು ಎಂದೆನಿಸಲೇ ಇಲ್ಲ.

ಇವರು ರೆಡ್ಡಿಯಿಂದ ನಿರೀಕ್ಷಿಸಿದ್ದು ತೆಹಲ್ಕಾ ಹಗರಣದಂತಹ ಒಂದು ಟೇಪು ಅಥವಾ ಸಿಡಿಯನ್ನು. ಇವರ ಪ್ರಕಾರ ಉದ್ದನೆ ಓವರ್‌ಕೋಟ್ ಧರಿಸಿ, ಕಣ್ಣಿಗೆ ಕಪ್ಪು ಕೂಲಿಂಗ್‌ಗ್ಲಾಸ್ ಹಾಕಿಕೊಂಡ ವ್ಯಕ್ತಿಯೊಬ್ಬ ಕುಮಾರಸ್ವಾಮಿಯ ಕೈಗೆ 150 ಕೋಟಿ ರೂಪಾಯಿ ತುಂಬಿದ ಸೂಟ್‌ಕೇಸ್‌ಗಳನ್ನು ಹಸ್ತಾಂತರಿಸಬೇಕಿತ್ತು, ಅದನ್ನು ಪಡೆದು ಕುಮಾರಸ್ವಾಮಿ ಪುರ್ರೆಂದು ಹೆಲಿಕಾಪ್ಟರ್‌ನಲ್ಲಿ ಹಾರಬೇಕಿತ್ತು, ಆದರೆ ಅದ್ಯಾವುದು ಸಿಡಿಯಲ್ಲಿ ಕಾಣದೆ ಪತ್ರಕರ್ತರು ತೀವ್ರ ನಿರಾಸೆಗೊಂಡರು.

ಆದರೆ ರೆಡ್ಡಿ ನೀಡಿದ ಬ್ಯಾಂಕ್ ದಾಖಲೆಗಳು, ಆಸ್ತಿ ಖರೀದಿ ದಾಖಲೆಗಳು, ಅವು ಬೇನಾಮಿ ಹೆಸರಿನಲ್ಲಿ ರಿಜಿಸ್ಟರ್ ಆಗಿರುವುದು, ಗೌಡರ ಬಂಧುಗಳ ನಡುವೆ ನಡೆದಿರುವ ಕೋಟ್ಯಂತರ ರೂಪಾಯಿ ವ್ಯವಹಾರದ ಹಣ ಎಲ್ಲಿಂದ ಬಂತು ಎಂದು ಹುಡುಕುವ ಮತ್ತು ದಾಖಲೆಯನ್ನು ಪರಿಶೀಲಿಸುವ ವ್ಯವದಾನವೂ ಪತ್ರಕರ್ತರಿಗಿಲ್ಲದಿರುವುದು ತೀರಾ ವಿಷಾದನೀಯ.

ರೆಡ್ಡಿ ಸಿಡಿ ಬಿಡುಗಡೆಯ ನಂತರ ಬಂದ ದಿನ ಪತ್ರಿಕೆಗಳು ಮತ್ತು ವಾರಪತ್ರಿಕೆಗಳ ಹೆಡ್‌ಲೈನ್‌ಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ರೆಡ್ಡಿಯ ಬಳಿ ಇರುವ ಸಾಕ್ಷ್ಯ ಸುಳ್ಳೋ-ನಿಜವೋ ಅದನ್ನು ಸಿಬಿಐ ಪತ್ತೆಹಚ್ಚಬಲ್ಲದು, ನ್ಯಾಯಾಲಯ ತೀರ್ಪು ನೀಡಬಲ್ಲದು. ಆದರೆ ಈ ಪಾಟಿ ಆಸ್ತಿ ಖರೀದಿಸಲು ಅದೂ ಕುಮಾರಸ್ವಾಮಿ ಮುಖ್ಯಮಂತ್ರಿ ಆದ ನಂತರ! ಹಣ ಎಲ್ಲಿಂದ ಬಂತು ಎಂದು ಕೇಳುವ ಎದೆಗಾರಿಕೆ ಯಾವ ಪತ್ರಿಕೆಗೂ ಇಲ್ಲವೆ? ಫೋರ್ಥ್ ಎಸ್ಟೇಟ್ ಸಹ ರಿಯಲ್ ಎಸ್ಟೇಟ್‌ನೊಂದಿಗೆ ವಿಲೀನವಾಗುತ್ತಿದೆಯೋ?

ರೆಡ್ಡಿಯನ್ನು ಮೆತ್ತಗಾಗಿಸಿದ್ದು ಸಾಯಿಬಾಬಾನೆ?

ಇಂತಹದೊಂದು ಪ್ರಶ್ನೆ ರಾಜಕೀಯ ವಲಯದಲ್ಲಿ ಅಲ್ಲಲ್ಲಿ ಕೇಳಿ ಬರುತ್ತಿದೆ. ಬೂದಿಬಾಬಾ ಏನು ತನ್ನ ಪವಾಡ ಶಕ್ತಿಯಿಂದ ಜನಾರ್ಧನ ರೆಡ್ಡಿಯನ್ನು ಕೊಂಚ ಮೆತ್ತಗೆ ಮಾಡಿದನೆ? ವಿಡಿಯೋ ಕ್ಲಿಪ್ಪಿಂಗ್ಸ್ ಬಹಿರಂಗ ಮಾಡದಂತೆ ತಡೆದನೆ?

ಜನಾರ್ಧನ ರೆಡ್ಡಿ ಆಗಸ್ಟ್ 23ರಂದು ಪ್ರತಿಕಾ ಜಾತ್ರೆ ನಡೆಸಿದರಲ್ಲವೇ? ರೆಡ್ಡಿ ಡೇಟ್ ಅನೌನ್ಸ್ ಮಾಡಿದಾಗಿನಿಂದ ಒಂದಿಲ್ಲೊಂದು ಸರ್ಕಸ್ ಮಾಡುತ್ತಾ ಅಧಿಕಾರ ಕೈ ತಪ್ಪುವುದನ್ನು ತಡೆಯಲು ಯತ್ನಿಸುತ್ತಲೇ ಬಂತು ಗೌಡರ ಕುಟುಂಬ.

ಈ ಡ್ಯಾಮೇಜ್ ಕಂಟ್ರೋಲ್ ಸರಣಿಯ ಇತ್ತೀಚಿನ ಗೇಮ್ ಎಂದರೆ ಆಗಸ್ಟ್21ರಂದು ಮಾಜಿ ಪ್ರಧಾನಿ ದೇವೇಗೌಡರು ಪುಟ್ಟಪರ್ತಿಯಲ್ಲಿ ಯಾಗ ಮಾಡಿದ್ದು! ಇಷ್ಟಾಗಿದ್ದರೆ ಇದು ಸುದ್ದಿಯಾಗುತ್ತಿರಲಿಲ್ಲವೇನೋ?



ದೇವೇಗೌಡರ ಸಕಲ ತಂತ್ರ ಕುತಂತ್ರಗಳ ಶೈಲಿ ಬಲ್ಲವರ ಪ್ರಕಾರ, ಪುಟ್ಟಪರ್ತಿ ಸಾಯಿಬಾಬಾನ ಮೂಲಕ ಜನಾರ್ಧನ ರೆಡ್ಡಿಯನ್ನು ಮೆತ್ತಗೆ ಮಾಡುವುದೇ ಈ 'ಆಪರೇಷನ್ ಸ್ಲೋ ಡೌನ್'ನ ಪ್ರಮುಖ ಉದ್ದೇಶವಾಗಿತ್ತಂತೆ!

ಇಂತಹ ಅಂತರ್-ಪಕ್ಷೀಯ(inter-party) ಒಪ್ಪಂದಗಳನ್ನು ಮಾಡಿಸುವ ದಲ್ಲಾಳಿತನದ ಕೆಲಸಗಳಲ್ಲಿ ಕರಡಿ ಸಾಯಿಬಾಬಾನದು ಎತ್ತಿದ ಕೈ!

ಸಕಲ ಪಾರ್ಟಿಗಳ ಲೀಡರುಗಳನ್ನೇ ಭಕ್ತರನ್ನಾಗಿ ಪಡೆದಿರುವ ಸಾಯಿಬಾಬಾ ಸೈಲೆಂಟಾಗಿ ಇಂತಹ ಕೆಲಸ ಮಾಡಬಲ್ಲ ಚಾಲಾಕಿ! ಈಗ ಹರಡಿರುವ ಸುದ್ದಿಗಳ ಪ್ರಕಾರ ಜನಾರ್ಧನ ರೆಡ್ಡಿ 23ರಂದು ರೋಚಕ ದೃಶ್ಯಾವಳಿಗಳನ್ನು ತೋರಿಸದೇ ತಮ್ಮ ಪ್ರದರ್ಶನ ಕಾರ್ಯಕ್ರಮವನ್ನು ಮುಂದೂಡಿದ್ದು ಸಾಯಿಬಾಬಾನ ಸಲಹೆಯಿಂದಲೇ ಅಂತೆ!

ಮುಂದೆ ಆಕಸ್ಮಾತ್ ರೆಡ್ಡಿಗೆ ಬಿಜೆಪಿ ಕ್ಷಮಿಸದೇ ಇದ್ದ ಪಕ್ಷದಲ್ಲಿ ಸಾಯಿಬಾಬಾನ ಕಾರ್ಯಕ್ಷೇತ್ರ ಅನಂತಪುರದಿಂದ ರೆಡ್ಡಿಯನ್ನು ಗೆಲ್ಲಿಸುವ ಭರವಸೆಯನ್ನು ರೆಡ್ಡಿಗೆ ಸಾಯಿಬಾಬ ನೀಡಿದರಂತೆ! ಸಾಯಿಬಾಬಾ ಇದನ್ನೆಲ್ಲ ಬಿಜೆಪಿ ಹೈಕಮಾಂಡ್ ಬಳಸಿಕೊಂಡು ಮಾಡಿದ ಎನ್ನಲಾಗುತ್ತಿದೆ!

ಬಳ್ಳಾರಿ ಮೂಲಗಳ ಪ್ರಕಾರ ಜನಾರ್ಧನ ರೆಡ್ಡಿಗೇನೂ ಸಾಯಿಬಾಬಾ ಜೊತೆ ಅಂತಹ ಕ್ಲೋಸ್ ಲಿಂಕ್ ಇಲ್ಲ, ಆದರೆ ರೆಡ್ಡಿ ದೈವಭಕ್ತನಂತೂ ಹೌದು!

'ದಲ್ಲಾಳಿ ಪವಾಡ' ಮಾಡಬಲ್ಲ ಸಾಯಿಬಾಬಾ ರೆಡ್ಡಿಯನ್ನು ಮೆತ್ತಗಾಗಿಸಿರಲೂಬಹುದು ಅಲ್ಲವೆ?

ಆದಿರು ಧೂಳಿನಲ್ಲಿ ಬಾಬಾ ಬೂದಿಯೂ ಸೇರಿತಾ?



ಗೌಡರ ಕುಟುಂಬದಲ್ಲಿ ಯಾವ ಬಿರುಕು?

ಮಳ್ಳಿ ಮುಖ್ಯಮಂತ್ರಿ, ದೇವೇಗೌಡರ ಸುಪುತ್ರ ಕುಮಾರಸ್ವಾಮಿ "ನಾವು ಅಣ್ಣ ತಮ್ಮ ಬಹಳ ಹಿಂದೆಯೇ ಬೇರೆ ಬೇರೆ ಆಗಿದ್ದೇವೆ. ಹಾಗಾಗಿ ಅವರ ವ್ಯವಹಾರಕ್ಕೂ ನನಗೂ ಏನೇನೂ ಸಂಬಂಧ ಇಲ್ಲ" ಎಂದು ಹೇಳಿಕೊಂಡಿದ್ದಾರೆ.

ಇದು ನಿಜವಾ?

ದೇವೇಗೌಡ ತಮ್ಮ ಮಕ್ಕಳಿಗೆಲ್ಲಾ ಆಸ್ತಿ ಹಂಚಿ ಭಾಗಮಾಡಿ ಬಿಟ್ಟಿದ್ದಾರಾ? ಗೌಡರ ಮಕ್ಕಳಾದ ಬಾಲಕೃಷ್ಣೇಗೌಡ, ಕುಮಾರಸ್ವಾಮಿ, ಡಾ. ರಮೇಶ್, ರೇವಣ್ಣ ಬೇರೆ ಬೇರೆಯಾಗಿ ಪ್ರತ್ಯೇಕ ವ್ಯವಹಾರ ನಡೆಸುತ್ತಿದ್ದಾರಾ?

ಅವರ ಸೊಸೆಯರಾದ ಕವಿತಾ, ಅನಿತಾ, ಸೌಮ್ಯ ಭವಾನಿಯವರ ಹಣಕಾಸಿನ ವ್ಯವಹಾರಗಳೂ ಸಪರೇಟಾಗಿವೆಯಾ? ಗೌಡರ ಹೆಣ್ಣು ಮಕ್ಕಳಾದ ಶೈಲಜಾ-ಅನಸೂಯ ಮತ್ತವರ ಪತಿ ದೇವರುಗಳಾದ ಚಂದ್ರಶೇಖರ ಹಾಗೂ ಡಾ. ಮಂಜುನಾಥ್ ಕೂಡಾ ಇದೇ ರೀತಿ ಪ್ರತ್ಯೇಕ ಬಿಸಿನೆಸ್ಸು ಧಂದೆ, ಡೀಲುಗಳನ್ನು ನಡೆಸುತ್ತಿದ್ದಾರಾ?

ಈ ಪ್ರಶ್ನೆಗಳು ಈಗ ಮುಖ್ಯವಾಗಿರುವುದೇಕೆಂದರೆ ರಾಜ್ಯದ ಹಾಲಿ ಮುಖ್ಯಮಂತ್ರಿಯೇ ಅಂತಾದ್ದೊಂದು ಹೇಳಿಕೆ ನೀಡಿದ್ದಾರೆ. ಈ ಸ್ಪಷ್ಟನೆ ಬಂದಿರುವುದೂ ಬಿಜೆಪಿ ಶಾಸಕ ಜನಾರ್ಧನ ರೆಡ್ಡಿ 'ಗಣಿ ಲಂಚ' ಹಗರಣದ ಸಾಕ್ಷ್ಯಾಧಾರಗಳನ್ನು ಬಿಡುಗಡೆ ಮಾಡಿದ ನಂತರವೇ!

ಆದರೆ ಅವೇ ಸಾಕ್ಷ್ಯಾಧಾರಗಳನ್ನಿಟ್ಟುಕೊಂಡು ಪರಿಶೀಲಿಸಿ ನೋಡಿದರೆ ಮಣ್ಣಿನ ಮಗ ದೇವೇಗೌಡರ ಮಕ್ಕಳು ಹಿಂದೆಂದಿಗಿಂತಲೂ ಒಗ್ಗಟ್ಟಾಗಿ ಒಂದೇ ಡೈನಿಂಗ್ ಟೇಬಲ್ಲಿನಲ್ಲಿ ಭೋಜನಕ್ಕೆ ಕುಳಿತಿರುವುದು ಕಾಣುತ್ತದೆ. ಇವರೆಲ್ಲಾ ಒಂದು ಕುಟುಂಬವಾಗಿ ಇಡೀ ಕರ್ನಾಟಕವನ್ನೇ ನುಂಗಲು ಕುಳಿತಿದ್ದಾರೆ.

ಮುಖ್ಯಮಂತ್ರಿ ಕುಮಾರಸ್ವಾಮಿಯವರ ಹೇಳಿಕೆಯಂದ ಸ್ವಲ್ಪ ಮಟ್ಟಿಗಿನ ಸತ್ಯಾಂಶವಿರುವುದು ಬಿಎಸ್‌ಕೆ ಟ್ರೇಡಿಂಗ್ ಕಂಪನಿ ಧಂದೆಯಲ್ಲಿ ಮಾತ್ರ. ಏಕೆಂದರೆ ಈ ಕಂಪನಿಯಲ್ಲಿ ಗೌಡರ ನಾಲ್ಕು ಗಂಡು ಮಕ್ಕಳ ಪೈಕಿ ಇಬ್ಬರು ಹಾಗೂ ನಾಲ್ವರು ಸೊಸೆಯರ ಪೈಕಿ ಕವಿತಾ ಮಾತ್ರ ಪಾರ್ಟನರ್‌ಗಳಾಗಿದ್ದಾರೆ. ಆದರೆ 150 ಕೋಟಿ ರೂಪಾಯಿ ಗಣಿ ಲಂಚ ಹಂಚಿಕೊಂಡು ವೈಟ್‌ಫೀಲ್ಡ್‌ನ ಬೃಹತ್ ಆಸ್ತಿ ಖರೀದಿ ಮಾಡುವಾಗ ಗೌಡರ ಎಲ್ಲಾ ಸೊಸೆಯಂದಿರೂ ಹಾಗೂ ಒಬ್ಬ ಮಗ ಡಾ. ರಮೇಶ್ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ.

ಕವಿತಾ, ಅನಸೂಯ, ಶೈಲಜಾ, ಡಾ. ರಮೇಶ್, ಭವಾನಿಯವರ ಜೊತೆಗೆ ಅನಿತಾ ಕುಮಾರಸ್ವಾಮಿಯೂ ಈ ಆಸ್ತಿಯ ಮಾಲೀಕರೇ ಆಗಿದ್ದಾರೆ.


ಈ ಭ್ರಷ್ಟ ಸಂತಾನವು ವೈಟ್‌ಫೀಲ್ಡ್ ಆಸ್ತಿ ರಿಜಿಸ್ಟರ್ ಆದಾಗಲೇ ತಮ್ಮತಮ್ಮಲ್ಲೇ ಕಟ್ಟಡ ನಿರ್ವಹಣೆಗೊಂದೇ Formation of Association Apex Body and Maintenance ರಚಿಸುವ ಷರತ್ತನ್ನು ಹಾಕಿಕೊಂಡಿದ್ದಾರೆ.



ಸರ್ವರಿಗೂ ಸಮಬಾಳು, ಸಮಪಾಲು

ಕೆ.ಆರ್. ಪುರಂ ಹೋಬಳಿಯ ದೊಡ್ಡನೆಕ್ಕುಂದಿ ಗ್ರಾಮದ ಸರ್ವೆ ನಂಬರ್ 74 ಹಾಗೂ 77ರಲ್ಲಿರುವ ಒಟ್ಟು 9.72 ಎಕರೆ ಜಮೀನಿನ 39, 378 ಚದರ ಮೀಟರ್ ಆಸ್ತಿಯನ್ನು ಕುಮಾರಸ್ವಾಮಿ ಪತ್ನಿಯೂ ಸೇರಿ ಹೇಗೆ ಪಾಲು ಮಾಡಿಕೊಂಡಿದ್ದಾರೆ ಗೊತ್ತೆ?

ಈ ಬೃಹತ್ ಜಮೀನು ಹಾಗೂ ಕಟ್ಟಡವನ್ನು ಕ್ಯಾಂಪಸ್ A, B, C, D ಎಂದು ನಿರ್ಮಿಸಲಾಗಿದ್ದು ನಾಲ್ಕಂತಸ್ತಿನ ಈ ಕಟ್ಟಡಗಳಲ್ಲಿ ಒಟ್ಟು 4 ಲಕ್ಷ 23 ಸಾವಿರದ 865 ಚದರಡಿ ಜಾಗವಿದೆ. ಇದರಲ್ಲಿ ಕವಿತಾಗೆ ಕ್ಯಾಂಪಸ್ A ನಲ್ಲಿ 28, 345 ಚದರಡಿ ಹಾಗೂ ಟೆರೇಸಿನ 19,910 ಚದರಡಿ ಪ್ಲಸ್ ಇಡೀ ಕ್ಯಾಂಪಸ್ಸಿನ ಮೇಲಿನ ಜಂಟಿ ಹಕ್ಕು.



23 car parking spaces in the basement and 10 car parking spaces in the open area with 20 two wheeler parking spaces in the site area of 1,21,028 Sq.Ft in Campus A.

d) Anitha Kumaraswamy's share

Undivided 28,345 Sq.Ft of saleable built up area in Second Floor with proportionate undivided interest in the site area of 1,21,028 Sq Ft in Campus A.

GPA HOLDER

For Millennia Realtors Pvt. Ltd.

Authorised Signatory

ವೈಟ್‌ಫೀಲ್ಡ್ ಕಟ್ಟಡದಲ್ಲಿ ಅನಿತಾ ಕುಮಾರಸ್ವಾಮಿ ಪಾಲುದಾರಿಕೆಯ ದಾಖಲೆ

ನಮ್ಮ ಲೋಕೋಪಯೋಗಿ ಸಚಿವ ರೇವಣ್ಣನ ಧರ್ಮಪತ್ನಿ ಭವಾನಿಗೆ ಅದೇ ಕ್ಯಾಂಪಸ್ A ನಲ್ಲೇ 10,780 ಚದರಡಿ ಮೊದಲ ಮಹಡಿಯಲ್ಲಿ 17, 565 ಚದರಡಿ ಹಾಗೂ ಇಡೀ ಕಾಂಪೌಂಡಿನ ನೆಲದ ಜಂಟಿ ಹಕ್ಕು. ಇದೇ ರೀತಿ ಡಾ. ರಮೇಶ್, ಅನಸೂಯ, ಶೈಲಾ ಚಂದ್ರಶೇಖರ್ ಮುಂತಾದ ಗೌಡರ ಸಂತಾನ ಅವರವರ ಪಾಲಿನ ಆಸ್ತಿಯನ್ನು ಗೆರೆ ಎಳೆದಂತೆ ವಿಭಜಿಸಿಕೊಂಡಿದ್ದಾರೆ. ಇಲ್ಲೇ ಅನಿತಾ ಕುಮಾರಸ್ವಾಮಿಯ ಭ್ರಷ್ಟ ಮುಖವೂ, ಅನಿಷ್ಟ ಪಾಲುದಾರಿಕೆಯನ್ನು ಸ್ಪಷ್ಟವಾಗಿ ದಾಖಲಿಸಲಾಗಿದೆ. ಈಕೆಗೆ ಕ್ಯಾಂಪಸ್ A ನ 2ನೇ ಅಂತಸ್ತಿನಲ್ಲಿ 28, 345 ಚದರಡಿ ಹಾಗೂ ಇಡೀ ಕ್ಯಾಂಪಸ್ಸಿನ 1,21, 028 ಚದರಡಿ ಜಾಗದ ಮೇಲಿನ ಜಂಟಿ ಪಾಲುದಾರಿಕೆ ಖಾತರಿಪಡಿಸಲಾಗಿದೆ. ಜೊತೆಗೆ ಬೇಸ್‌ಮೆಂಟ್‌ನಲ್ಲಿ 23 ಕಾರ್ ಪಾರ್ಕಿಂಗ್ ಜಾಗ, ಹೊರಗಡೆ 8 ಕಾರ್, 20 ಟೂ ವೀಲ್ಲರ್ ನಿಲ್ಲಿಸುವಷ್ಟು ಸ್ಥಳವನ್ನು ಅನಿತಾ ಪಡೆದುಕೊಂಡಿದ್ದಾರೆ. ಈ ಆಸ್ತಿ ದಾಖಲೆಗಳನ್ನು ಮುಖ್ಯಮಂತ್ರಿ ಕುಮಾರಸ್ವಾಮಿ ಮುಖಕ್ಕಿಡಿದು "ನೀವು ಅಣ್ಣ ತಮ್ಮ ಬೇರೆ ಬೇರೆ ಆಗಿದ್ದೀನಂತ ಹೇಳಿದ್ದೀರಲ್ಲಾ, ಇದಕ್ಕೇನು ಹೇಳ್ತೀರಿ" ಎಂದು ಕೇಳಬೇಕು ತಾನೆ?

ಅಣ್ಣ ತಮ್ಮಂದಿರಿಂದ ತಾನು ವ್ಯವಹಾರಿಕವಾಗಿ ದೂರವಿದ್ದೇನೆ. ನಮ್ಮ ನಡುವೆ ರಕ್ತ ಸಂಬಂಧ ಬಿಟ್ಟರೆ ಬೇರೇನೂ ಸಂಬಂಧವಿಲ್ಲ ಎಂದು ಗಣಿ ಹಗರಣದ ತಿಪ್ಪೇ ಸಾರಿಸುತ್ತಿರುವ ಕುಮಾರಸ್ವಾಮಿಯವರ ಮಾತನ್ನು ಯಾರಾದರೂ ನಂಬಿಬಿಟ್ಟರೆ ಈ ಅಣ್ಣತಮ್ಮಂದಿರ ನಡುವೆ ಬಿರುಕು ಹುಟ್ಟಿಕೊಂಡಿರಬಹುದೇನೋ ಎಂದೆನ್ನಿಸುತ್ತಾದರೂ ವಾಸ್ತವ ಸಂಗತಿ ಹಾಗಿಲ್ಲ.

ಕವಿತಾ-ಅನಿತಾ-ಎಚ್‌ಡಿಕೆ ಲಿಂಕ್

ಕುಮಾರಸ್ವಾಮಿ ಹಾಗೂ ಅನಿತಾರ ಮಾಲೀಕತ್ವದಲ್ಲಿರುವ ಶಾಕಾಂಬರಿ ಎಂಟರ್‌ಪ್ರೈಸಸ್ ಎಂಬ ಕಂಪನಿಗೂ ಕವಿತಾಗೂ ವ್ಯವಹಾರ ಸಂಬಂಧಗಳಿರುವುದಕ್ಕೆ ಈಗ ಹೊಸ ದಾಖಲೆಗಳು ಲಭ್ಯವಾಗಿವೆ.


ಕವಿತಾರ ಕರ್ನಾಟಕ ಬ್ಯಾಂಕ್ ಅಕೌಂಟಿನಿಂದ 2005ರ ಡಿಸೆಂಬರ್‌ನಿಂದೀಚೆಗೆ ಒಟ್ಟು 4.13 ಕೋಟಿ ರೂ. ಶಾಕಾಂಬರಿಗೆ ಬಂದಿದೆ. (ಚೆಕ್ ನಂ. 116446, 116413, 116422, 100143). ಯಾವ ಕಾರಣಕ್ಕೆ ಕವಿತಾರ ಅಕೌಂಟಿನಿಂದ ನೇರವಾಗಿ ಕುಮಾರಸ್ವಾಮಿ ಅನಿತಾರಿಗೆ ಇಷ್ಟು ಭಾರಿ ಮೊತ್ತದ ಹಣ ಸಂದಾಯವಾಗಿದೆ ಎಂಬುದಕ್ಕೆ ಕುಮಾರಸ್ವಾಮಿ ಹತ್ತಿರ ಉತ್ತರವಿದೆಯೇ?

ಈ ಕವಿತಾ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯ ಪಾಲುದಾರರಲ್ಲೊಬ್ಬರೆಂಬ ಹಿನ್ನೆಲೆಯಲ್ಲಿ ಹಾಗೂ ಗಣಿ ಲಂಚ ವಸೂಲಿ ಮಾಡಿಕೊಂಡಿದ್ದು ಇದೇ ಬಿಎಸ್‌ಕೆ ಗುಂಪೇ ಎಂಬ ಆಧಾರದಲ್ಲಿ ನೋಡಿದರೆ ಗಣಿ ಲಂಚದ ಹಣ ಕುಮಾರಸ್ವಾಮಿಗೂ ತಲುಪಿದೆ ಎಂದರ್ಥ ತಾನೆ?

ಹೀಗೆ ಬ್ಯಾಂಕ್ ವಹಿವಾಟಿನ ದಾಖಲೆಗಳೇ ಇವರ ನಡುವೆಯಿರುವ ನಿಗೂಢ ವ್ಯವಹಾರಗಳಿಗೆ ಸಾಕ್ಷಿಯಾಗಿರುವಾಗ ಅಣ್ಣತಮ್ಮ ಬೇರೆಯಾಗುವ ಮಾತು ಎಲ್ಲಿದೆ? ಈ ಹಿಂದೆ ಕೋ-ಜಾ ಸರ್ಕಾರ ಬರುವಾಗಲೂ ದೇವೇಗೌಡರು ನನಗೂ ನನ್ನ ಮಗನಿಗೂ ಯಾವ ಸಂಬಂಧವೂ ಇಲ್ಲ ಎಂದು ಜಾಗಟೆ ಬಾರಿಸಿಕೊಂಡು ತಿರುಗಿದ್ದರು. ಅದೂ ಸುಳ್ಳಾಗಿತ್ತು. ಈಗ ನನಗೂ ಅಣ್ಣ-ತಮ್ಮಂದಿರ ವ್ಯವಹಾರಕ್ಕೂ ಸಂಬಂಧವಿಲ್ಲ ಎನ್ನುತ್ತಿದ್ದಾರೆ ಕುಮಾರಸ್ವಾಮಿ. ಇದೂ ಸುಳ್ಳಾಗಿದೆ.

ಜನಾರ್ಧನ ರೆಡ್ಡಿ ಸಂಗ್ರಹಿಸಿರುವ ಸಾಕ್ಷ್ಯಾಧಾರಗಳು ಕೋ-ಜಾ ಸರ್ಕಾರ ಬಿದ್ದ ಮೇಲೂ ದೇವೇಗೌಡರ ಕುಟುಂಬದ ಬೆನ್ನು ಬಿಡುವುದಿಲ್ಲ. ಶತಮಾನಗಳಿಂದ ಬರಗೆಟ್ಟವರಂತೆ ಲಂಚ, ವರ್ಗಾ ಧಂದೆ, ಡೀಲುಗಳನ್ನು ಕುದುರಿಸಿ ಅಕ್ರಮ ಆಸ್ತಿ ಮಾಡಿಕೊಂಡಿರುವ ಗೌಡರ ಮಕ್ಕಳು, ಸೊಸೆ, ಅಳಿಯಂದಿರು ಈಗ ಆತುರಾತುರವಾಗಿ ನುಂಗಿದ್ದನ್ನು ದಕ್ಕಿಸಿಕೊಳ್ಳಲು ಪರದಾಡುತ್ತಿದ್ದಾರೆ. ಹಸಿಹಸಿಯಾಗಿ ಸಿಕ್ಕಿಬಿದ್ದಿದ್ದಾರೆ. ಇದರ ಕಾನೂನು ಪರಿಣಾಮಗಳು ಎಲ್ಲಿ ತಮ್ಮ ಬೆನ್ನು ಹತ್ತುತ್ತವೋ ಎಂಬ ಭೀತಿಯಿಂದ ಕುಮಾರಸ್ವಾಮಿ ಈ ಬೇರೆ ಬೇರೆಯ ಮಾತಾಡುತ್ತಿದ್ದಾರೆ. ಮತ್ತೊಂದೆಡೆ ಇದೇ ಗೌಡರ ಕುಟುಂಬ ಕದ್ದ ಹಣವನ್ನು ಬಹಳ ನ್ಯಾಯಯುತವಾಗಿ ಹಂಚಿಕೊಳ್ಳುತ್ತಾ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಫಾರ್ಮುಲಾ ಪ್ರಕಾರ ಮುನ್ನಡೆಯುತ್ತಿದೆ.

– ಬೆಳೆದಾಳೆ ಈಶ



Date		Particulars	CH.NO.	PAYMENT	RECEIPT
[illegible]	TO	SHAKAMBARI ENTERPRISE	116446	8250000.00	
[illegible]	TO	SHAKAMBARI ENTERPRISE	116413	835000.00	
[illegible]	TO	SHAKAMBARI ENTERPRISE	116422	29800000.00	
[illegible]	TO	SHAKAMBARI ENTERPRISE	100143	9000000.00	
TOTAL				41989000.00	

ಕವಿತಾ ಅಕೌಂಟಿನಿಂದ ಕುಮಾರಸ್ವಾಮಿ ಮಾಲೀಕತ್ವದ ಶಾಕಾಂಬರಿಗೆ ಹಣ ಹೋಗಿರುವ ದಾಖಲೆ

'ಮುನ್ನಾಭಾಯಿ' ಡಾ. ರಮೇಶ್ [illegible]

ಕುಮಾರ್ ಅಧಿಕಾರ ಕಳಕೊಂಡ್ರೇ ನಾನೇ Happiest Person!

ಮತ್ತೊಮ್ಮೆ ಅದೇ ಮೊಬೈಲ್ ಕರೆ... ಮತ್ತದೇ ಪರಿಚಯದ ದನಿ....

"ನಾನೇ ಸಾರ್, ದೇವೇಗೌಡ್ರ ಮಗ ಡಾ. ರಮೇಶ್..."

'ಗಾಡ್ ಫಾದರ್ ರಾಮಮೂರ್ತಿ ಗಾಂಗ್' ಎಂಬ ನಮ್ಮ ಮತ್ತೊಂದು ಟಿಪ್ಪಣಿಯ ಬಗ್ಗೆ ಡಾ. ಎಚ್.ಡಿ. ರಮೇಶ್ ಯಥಾಪ್ರಕಾರ ಉದ್ವಿಗ್ನರಾಗಿದ್ದರು.

"ಏನ್ಸಮಾಚಾರ ಹೇಳಿ ಡಾಕ್ಟ್ರೇ..." ಎಂದು ಸೌಜನ್ಯದಿಂದಲೇ ವಿಚಾರಿಸಿಕೊಂಡರೆ, ಯಾಕೋ ತುಂಬಾ ವ್ಯಂಗ್ಯಭರಿತ ವಾಗಾಸ್ತ್ರಗಳನ್ನು ರೆಡಿಯಾಗಿಟ್ಟುಕೊಂಡಂತಿತ್ತು...

"ನಮಗೆ ಒಂದೈವತ್ತು ಕೋಟಿ ಅಮೌಂಟ್ ಬೇಕಾಗಿದೆ: ಅರ್ಜೆಂಟಾಗಿ ಕೊಡಿಸ್ತೀರಾ, ಸಾರ್......" ಎಂದು ಶುರು ಮಾಡಿತು ಆಸಾಮಿ....

"ಯಾಕೆ ಡಾಕ್ಟರ್ ರಮೇಶ್? ನಮ್ಮ ಹತ್ರ ಏನು ಹೇಳೋದಿದೆಯೋ ಅದನ್ನ ನೇರವಾಗಿ ಹೇಳ್ಬಿಡಿ... ಈ ತರಾ sarcastic ಆಗಿ ನಮ್ಮಂತೋರನ್ನು ಗೇಲಿ ಮಾಡಬೇಡಿ... ಈ 25 ಕೋಟಿ, 50 ಕೋಟಿ ವ್ಯವಹಾರವೆಲ್ಲ ತಾವುಗಳು ಮಾಡ್ತಿರೋದು... ನಾವೇನು ತಮ್ಮಂತೆ ಮೈನಿಂಗ್ ಬಿಜಿನೆಸ್ಸು, ಪವರ್ ಪಾಲಿಟಿಕ್ಸು ಮಾಡೋರಲ್ಲಂತ ಗೊತ್ತಿದೆ ತಾನೇ?" ನಾವೂ ಸಹ ಕೊಂಚ ಗಡಸುದನಿಯಲ್ಲೇ ಛೇಡಿಸಬೇಕಾಯ್ತು....

ವಿಷಯ ಬದಲಿಸಿದ ಡಾ. ರಮೇಶ್ ತೀರಾ ಪರ್ಸನಲ್ಲಾದ ಅಂಶವನ್ನೆತ್ತಿಕೊಂಡರು.

"ಅಲ್ಲಾ ಸಾರ್, ನನ್ನನ್ನ ನೀವು 'ಮುನ್ನಾಭಾಯಿ' ಎಂಬ ಕರ್ದಿರೋದು ಸರೀನಾ? ನಾನು ನೀವನ್ಕೊಂಡಂಗೆ ಕಾಪಿ ಮಾಡಿ ಮೆಡಿಕಲ್ ಡಿಗ್ರಿ ಪಡ್ದೋನಲ್ಲಾ ಸಾರ್... ಬಾಳs ಹಿಂದೆ ಆ ಪ್ರೊಫೆಸರ್ ವೆಂಕಟಗಿರಿಗೌಡ ಇದ್ರಲ್ಲ, ಅವು ನಮ್ಮಪ್ಪನ ಮೇಲಿನ ದ್ವೇಷದಿಂದ ನನ್ನ ಬಗ್ಗೆನೂ ಆ ತರಾ ಅಪಪ್ರಚಾರ ಮಾಡಿದ್ರು... ಅದನ್ನೇ ನಿಮ್ಮಂತೋರೂ ನಂಬ್ತೀರಾ?".... ದೇವೇಗೌಡರ ವಂಶದ ಈ 'ಮುನ್ನಾಭಾಯಿ' ಮಾತು ಕೇಳಿ ನಗುಬಂತು.

"ಅಲ್ರೀ ಡಾಕ್ಟ್ರೇ... ನೀವು ಆ 'ಮುನ್ನಾಭಾಯಿ ಎಂಬಿಬಿಎಸ್' ಸಿನಿಮಾನಾದ್ರೂ ನೋಡಿದ್ದೀರಾ? ಅದ್ರಲ್ಲಿ ಮುನ್ನಾಭಾಯಿ ಒಬ್ಬ ಮುಗ್ಧ ಒಳ್ಳೆಯ ಹೃದಯದ ಯುವಕನೇ... ಸನ್ನಿವೇಶದ ಪಿತೂರಿಯಿಂದಾಗಿ 'ಗೂಂಡಾ' ಅನ್ನಿಸಿಕೊಂಡಿರ್ತಾನೆ.... ದಯವಿಟ್ಟು ನಿಮ್ಮ ಬಿಜಿನೆಸ್ ನಡುವೆ ಪುರುಸೊತ್ತು ಮಾಡಿಕೊಂಡು ಆ ಸಿನಿಮಾನಾದ್ರೂ ನೋಡಿದ್ರೆ ನೀವು ನನ್ನೊತೆ ಜಗಳಕ್ಕೆ ಬರ್ತಿರ್ಲಿಲ್ಲ.... ಕೊಂಚ ತಮಾಷೆ, ವಿನೋದ, ಹಾಸ್ಯಪ್ರಜ್ಞೆನೂ ಹತ್ರ ಬಿಟ್ಕೋಬೇಕು ಡಾ. ರಮೇಶ್...."

ತಬ್ಬಿಬ್ಬಾದ ಡಾ. ರಮೇಶ್ ಅಲ್ಲಿಗೆ ಮಾತು ನಿಲ್ಲಿಸಿ ಮತ್ತೆ ಸಂಜೆಯ ಕಾಲ್‌ನಲ್ಲಿ ಮುಂದುವರಿಸಿದರು.

"ಇದು ನೋಡಿ ಸಾರ್, ನನಗೀಗ ಆಗ್ಲೆ 44 ವರ್ಷ ವಯಸ್ಸಾಯಿತು.... ಆದ್ರೂ ನನ್ನ ಲೈಫ್ ತುಂಬಾ ಬರೀ ನಮ್ಮ ಕುಟುಂಬದಲ್ಲಿರೋ ರಾಜಕೀಯದ ಹೊಲಸಿನಿಂದಾಗಿ ನಾನು ನನ್ನ ಸ್ವಂತಕ್ಕೇಂತ ಒಂಚೂರೂ ವ್ಯಾಪಾರ, ವ್ಯವಹಾರಾಂತ ಮರ್ಯಾದೆಯಿಂದ ಬದುಕಕ್ಕೆ ಸಾಧ್ಯವಾಗಿಲ್ಲ ಸಾರ್... ನಮ್ಮಪ್ಪನ ಕಾಲವಷ್ಟೇ ಮುಗಿದು ಹೋಗುತ್ತೇಂತ ಅಂದುಕೊಂಡಿದ್ದೆ.... ಆದ್ರೆ ನನ್ನ ಅಣ್ಣಂದಿರಿಬ್ರೂನೂ ಡೈನಾಸ್ಟಿಕ್ ಪಾಲಿಟಿಕ್ಸ್ ಮುಂದುವರಿಸಿಕೊಂಡು ಹೊರಟ್ರು.... ನನಗೆ ಸಾಕಾಗಿ ಹೋಗಿಬಿಟ್ಟಿದೆ...."

[illegible]

[illegible] ಸಾರ್... [illegible] ಮೇಲೆ. ನೋಡಿ ಸಾರ್ [illegible] Happiest Person [illegible]

–ರವೀಂದ್ರ ರೇಶ್ಮೆ

ಪಾಂಡವಪುರದಲ್ಲಿ ಚೆಡ್ಡಿಗಳ ಪುಂಡಾಟಿ

ಪಾಂಡವಪುರ ಪಟ್ಟಣ ಹಾಗೂ ತಾಲ್ಲೂಕಿನ ಸೌಹಾರ್ದತೆಗೆ ಧಕ್ಕೆ ಮಾಡಲು ತುದಿಗಾಲ ಮೇಲೆ ನಿಂತ ಕೆಲ ಕಿಡಿಗೇಡಿಗಳ ಕುಕೃತ್ಯದಿಂದಾಗಿ ಇಲ್ಲಿನ ನಾಗರಿಕರು ಮೂರು ದಿನಗಳ ಕಾಲ ತತ್ತರಿಸುವಂತಾಯಿತು. ಇಡೀ ಮಂಡ್ಯ ಜಿಲ್ಲೆಯಲ್ಲಿ ಹೇಳಹೆಸರಿಲ್ಲದ ಬಜೆಪಿಯನ್ನು ಹೇಗಾದರೂ ಮಾಡಿ ಮುಂಚೂಣಿಗೆ ತರುವ ಸಂಘ-ಪರಿವಾರದ ಹುನ್ನಾರ ಆಗಸ್ಟ್ 21, 22, 23 ರಂದು ಪಟ್ಟಣದ ಜನತೆಯನ್ನು ನಲುಗುವಂತೆ ಮಾಡಿತು.

ಕ್ಷುಲ್ಲಕ ಜಗಳವೊಂದಕ್ಕೆ ಕೋಮು ಗಲಭೆಯ ಬಣ್ಣ ಕಟ್ಟಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹವಣಿಸಿದ್ದ ಕೋಮುವಾದಿ ಬಜೆಪಿ ಮತ್ತು ಸಂಘ-ಪರಿವಾರಗಳ ವ್ಯವಸ್ಥಿತ ಸಂಚನ್ನು ಮಂಡ್ಯ ಜಿಲ್ಲೆಯ ಹಾಗೂ ಪಾಂಡವಪುರದ ಶಾಂತಿಪ್ರಿಯ ಜನತೆ ವಿಫಲಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆ. 21 ರ ರಾತ್ರಿ 9 ಗಂಟೆ ಸಮಯದಲ್ಲಿ ತಮಿಳು ಕಾಲೋನಿಯ ಕೆಲ ಹುಡುಗರು ಕೇರಂ ಆಟ ಆಡುವಲ್ಲಿ ನಿರತರಾಗಿದ್ದಾರೆ. ಆಟದ ನಿಯಮ ಕುರಿತಂತೆ ಸಣ್ಣ ಭಿನ್ನಾಭಿಪ್ರಾಯ ಉಂಟಾಗಿ ಅದು ಜಗಳದ ಸ್ವರೂಪ ಪಡೆದಿದೆ. ಅದೇ ಸಮಯಕ್ಕೆ ಅಂಗಡಿಯಲ್ಲಿ ಕಾಫಿ ಪುಡಿ ತರಲು ಬಂದಿದ್ದ ಸೈಯದ್ ಸಿಕಂದರ್ ಎಂಬಾತ ಜಗಳ ಬಿಡಿಸಲು ಮುಂದಾದಾಗ ಅದು ಹೊಡೆದಾಟದ ಹಂತ ತಲುಪಿದೆ. ಆ ಹೊತ್ತಿಗೆ ಅಂಗಡಿ ಮುಂದೆ ನಿಂತಿದ್ದ ಬಜೆಪಿ ಕಾರ್ಯಕರ್ತ ಬಾಲು, ತಮಿಳು ಹುಡುಗರನ್ನು ಸಮಾಧಾನಿಸಿ ಸೈಯದ್ ಸಿಕಂದರ್ ಮೇಲೆ ಹಲ್ಲೆ ನಡೆಸಿದ್ದಾನೆ. ವಿಷಯ ತಿಳಿದ ಸಿಕಂದರ್ ಮನೆಯವರು ಬಾಲುವಿಗೆ ಬಡಿದಿದ್ದಾರೆ.

ಇದೇ ಸಂದರ್ಭಕ್ಕೆ ಗದ್ದೆಯಿಂದ ಮನೆಗೆ ತೆರಳುತ್ತಿದ್ದ ಹಾಜಿ ಎಂಬುವರು ವಿಷಯ ತಿಳಿದು ತಮ್ಮ ದೂರವಾಣಿ ಮೂಲಕ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಕೆಲವರನ್ನು ಬಂಧಿಸುವ ಮೂಲಕ ಪರಿಸ್ಥಿತಿಯನ್ನು ಹತಬಂದಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ವ್ಯಕ್ತಿಗತ ಜಗಳವೊಂದರ ವಿಷಯ ಇಲ್ಲಿಗೆ ಸಮಾಪ್ತಿ ಯಾದಂತಾಯಿತು.

ವ್ಯವಸ್ಥಿತ ಸಂಚು

ಆದರೆ ವಿಷಯ ತಿಳಿದ ಕೋಮುವಾದಿಗಳು ಆ ಕ್ಷಣವೇ ಜಾಗೃತಗೊಂಡು ತಮ್ಮ ರಹಸ್ಯ ಅಜೆಂಡಾಕ್ಕನುಗುಣವಾಗಿ ಪೊಲೀಸರ ಮೇಲೆ ಪ್ರಭಾವ ಬೀರಿ ಅಮಾಯಕರನ್ನು ಪ್ರಕರಣದಲ್ಲಿ ಸಿಲುಕಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಇತ್ತೀಚೆಗೆ ತಾನೆ ಪಾಂಡವಪುರಕ್ಕೆ ಒಕ್ಕರಿಸಿರುವ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ನಾಗರಾಜ್ ಎಂಬ ಕಿರಾತಕ ಮತ್ತವನ ಪಡೆ ಚೆಡ್ಡಿಗಳ ತಾಳಕ್ಕೆ ಕುಣಿದು ಮಧ್ಯರಾತ್ರಿ ಅಲ್ಪಸಂಖ್ಯಾತ ವರ್ಗದ ಹಲವು ಮನೆಗಳಿಗೆ ಗೂಂಡಾಗಳಂತೆ ನುಗ್ಗಿ, ನಿದ್ರೆಯಲ್ಲಿದ್ದ ಅಮಾಯಕರನ್ನು ಬಂಧಿಸುವ ಮೂಲಕ ತಮ್ಮ ಪೌರುಷ ಮೆರಿದಿದ್ದಾರೆ! ಈ ಸಂದರ್ಭದಲ್ಲಿ ಮಹಿಳೆಯರೊಂದಿಗೂ ಅನುಚಿತವಾಗಿ ವರ್ತಿಸಿದ್ದಲ್ಲದೆ ಭಯದ ವಾತಾವರಣ ಸೃಷ್ಟಿಸಿದ್ದಾರೆ. ಗಲಭೆಯಲ್ಲಿ ಭಾಗವಹಿಸದ, ಪೊಲೀಸರಿಗೆ ವಿಷಯ ಮುಟ್ಟಿಸಿ ಹೆಚ್ಚಿನ ಅನಾಹುತ ತಪ್ಪಿಸಿದ ಹಾಜಿಯನ್ನೂ ಸಹ ಬಂಧಿಸಿದ್ದಾರೆ.

ಬಾಯಲ್ಲಿ ಬೆಣ್ಣೆ

ಆದರೆ 22 ರ ಬೆಳಿಗ್ಗೆ ಪರಿಸ್ಥಿತಿಯ ಅವಲೋಕನ ನಡೆಸಲು ಬಂದ ಡಿವೈಎಸ್‌ಪಿ ಸುರೇಶ್ ಮುಂದೆ ಬಜೆಪಿ ತಾಲ್ಲೂಕು ಅಧ್ಯಕ್ಷ ಮಂಜುನಾಥ್ ತನ್ನ ಕಿಡಿಗೇಡಿ ಪಟಾಲಂನೊಂದಿಗೆ ಠಾಣೆಗೆ ಬರುತ್ತಾನೆ. ರಾಜಿ ನಡೆಸಿ ವಿಷಯ ಸಮಾಪ್ತಿಗೊಳಿಸಲು ಯತ್ನಿಸಿದ ಪೊಲೀಸ್ ಮೇಲಾಧಿಕಾರಿಗಳ ಮನಸ್ಥಿತಿ ಅರಿತು ತನ್ನ ಪಟಾಲಂಗೆ ಮಂಜುನಾಥ್ ಕೆಲ ಸೂಚನೆ ನೀಡುತ್ತಾನೆ.

ಸೂಚನೆ ಸಿಕ್ಕ ತಕ್ಷಣ ಕಳ್ಳು ಕುಡಿದು ಕಪಿಗಳಂತಾದ ಬಜೆಪಿ ಭಟ್ಟಂಗಿಗಳು ಸಿನಿಮೀಯ ರೀತಿಯಲ್ಲಿ ಮಾರಕಾಸ್ತ್ರಗಳನ್ನು ಝಳಪಿಸುತ್ತಾ ಕಣ್ಣಿಗೆ ಕಂಡ ಅಲ್ಪಸಂಖ್ಯಾತರ ಮೇಲೆ ಮನಸೋಇಚ್ಛೆ ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಬಸ್‌ಸ್ಟ್ಯಾಂಡ್‌ನಲ್ಲಿ ಸೈಕಲ್ ಶಾಪ್ ನಡೆಸುತ್ತಿರುವ ಖಲೀಲ್ ಎಂಬುವರ ಇಬ್ಬರು ಮಕ್ಕಳು ಹಾಗೂ ಮತ್ತೊಬ್ಬ ಯುವಕ ತೀವ್ರತರ ಗಾಯಗಳಿಂದ ಆಸ್ಪತ್ರೆ ಸೇರುವಂತಾಗಿದೆ.

ಇಷ್ಟಕ್ಕೆ ಸುಮ್ಮನಾಗದ ಬಜೆಪಿಗಳು ಪಟ್ಟಣವನ್ನು ಬಲವಂತವಾಗಿ ಬಂದ್ ಮಾಡಿಸುವ ಮೂಲಕ ಭಯಭೀತಿಯ ವಾತಾವರಣ ಉಂಟು ಮಾಡಿದ್ದಾರೆ. ಇದಕ್ಕೆ ಕೋಮು ಗಲಭೆ ಎಂದು ಬಣ್ಣ ಕಟ್ಟಿ ಪಟ್ಟಣದಲ್ಲಿ ಅರಾಜಕ ವಾತಾವರಣ ಸೃಷ್ಟಿಸಲು ಹವಣಿಸಿದ್ದಾರೆ. ಸುಳ್ಳು ವದಂತಿಗಳ ಮೂಲಕ ಮಂಜುನಾಥ್, ನಾ. ಶಿವಣ್ಣ ಯಾದವೇಂದ್ರನಂತಹ ಅವಿವೇಕಿಗಳು ಕೋಮು ಸಂಘರ್ಷಕ್ಕೆ ಪ್ರಚೋದನೆ ನೀಡಿದ್ದಾರೆ.

ಆದರೆ ಚೆಡ್ಡಿಗಳ ಕುತಂತ್ರ ಅರಿತ ಪಟ್ಟಣದ ಜನತೆ, ಅದರಲ್ಲೂ, ಸುತ್ತಮುತ್ತಲಿನ ರೈತಾಪಿ ಮಂದಿ, ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿಯಂತಹ ಸಂಘಟನೆಗಳು ಹಾಗೂ ಪ್ರಗತಿಪರರು ಪಾಂಡವಪುರದ ಪರಂಪರೆಯಂತೆ ಪಟ್ಟಣದಲ್ಲಿ ಶಾಂತಿ ಕಾಪಾಡಿಕೊಂಡು ಬರುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಮಧ್ಯೆ ಚೆಡ್ಡಿಗಳ ಪ್ರಚೋದನೆ, ಭಯೋತ್ಪಾದನೆ ನಂತರ ಜಾಗೃತವಾದ ಜಿಲ್ಲಾಡಳಿತ ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಆಯೋಜಿಸಿ 144 ನೇ ಸೆಕ್ಷನ್‌ನ್ನು ಆ.25 ರವರೆಗೆ ವಿಸ್ತರಿಸಿದೆ. ಒಟ್ಟಾರೆ ಇಡೀ ಪ್ರಕರಣದಲ್ಲಿ ಸಂಘ ಪರಿವಾರ ಮತ್ತು ಬಜೆಪಿಯ ಪಾತ್ರ ಮಹತ್ತರದ್ದಾಗಿದ್ದು, ಪಟ್ಟಣದ ಶಾಂತಿ ಕದಡಿದ ಕಿರಾತಕರನ್ನು ಬಂಧಿಸದೆ ಪೊಲೀಸರು ದಿವ್ಯ ಮೌನದಲ್ಲಿದ್ದಾರೆ. ಚೆಡ್ಡಿಗಳ ತಾಳಕ್ಕೆ ಕುಣಿಯುವ ಎಸ್ಸೈ ನಾಗರಾಜ್ ಮತ್ತು ಆತನ ಬೆಂಗಾವಲು ಪೇದೆಗಳಿಗೆ ಸರ್ಕಾರ ತಕ್ಕ ಪಾಠ ಕಲಿಸಬೇಕಿದೆ. ಅಮಾಯಕರನ್ನು ಪ್ರಕರಣದಿಂದ ಮುಕ್ತಗೊಳಿಸಿ ರಾಜಾರೋಷವಾಗಿ ಅಡ್ಡಾಡಿಕೊಂಡಿರುವ ಹಾಗೂ ತಲೆ ಮರೆಸಿಕೊಂಡಿರುವ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷೆಗೆ ಒಳಪಡಿಸಬೇಕಿದೆ.

-ವರದಿಗಾರ

FIR ತಿದ್ದಿದ ಎಸ್ಸೈ

ಚೆಡ್ಡಿ ಮನಸ್ಸಿನ ಕಿರಾತಕ ಎಸ್ಸೈ ನಾಗರಾಜನ ಕೈಚಳಕ ಯಾವ ಮಟ್ಟಕ್ಕಿದೆ ಎಂದರೆ, ಪಾಂಡವಪುರದ ಚೆಡ್ಡಿ ಚತುರರ ಮಾತು ಕೇಳಿ ರಾತ್ರೋರಾತ್ರಿ FIR ನಲ್ಲಿ ಆರೋಪಿಗಳ ಹೆಸರನ್ನೇ ತಿದ್ದಿದ್ದಾನೆ. ರಾಜಿಸೂತ್ರದ ಮೂಲಕ ಮುಗಿದೇ ಹೋಗಬಹುದಾದ ಪ್ರಕರಣಕ್ಕೆ ಹೊಸ ಆಯಾಮ ನೀಡಿದ ಗಂಭೀರ ಆರೋಪ ಈತನ ಮೇಲಿದೆ.

ಘರ್ಷಣೆಯಲ್ಲಿ ಭಾಗಿಯಾಗಿರದ, ಊರಿನಲ್ಲಿ ಸಾಕಷ್ಟು ವಿದ್ಯಾವಂತ ಹಾಗೂ ಗೌರವಾನ್ವಿತ ಕುಟುಂಬ ಎಂದೇ ಹೆಸರು ಮಾಡಿರುವ ಮಹಿಳಾ ನ್ಯಾಯಾಧೀಶರೊಬ್ಬರ ಹತ್ತಿರದ ಸಂಬಂಧಿ ಹಾಜಿ ಎಂಬುವರನ್ನು ಬೇಕಂತಲೇ ಪ್ರಕರಣದಲ್ಲಿ ಸಿಲುಕಿಸುವ ಕಾರ್ಯವನ್ನು ನಾಗರಾಜ್‌ನಂತಹ ಪೊಲೀಸ್ ಕ್ರಿಮಿನಲ್ ಅತ್ಯಂತ ಯಶಸ್ವಿಯಾಗಿಯೇ ಮಾಡಿ ಮುಗಿಸಿದ್ದಾನೆ. ಈ ಕುಟುಂಬದ ಪ್ರಗತಿಪರ ಧೋರಣೆಯೇ ಇದಕ್ಕೆ ಮುಖ್ಯ ಕಾರಣ. ತಪ್ಪಿತಸ್ಥರು ಹೊರಗಿದ್ದರೆ, ಹಾಜಿಯಂತಹ ಅಮಾಯಕರು ನ್ಯಾಯಾಂಗ ಬಂಧನಕ್ಕೀಡಾಗಿ ಜೈಲಿನಲ್ಲಿ ಕೊಳೆಯುವಂತಾಗಿದೆ. ಚಿತಾವಣೆ ಎಂದರೆ ಇದೇ ತಾನೇ?

ನೆಲೆಗೆ ಬಲೆ

ಹಾಗೆ ನೋಡಿದರೆ ನೆಮ್ಮದಿಯ ತಾಣವಾದ ಪಾಂಡವಪುರದ ಶಾಂತಿಗೆ ಭಂಗ ತರುವ ಪ್ರಯತ್ನ ಸಂಘ ಪರಿವಾರದ ಪೂರ್ವಯೋಜಿತ ಸಂಚಿನ ಒಂದು ಭಾಗವೇ ಆಗಿದೆ. ಈ ಸಂಚಿಗೆ ಅನುಗುಣವಾಗಿ ಕೇವಲ ಒಂದು ತಿಂಗಳ ಹಿಂದೆಯಷ್ಟೇ ದಕ್ಷಿಣ ಕನ್ನಡ ಮೂಲದ ಇಬ್ಬರು ಆರೆಸ್ಸೆಸ್ ಫುಲ್‌ಟೈಮರ್ಸ್ ಪಟ್ಟಣಕ್ಕೆ ಬಂದು ಬೀಡುಬಿಟ್ಟಿದ್ದಾರೆ. ಸ್ಥಳೀಯ ಚೆಡ್ಡಿಗಳ ಬೆಂಬಲದೊಂದಿಗೆ ಸಣ್ಣ-ಪುಟ್ಟ ಜಗಳವನ್ನು ಕೋಮುಗಲಭೆಯೆಂದು ಚಿತ್ರಿಸಲು ಮತ್ತು ಪಟ್ಟಣದಾದ್ಯಂತ ಅರಾಜಕ ವಾತಾ ವರಣ ನಿರ್ಮಿಸಲು ಕಾರಣರಾಗಿದ್ದಾರೆ. ರೈತ ಹಿನ್ನೆಲೆಯ ಮುಗ್ಧ ಯುವಕರ ಮನಸ್ಸಿನಲ್ಲಿ ಕೋಮುದ್ವೇಷದ ಬೀಜ ಬಿತ್ತುತ್ತಿರುವ ಇವರನ್ನು ಗುರುತಿಸಿ ಪಟ್ಟಣದಿಂದ ಗಡಿಪಾರು ಮಾಡುವ ಕೆಲಸವನ್ನು ಜಿಲ್ಲಾಡಳಿತ ಕೈಗೊಳ್ಳ ಬೇಕಿದೆ.

ಹುಂಬ ಮಂಜು

ಅಂತೆಯೇ ಶೂದ್ರ ಅದರಲ್ಲೂ ಒಕ್ಕಲಿಗ ಸಮುದಾಯದ ಮುಗ್ಧ ಯುವಕರನ್ನು ಬಳಸಿಕೊಂಡು ಪಟ್ಟಣದ ಶಾಂತಿಗೆ ಆಗಿಂದಾಗ್ಗೆ ಭಂಗ ತರುವ ನಿರಂತರ ಯತ್ನದಲ್ಲಿ ಕಬ್ಬಿಣದ ಅಂಗಡಿ ನಾ. ಶಿವಣ್ಣನ ಪಾತ್ರ ಪ್ರಮುಖ ಎಂಬುದು ಪಟ್ಟಣದಲ್ಲಿ ಸದಾ ಶಾಂತಿ ಮತ್ತು ನೆಮ್ಮದಿ ಬಯಸುವ ಜನರ ಪ್ರಮುಖ ಆರೋಪ.

ಸೈಕಲ್ ಶಾಪ್‌ವೊಂದರಲ್ಲಿ ಕೆಲಸ ಮಾಡುತ್ತಾ ಕಡುಬಡ ಕಟುಂಬದ ಹಿನ್ನೆಲೆಯಿಂದ ಬಂದು ಈಗ ತಾಲ್ಲೂಕು ಬಜೆಪಿ ಅಧ್ಯಕ್ಷನಾಗಿರುವ ಮಂಜುನಾಥ್ ಎಂಬ ಹುಂಬನಿಗೆ ತನ್ನ ಕ್ರಿಮಿನಲ್ ಬುದ್ಧಿಯಿಂದ ತಲೆ ಕೆಡಿಸಿದವನೇ ನಾ. ಶಿವಣ್ಣ. ಮಂಜುನಾಥ್‌ನಂತಹ ಅನೇಕ ಅಮಾಯಕರ ಮನಸ್ಸಿನಲ್ಲಿ ಕೋಮುದ್ವೇಷದ ವಿಷಬೀಜವನ್ನು ಬಿತ್ತಿ ಅವರನ್ನು ತನ್ನಂತೆ ಕ್ರಿಮಿನಲ್‌ಗಳಾಗಿ ಪರಿವರ್ತಿಸುವುದೇ ಈತನ main agenda.

ಹುಂಬ ಮಂಜುನಾಥ್‌ನಂಥವರು ಕೋಮುವಾದಿ ಕಪಿಮುಷ್ಠಿಯಿಂದ ಹೊರಬಂದು ಎಲ್ಲಾ ಜನರ ಪ್ರೀತಿ ವಿಶ್ವಾಸಗಳಿಸುವ ಕಾರ್ಯಕ್ಕೆ ಮುಂದಾದರೆ ಈತ ಭವಿಷ್ಯದಲ್ಲಿ ಉತ್ತಮ ನಾಯಕನಾಗಿ ಬೆಳೆಯುವ ಲಕ್ಷಣಗಳಿವೆ. ಪಾಂಡವಪುರದ ಘರ್ಷಣೆಯಲ್ಲಿ ಬಜೆಪಿಯ ಓಟಿನ ರಾಜಕಾರಣವೂ ಪ್ರಧಾನ ಪಾತ್ರ ವಹಿಸಿದೆ. ಗಾರೆ ಕೆಲಸ, ಕೂಲಿ ಮಾಡಿಕೊಂಡು ಜೀವಿಸುತ್ತಿರುವ ತಮಿಳಿಗರ ಓಟಿನ ಮೇಲೆ ಕಣ್ಣಿಟ್ಟ ಬಜೆಪಿ ಮುಖಂಡನೋರ್ವ ಪುರಸಭಾ ಸದಸ್ಯನಾಗುವ ಭ್ರಮೆಯಲ್ಲಿ ಈ ರಾದ್ಧಾಂತ ಸೃಷ್ಟಿಸಿದ್ದಾನೆ. ಇದು ಪ್ರಕರಣದ ಮತ್ತೊಂದು ಆಯಾಮ.

ಪಿ.ಕೆ. ಮಲ್ಲನಗೌಡರ್ — ಬಿಟ್ bit ಹಿಡಿ!

ಹೊಯ್ ರೆಡ್ಡಿ,

ಏನ್ ತೋರಿಸಿದ್ಯಪಾ? ಒಂದ್ ಮಕ ಕಾಣಂಗಿಲ್ಲ, ಗಿಕ ಕಾಣಂಗಿಲ್ಲ... ಮಾತಾಡಿದ್ದೂ ಚೊಲೊ ಕೇಳಂಗಿಲ್ಲ... ಅದೂ ಬಾಡಕೊಗಳು ಹಿಂದಿ ಮಾತಾಡ್ತವು.... ಬಾಳಾ ಚಾಲೂ ಅದಿರಿ ಬಿಡು ನೀವೆಲ್ಲ ಅದಿರಿನವು..... ನೀ ನೋಡಿದ್ರ ಆಂಧ್ರದಾವ... ಆ ಬಲ್ಲಾಟೊ ನನ್ಮಗ, ಮೋದಿ ನನ್ಮಗ ಎಲ್ಲಾ ಹಿಂದಿಯೋರು... ಅದಕ್ಕ ಕುಮಾರಮಾಮ ನಿಮ್ಗ ರೊಕ್ಕ ಕೊಡ್ರಿ ಅಂದಿದ್ದು.... ಕನ್ನಡ ಮಣ್ಣು ಕನ್ನಡ ಅದಿರು ಅಂದ್ರ ಅಷ್ಟ್ ಪ್ರೀತಿ ನಮ್ ಕುಮಾರ ಮಾಮಾಗ.... ಅದ್ನೆಲ್ಲಾ ನೀವ್ ಫಾರಿನ್‌ಗೆ ಕಳಿಸ್ತಾ ಇದ್ರ, ಸುಮ್ನೆ ಬಿಡ್ತಾರನು? ಹೌದ್ದಲೇ ರೆಡ್ಡಿಗಾರು, ಇದೆಲ್ಲಾ ಆಟ ಬ್ಯಾಡ.... ಚನ್ನಿಗಪ್ಪ ಎಂತಾ ಚೊಲೋ ಮನುಸ್ಯಾ ನಿಂಗೇನು ಗೊತ್ತು? ಅಂವಾ ಪಿ.ಸಿ. ಇದ್ದಾಗ ಯಾವನೋ 500 ರೂ. ಲಂಚಾ ಕೊಡಕಾ ಬಂದಿದ್ನಂತ....



``No, sorry'' ಅಂತಾ ಮಕಕ್ಕೆ ಹೊಡೆದಂಗ ಹೇಳಿದ್ನಂತೆ ನಮ್ ಚನ್ನಿಗಪ್ಪ.... ಅಂತಾವ ನೋಟಿನ ಬಂಡಲ್ ಎಣಿಸಿದ ಅಂದ್ರ ಯಾರ್ ಸಂಬ್ತಾರೋ ರೆಡ್ಡಿ?



ಅಲ್ಲಪಾ ಶೂರ, ಕವಿತಕ್ಕನ ಅಕೌಂಟ್ ನೋಡಾಕ್ ನೀನ್ಯಾರೋ ಪುಟಗೋಸಿ? ಆಕಿ ರೊಕ್ಕ, ಆಕಿ ಅಕೌಂಟು, ಆಕಿ ಮನಸು... ಇಲ್ಲಿ ನಿಂದೆನಪಾ ಕಿತಬಿ? ನೀವ್ ಮೂವಾರು ಬ್ರದರ್ಸು ಎಲ್ಲಾ ನಿಮ್ ನಿಮ್ ಹೆಸರನ್ಯಾಗ ವ್ಯವಹಾರ ಮಾಡ್ತಿರಿ... ನೀವೆಲ್ಲಾ ಸ್ತ್ರೀಶೋಷಕರು... ಆದ್ರ ಗೌಡ್ರ ಮನೆ ಗಂಡಸರು ಸ್ತ್ರೀವಾದಿಗಳು, ಸಮತಾವಾದಿಗಳು. ಅದಕ್ಕ ಹೆಣ್ಮಕ್ಕಳ್ಗೂ ಆರ್ಥಿಕ ಸ್ವಾತಂತ್ರ್ಯ ಇರ್ಲಿ ಅಂತಾನೇ ಕವಿತಕ್ಕ, ಅನಿತಕ್ಕ ಎಲ್ಲಾರ ಅಕೌಂಟಗೂ ರೊಕ್ಕ ಬರ್ರೈತಿ... ಅವ್ರ ಅಂಕೌಂಟಂದ ಜಯಮ್ಮಂಗ ರೊಕ್ಕ ಹೋಗ್ಯೈತಿ... ಜಯಮ್ಮನೂ ಹೆಣ್ಮಗಳು ಹೌದಲ್ಲ? ಸ್ತ್ರೀಶಕ್ತಿ ಅಂದ್ರ ಇದಾ ನೋಡು! ಹಳ್ಳಿ ಹಳ್ಳ್ಯಾಗ ಸ್ತ್ರೀಶಕ್ತಿ ಸಂಘ ಅದಾವಲ್ಲ... ಅಲ್ಲೀನೂ ಎಲ್ಲಾ ಮೆಂಬರಿಗೆ ಅಕೌಂಟು ಅದಾವು, ತಿಳ್ಕೊ ಬುದ್ಧಿಗೇಡಿ!

ಕವಿತಕ್ಕಗ 'ರಿಸರ್ವ್ ಬ್ಯಾಂಕ್' ಅಂದಿಯಲ್ಲ... ಇದೆಲ್ಲ ನಮ್ ಹತ್ರ ನಡ್ಯದಿಲ್ಲ... ನೀ ಏನ್ ಕಡಿಮೆ ಅದಿ ಬಿಡು... ಕವಿತಕ್ಕ ರಿಸರ್ವ್ ಬ್ಯಾಂಕ್ ಆದ್ರ ನೀನು ಎನ್ನೋಬಲ್ ಬ್ಲೇಡ್ ಫೈನಾನ್ಸ್ ಆಗ್ತಿ ಅಷ್ಟ....

ಅದೆಲ್ಲ ಇಲ್ಲಿ ನೀವ್ಯಾಕ್ ಲಂಚ ಕೊಡಾಕ ಹೋಗಿದ್ರ್ಯಪ್ಪ.. ಅದೂ ನಿನ್ ಮೈನ್ಸು ಆಂಧ್ರದಾಗ ಐತಿ ಅಂತಿ.... ನಿನಗ್ಯಾಕ್ ಬೇಕಿತ್ತು ಈ ಸಿಡಿ ಮಾಡೋ ಉಸಾಬರಿ!

ನೆನಪು ಇಟ್ಕೊ, ಕವಿತಕ್ಕ ಎರಡಲ್ಲ ಇಪ್ಪತ್ತು ಅಕೌಂಟ್ ಮಾಡಿಸ್ಯಾಳ... ಯಾರ್ದೂ ಹೆದ್ರಂಗಿಲ್ಲ ಕವಿತಕ್ಕ

ಮಾತೆತ್ತಿದ್ರ ಕೇಳ್ತಾಳ ಗಣಿ ರೊಕ್ಕ

-ಮುನ್ನಿ (Zero Hour)

ಧಾರವಾಡ


ಉಂಡು ಮಲಗೋದಷ್ಟೇ ...ಳ್ಳಿಗರ ಕೆಲಸವೆ?



ಅದೊಂದು ಹಳ್ಳಿ ವಾಸ್ತವ್ಯ ಮನೆ. ಚಪಾತಿ, ಜೋಳದ ರೊಟ್ಟಿ, ಚಟ್ನಿ, ಗಟ್ಟಿಬ್ಯಾಳಿ, ಗೋಬಿ ಸಲಾಡ್, ಚಿತ್ರಾನ್ನ, ಶೇಂಗಾ ಹೋಳಿಗೆ, ಮಾವಿನ ಹಣ್ಣಿನ ಬರ್ಫಿ, ಡಾಲರ್ ಜಿಲೇಬಿ ಊಟ.... ಸೊಲ್ಲಾಪುರದ ಅಡುಗೆ ಭಟ್ಟರು ತಯಾರಿಸಿದ ಅಡುಗೆಯಿದು. ಅವರು ಶೇಂಗಾ ಹೋಳಿಗೆ, ಅನ್ನ ಸಾರು ತಿಂದರು. ಶುಭ್ರ ಬೆಡ್‌ಶೀಟ್ ಹೊದಸಿದ ಮೆತ್ತನೆ ಗಾದೆ. ಮೇಲೊಂದು ಫ್ಯಾನ್. 'ಅವರು' ಆರಾಮಾಗಿ ಮಲಗಿ ಎದ್ದರು. ಭೀಮೆಯ ನೀರಲ್ಲಿ ಬಚ್ಚಲಲ್ಲಿ ಸ್ನಾನ ಮಾಡಿದರು. ಬಿಸ್ಲೇರಿ ನೀರು ಕುಡಿದರು.

ಇದು ನಮ್ಮ ಮುಖ್ಯಮಂತ್ರಿಗಳ ಹಳ್ಳಿ ವಾಸ್ತವ್ಯದ ಪರಿ!

ಹಲೋ ಕುಮಾರಸ್ವಾಮಿಯವರೆ, ಹಳ್ಳಿ ಎಂದರೆ ಒಳ್ಳೆ ಮೃಷ್ಟಾನ್ನ ಭೋಜನ ಮಾಡಿ, ಒಳ್ಳೆ ನಿದ್ದೆ ಹೊಡೆಯೋದಲ್ಲ ಸರ್... ಯಾವುದೋ ಪಾಳೆಗಾರ ಗೌಡನ ಮನೆಯಲ್ಲಿ ಆತಿಥ್ಯ ಪಡೆದು, ಫೋ... ತೆಗೆಸಿಕೊಂಡು ಪ್ರಚಾರಕ್ಕೆ ಹಾತೊರೆದಿದ್ದಿರಲ್ಲ... ನೀವು ನಿರ್ಮಾಪಕರೋ, ನಟರೋ? ಅಲ್ಲಿಯ ಒಂದು ಹೊಲಕ್ಕೆ ಹೋಗಬೇಕಿತ್ತು, ಯಾರ್ಯಾರ ಸಾಲ ಎಷ್ಟಿವೆ ನೋಡಬೇಕಿತ್ತು, ಎಷ್ಟು ಜನ ಬೆಂಗಳೂರಿಗೆ ಗುಳೆ ಹೋಗಿದ್ದಾರೆ ಎಂದು ತಿಳಿಯಬೇಕಿತ್ತು, ಎಲ್ಲದಕ್ಕೂ ಮುಖ್ಯವಾಗಿ ನೀವು ಒಬ್ಬ ದಲಿತನ ಮನೆಯಲ್ಲಿದ್ದ ಇರಬೇಕಿತ್ತು, ಡ್ರಾಮಾ ಸಾಕು ಮಾಡಿ ಕುಮಾರಸ್ವಾಮಿ.



ಒಂದು CD ಗವನ



'ಮರಿ ಗದ್ದರ್' ರಾಜ್‌ಕುಮಾರ್

ಸಿಗಲಿಲ್ಲ ಅಕ್ಷರದರಿವು
ಕಲಿಸೆಂದರೆ ಏಟು
ಕೊಡುವ ಮಾಸ್ತರು....
ವಿಪರೀತ ಹೊಟ್ಟೆ ಹಸಿವು
ನೀಡೆಂದರೆ ಬೈಗುಳ
ಹರಿಸುವ ರೇಶನ್ ಶಾಪು....
ಚಳಿ, ಬಿಸಿಲು, ಗಾಳಿ
ಎದುರಿಸಿ ಮಲಗೋಣ
ಎಂದರೆ ಎತ್ತಂಗಡಿ
ಆಯ್ತು ಸ್ಲಮ್ಮಿಗೆ ಸ್ಲಮ್ಮೇ...
ಇದಕೊಂದು ಹೆಸರು
ಬೇರೆ ಕೇಡು
ಸಾಮೂಹಿಕ ಬೇಟೆ ಅಂತೆ
ಇದು ನಿತ್ಯ ನಡೆವ ಸಲ್ವಾ-ಜುಡಮ್!

ಒಂದು 'ಗಾದಿ' ಮಾತು

ಕೊಟ್ಟೋನು ಭಜರಂಗಿ
ಎಣಿಸಿದೋನು ಕೋಡಂಗಿ
ಇಸಿಗೊಂಡೋರು ಸಿ.ಎಮ್ ಅರ್ಧಾಂಗಿ!

ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಮಾಲತಿ ಪೋಳಗೆ ಕಾಂಚಾಣವೋ ಕಾಂಚಾಣ!

ಕಳೆದ ವಾರ ಸ್ವಾತಂತ್ರ್ಯೋತ್ಸವದ ಹೆಸರಲ್ಲಿ ಪಿಂಚಣಿ ಎತ್ತುವ ಗಂಗಾಂಬಿಕೆಯ ಚರಿತೆಯ ಓದಿದಿರಿ.

ಈ ಸಾರಿ ನಿಮ್ಮನ್ನು ಮಾಲತಿ ಪೋಳ ಅವರು ಭೇಟಿ ಆಗುತ್ತಿದ್ದಾರೆ. ಈಕೆ ಧಾರವಾಡ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ. ಮಹಿಳಾ ಕಲ್ಯಾಣವೂ ಇಲ್ಲ, ಮಕ್ಕಳ ಕಲ್ಯಾಣವೂ ಇಲ್ಲ... ಮಧ್ಯೆ ಇರುವ 'ಮತ್ತು' (ಮದ) ಒಂದೇ ಈಕೆಯ ಗುಣಲಕ್ಷಣ.

ಇತ್ತ ಕಿವುಡ, ಮೂಕ ಮಕ್ಕಳ ಸಹಾಯಧನವನ್ನು ಬಿಡುವುದಿಲ್ಲ, ಏಕೆಂದರೆ ಕೇಳಲು ಈ ಮಕ್ಕಳಿಗೆ ಬಾಯಿ ಇಲ್ಲ. ಅತ್ತ ಬುದ್ಧಿಮಾಂದ್ಯ ಮಹಿಳಾ ಅನುಪಾಲನಾ ಮಂದಿರವನ್ನೂ ಅಧ್ವಾನ ಮಾಡದೇ ಇರುವುದಿಲ್ಲ, ಏಕೆಂದರೆ ಪಾಪ, ಈ ಬುದ್ಧಿಮಾಂದ್ಯ ಹುಡುಗಿಯರಿಗೆ ಅದೇನೂ ಅರ್ಥ ಆಗುವುದಿಲ್ಲ.

ಎರಡು ರೆಡ್ ಹ್ಯಾಂಡ್ ಕೇಸ್!

ಇತ್ತೀಚೆಗಷ್ಟೇ ಮಾಲತಿಯ ಇಲಾಖೆಗೆ ಸಂಬಂಧಿಸಿದ ಎರಡು ಅಪರಾ ತಪರಾಗಳು ಬಟಾಬಯಲಾಗಿ ಪೊಲೀಸ್ ಠಾಣೆಯವರೆಗೂ ಮುಟ್ಟಿ, ಜಿಲ್ಲೆಯಾದ್ಯಂತ ಮಹಿಳೆ, ಮಕ್ಕಳ ಹೆಸರಲ್ಲಿ ಲೂಟಿ ಮಾಡುತ್ತಿರುವವರ ಕುರಿತೇ ಚರ್ಚೆ ನಡೆದಿದೆ.



ಎ.ಬಿ. ದೇಸಾಯಿ

ಧಾರವಾಡದ ಟೋಲ್‌ನಾಕ್ ಬಳಿ ಇರುವ ಕಿವುಡು ಮತ್ತು ಮೂಕ ಮಕ್ಕಳ ಖಾಸಗಿ ವಸತಿ ಶಾಲೆಯ ಹಗರಣ ಒಂದು, ಹುಬ್ಬಳ್ಳಿಯಲ್ಲಿಯ ಬುದ್ಧಿಮಾಂದ್ಯ ಮಕ್ಕಳ ಮತ್ತು ಮಹಿಳೆಯರ ಸರ್ಕಾರಿ ಅನುಪಾಲನಾಗೃಹದ ಹಗರಣ ಮತ್ತೊಂದು.

ಆಗಸ್ಟ್ 13 ರಂದು ಕಿವುಡು ಮತ್ತು ಮೂಕ ಮಕ್ಕಳು ಧಾರವಾಡದಲ್ಲಿ ಅನಾಥರಂತೆ ಬೀದಿಯಲ್ಲಿ ಅಳುತ್ತಾ ನಿಂತಿವೆ. ದೈಹಿಕ, ಮಾನಸಿಕ ಹಿಂಸೆಯಿಂದ ತತ್ತರಿಸಿ ಹೋಗಿದ್ದ ಈ ಅಮಾಯಕ ಮಕ್ಕಳನ್ನು ಛಾಯಾಗ್ರಾಹಕರೊಬ್ಬರು ಪೊಲೀಸ್ ಠಾಣೆಗೆ ಕರೆ ತಂದು, ದೂರು ಕೊಟ್ಟಾಕ್ಷಣ ಆ ವಸತಿ ಶಾಲೆಯ ಕಾರ್ಯದರ್ಶಿ ಮಹಾದೇವಪ್ಪ ಮೇಗೂರು ಮತ್ತು ಅವನ ಪ್ರೇಯಸಿ, ವಾರ್ಡನ್ ಕಮಲವ್ವ ಅಲಿಯಾಸ್ ಶೋಭಾ ವಡ್ಡರ ಎಂಬ ಕ್ರೂರ ಪ್ರಾಣಿಗಳನ್ನು ಎಳೆದು ಜೈಲಿಗೆ ತರಲಾಗಿದೆ. ಇನ್ನೊಂದು ಕಾಡುಮೃಗ ಲಿಂಗರಾಜ ಪರಾರಿಯಾಗಿದೆ. ಈಗ ಜೈಲಲ್ಲಿದ್ದವರು ಬೇಲ್ ಮೇಲೆ ಹೊರಬಿದ್ದಿದ್ದಾರೆ.

ನಾಮಕಾವಸ್ಥೆ ಈ ಸಂಸ್ಥೆ ಅಧ್ಯಕ್ಷನಾದ ಡಾ. ಭಾವಿಕಟ್ಟಿ ತನಗೂ ಇದಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ ಮಲಗಿದ್ದಾನೆ. ಪ್ರತಿವರ್ಷ 15 ಲಕ್ಷ ರೂ. ಕೇಂದ್ರ ಅನುದಾನ ಪಡೆಯುವ ಈ ಸಂಸ್ಥೆಯಲ್ಲಿ ಮಕ್ಕಳನ್ನು ಹಿಂಸಿಸಿ, ಅರೆಹೊಟ್ಟೆಯಲ್ಲಿ ಮಲಗಿಸಿ, ಕಾಂಚಾಣ ಎತ್ತುತ್ತಲೇ ಇದೆ ಮ್ಯಾನೇಜ್‌ಮೆಂಟ್! ಮಾಲತಿ ಪೋಳಳಂತಹ ತಿನ್ನಬಡಕಿ ಇರುವಾಗ ಯಾರ ಹೆದರಿಕೆ?



ಮಾಲತಿ ಪೋಳ

1984 ರಲ್ಲಿ ಈ ಶಾಲೆ ಆರಂಭಿಸಿದ ಮೇಗೂರು ಮಹಾದೇವ ನಿವೃತ್ತ ಸ್ಕೂಲ್ ಹೆಡ್‌ಮಾಸ್ತರ್. ಹೆಂಡತಿ ತೊರೆದು, ವಿಜೇಂದ್ರ ಎಂಬ ಪುತ್ರನ ಜೊತೆ ಬದುಕಲು ಆರಂಭಿಸಿದ. ತನ್ನ ವಸತಿ ಶಾಲೆಯ ಪ್ಯೂನ್ ಶೋಭಾ ವಡ್ಡರಳೇ ಪ್ರೇಯಸಿ ಆದಳು. ಮಂಗ ಮಗ ವಿಜೇಂದ್ರನಿಗೆ ಸುರೇಖಾ ಎನ್ನುವ ಹುಡುಗಿಯೊಂದಿಗೆ ಲಗ್ನ ಮಾಡಿ, ಇಬ್ಬರಿಗೂ ಯಾವ ತರಬೇತಿ ಇರದಿದ್ದರೂ ತನ್ನ ಶಾಲೆಯ ಟೀಚರ್‌ಗಳನ್ನಾಗಿ ಮಾಡಿದ. ಒಟ್ಟೂ ಹದಿನಾಲ್ಕು ಜನ ಸಿಬ್ಬಂದಿಯಲ್ಲಿ ಇಬ್ಬರೇ ಇಬ್ಬರು ತರಬೇತಿ ಪಡೆದವರು. ಪ್ರತಿ ತಿಂಗಳು ಮಗುವೊಂದಕ್ಕೆ ರೂ. 540 ಅನುದಾನ ಬರುತ್ತದೆ. ನೆಟ್ಟಗೆ 200 ರೂ. ಖರ್ಚು ಮಾಡುತ್ತಿಲ್ಲ. ಪ್ರತಿ ಶಿಕ್ಷಕನಿಗೆ 5,800 ರೂ. ಸಂಬಳ ಬಂದರೆ, ಶಿಕ್ಷಕರಿಗೆ ಸಿಗುವುದು 1200 ರೂ. ಮಾತ್ರ! ಉಳಿದದ್ದೆಲ್ಲಾ ಮೇಗೂರ್, ಶೋಭಾ ಒಡಲು ಸೇರುತ್ತದೆ. ಏಳೋ ಎಂಟು ತಿಂಗಳಿಗೊಮ್ಮೆ ಹೇರ್ ಕಟಿಂಗ್ ಭಾಗ್ಯ ಇಲ್ಲಿಯ ಮಕ್ಕಳಿಗೆ! ವರ್ಷಕ್ಕೊಮ್ಮೆ ಕೊಬ್ಬರಿ ಎಣ್ಣೆ. ಯಾವಾಗಲೋ ಒಮ್ಮೆ ಸೋಪು... ಬುಳುಸು ಬಂದ ಅಕ್ಕಿಯಿಂದ ತಯಾರಿಸಿದ ಕಳಪೆ ಊಟ! ಮಾತೇ ಆಡದ ಮಕ್ಕಳ ಆಕ್ರಂದನ ಈ ಸಮಾಜಕ್ಕೆ ಕೇಳುವುದೇ ಅಪರೂಪ. ಜಿಲ್ಲಾ ಉಸ್ತುವಾರಿ ಸಚಿವ ಜಗದೀಶ್ ಶೆಟ್ಟರ್ "ಏನ್ ಹೊಲಸು ಆಕ್ಕಿ ಆದಾವ್ರಿ" ಅಂತಾ ಹೇಳಿ ಹೋಗಿದ್ದಷ್ಟೇ ಬಂತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಎಚ್.ಕೆ. ಕುಮಾರಸ್ವಾಮಿ ಇಂತಹ ಸ್ಕೂಲ್‌ಗೆ ಭೇಷ್ ಭೇಷ್ ಎಂದು ಹೋಗಿದ್ದಾನೆ. ಮಾಲತಿ ಪೋಳಳಂತಹ ಉಪನಿರ್ದೇಶಕಿ ಇರುವಾಗ ಇನ್ನೇನಾಗುತ್ತೆ?

ಧಾರವಾಡ

ಗೋಲ್ 'ಮಾಲ್'ತಿ'ಯ ಗ್ರಹಚಾರ

ಕಳೆದ ಮೂರು ವರ್ಷಗಳಿಂದ ಧಾರವಾಡ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಅಂಟಿಕೊಂಡೇ ಕುಳಿತಿದ್ದಾಳೆ ಈ ಮಹಾತಾಯಿ ಮಾಲತಿ.. ಗೋಲ್ 'ಮಾಲ್'ತಿ'! ಈಕೆಯನ್ನು ಇಲ್ಲಿಗೆ ತಂದವನು ಮಾಜಿ ಶಾಸಕ ಚಿಡ್ಡಿ ಚಂದ್ರಕಾಂತ ಬೆಲ್ಲದ. ಈಗ ಟ್ರಾನ್ಸ್‌ಫರ್ ತಪ್ಪಿಸಿದವರು ಚಿಡ್ಡಿ ಶಾಸಕ ಚಿಕ್ಕನಗೌಡ್ರ ಮತ್ತು ಸಚಿವ ಶೆಟ್ಟರ್. ಧಾರವಾಡದ ಘಂಟಿಕೇರಿಯ 'ಮಹಿಳೆ, ಮಕ್ಕಳು, ಬಾಲಕಿಯರ ಮಂದಿರ'ದಿಂದ 80 ಮಕ್ಕಳ ಮಾರಾಟಕ್ಕೆ ಮಾಲತಿಯ ಸಮ್ಮತಿ ಇದೆ. ಇಲ್ಲಿಯ ವಾರ್ಡನ್ ಲಲಿತಾ ಮಹಿಳೆಯರ ಸರಬರಾಜು ಮಾಡುತ್ತಾಳೆ ಎನ್ನುವ ಆರೋಪವೂ ಇದೆ. ಹಾಗೆಯೇ 'ಸರ್ಕಾರಿ ಮಂದಮತಿ ಬಾಲಕಿಯರು, ಮಹಿಳೆಯರ ಅನುಪಾಲನಾ ಗೃಹ'ದ ಅಧಿಕಾರಿ ಎ.ಬಿ ದೇಸಾಯಿ ಎಂಬ ಮಹಿಳೆ ಧಾರವಾಡದಲ್ಲಿ 9 ವರ್ಷದಿಂದ ಗಟ್ಟಿಯಾಗಿ ಕುಳಿತಿದ್ದಾಳೆ. ಸುಮ್ಮನೆ ಕುಳಿತಿಲ್ಲ, ಅಪರಾ ತಪರಾ ಮಾಡುತ್ತಲೇ ಇರುತ್ತಾಳೆ. ಇವರಿಗೆಲ್ಲ ಬೆಂಗಾವಲಾಗಿ ಬೆಂಗಳೂರು ಹೆಡ್ ಆಫೀಸಿನ ಜಾಯಿಂಟ್ ಡೈರೆಕ್ಟರ್ ಫಾತೀಮಾ ನಿಂತಿದ್ದಾರೆ.

ಆಗಸ್ಟ್ 15 ರಂದು ಉತ್ತರ ಕರ್ನಾಟಕ ಅಂಗವಿಕಲ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಘನಶ್ಯಾಮ್ ಭಾಂಡಗೆ ಸರ್ಕಾರಿ ಬುದ್ಧಿಮಾಂದ್ಯ ಮಹಿಳೆಯರ ಮತ್ತು ಮಕ್ಕಳ ಅನುಪಾಲನಾ ಗೃಹಕ್ಕೆ ಹಣ್ಣು ಕೊಡಲು ಹೋಗದಿದ್ದರೆ ಹೆಣ್ಣುಮಕ್ಕಳು ದೈಹಿಕ ಹಿಂಸೆಯಿಂದ ಹಣ್ಣಾಗುವುದು ತಪ್ಪುತ್ತಿರಲಿಲ್ಲ. ಅವತ್ತು ಮಕ್ಕಳ ಫೋಟೋ ತೆಗೆದ ಪತ್ರಕರ್ತರ ವಿರುದ್ಧವೇ ಸಚಿವ ಎಚ್.ಕೆ. ಕುಮಾರಸ್ವಾಮಿಗೆ ಸುಳ್ಳು ದೂರು ನೀಡಿದ್ದಾಳೆ ಅಧಿಕಾರಿ ಶ್ರೀಮತಿ ಎ.ಬಿ. ದೇಸಾಯಿ.

ತೀರಾ ಗಬ್ಬೆದ್ದು ಹೋಗಿರುವ ಈ ಅನುಪಾಲನಾ ಗೃಹದಲ್ಲಿ ಜೀವಿಸುವುದೇ ಕಷ್ಟಕರ ಎಂಬ ಪರಿಸ್ಥಿತಿ ಇದೆ. ಕಳ್ಳ ಕಾಂಚಾಣದಿಂದ ಮಾಲತಿಪೋಳ, ಎ.ಬಿ. ದೇಸಾಯಿ, ಲಲಿತಾರಂತಹವರು ಮಹಡಿ ಮೇಲೆ ಮಹಡಿ ಕಟ್ಟಿಸುತ್ತಲೇ ಇದ್ದಾರೆ.




ಲಲಿತಾ

ಜಿಲ್ಲೆಯಲ್ಲಿರುವ ಇಂತಹ ಎಲ್ಲ ಸಂಸ್ಥೆಗಳಿಂದ ತಲಾ 15 ಸಾವಿರದಷ್ಟು ಮಾಮೂಲಿ ಅಧಿಕಾರಿಗಳ ಜೇಬು ಸೇರುತ್ತಿದೆ.

ಜೆಡಿಎಸ್‌ನ ಮಹಿಳಾ ನಾಯಕಿ ಲೀಲಾ ಹಾಗರಗಿ ನಡೆಸುವ ವಿವೇಕಾನಂದ ವಿದ್ಯಾ ಸಮಿತಿಗೆ ಕಟ್ಟಡವೇ ಇಲ್ಲ. "ನೂರು ಮಕ್ಳು ಕಲಿತಾವ" ಎನ್ನುವ ಈಕೆ ಮಕ್ಕಳನ್ನು ತೋರಿಸು ಎಂದರೆ ಕಕ್ಕಾಬಿಕ್ಕಿ ಆಗುತ್ತಾಳೆ. ಅನುದಾನ ನುಂಗಿ ಉಸ್ ಎನ್ನುತ್ತಲೇ ಇರುತ್ತಾಳೆ.

ಇಲ್ಲಿ ನೀಡಿರುವ ಫೋಟೋಗಳೇ ಎಲ್ಲ ಕತೆ ಹೇಳುತ್ತವೆ. ಕೊನೆಕೊನೆಗೆ ಅಂಗವಿಕಲರ ಸಂಘದ ಭಾಂಡಗೆಯೇ ಇಲಾಖೆಯೊಂದಿಗೆ ಕಳ್ಳ ಮೈತ್ರಿ ಮಾಡಿಕೊಂಡಿರುವ ಸುದ್ದಿ ಬರುತ್ತಿದೆ. ಮಹಿಳೆ, ಮಕ್ಕಳ ಕಲ್ಯಾಣವಾಯ್ತೊ ಇಲ್ಲವೋ? ಕಾಂಚಾಣ ಮಾತ್ರ ಹೆಗ್ಗಣಗಳ ಪಾಲಾಗುತ್ತಿದೆ. ಸಚಿವ ಎಚ್.ಕೆ. ಕುಮಾರಸ್ವಾಮಿಗೂ ಪಾಲು ಸರಿಯಾಗೇ ತಲುಪುತ್ತಿದೆ.

–ವರದಿಗಾರ



ಹಾಸ್ಟೆಲ್‌ಗಳ ಅವ್ಯವಸ್ಥೆ

ಶ್ರೇಷ್ಠಿಗಳ ಮೆರವಣಿಗೆ

ಕಾಂಗ್ರೈ ಯಂಕಣ್ಣ ಯಾದವನ ಉರವಣಿಗೆ!

ಹಿಂದೆಮುಂದೆ ನೋಡದೆ ಮೈಮೇಲೆ ಏರಿ ಹೋಗಿ ಹಲ್ಲೆ ಮಾಡುವುದು ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಯಂಕಣ್ಣನ ಯಾದವನ ಹುಂಬತನವೊ, ಹಾಬಿಯೋ? ಊಂಹು, ಸಾರ್ವಜನಿಕರ ದುಡ್ಡನ್ನು ತಿಂದುಂಡು ಬೆಳೆದಿರುವ ಕೊಬ್ಬು ಅದು.

ಜಲಾನಯನ ಅಭಿವೃದ್ಧಿ ಇಲಾಖೆಯ ಕೃಷಿ ಸಹಾಯಕ ದೇವೇಶ್ ಬಳಿ ಹೋದ ಯಂಕಣ್ಣ ಒಂದಿಷ್ಟು ಸಿಮೆಂಟ್ ಚೀಲಗಳನ್ನು (ಖಾಲಿ ಚೀಲಗಳಲ್ಲ!) ಕೊಡು ಎಂದಿದ್ದಾನೆ. ಹೌದು, ಮಾಜಿಯಾಗಿದ್ದರೂ ನೇರಾನೇರ ಎಂಜಲು ಬೇಡುವುದು ಯಂಕಣ್ಣನಿಗಂಟಿರುವ ರೋಗ. ದೇವೇಶ್ ಇಲ್ಲ ಎನ್ನುತ್ತಿದ್ದಂತೆ, ಯಂಕಣ್ಣ ದೇವೇಶ್ ಮೇಲೆರಗಿ ಹಲ್ಲೆ ಮಾಡಿಬಿಟ್ಟಿದ್ದಾನೆ. ಆರ್ಯ ಸಮಾಜದ ಶ್ರೇಷ್ಠಿಗಳ ಬೆಂಬಲ ಪಡೆದ ದೇವೇಶ್ ಸೀದಾ ಠಾಣೆಗೆ ಹೋಗಿ ದೂರು ದಾಖಲಿಸಿದ್ದೇ ತಡ, ಯಂಕಣ್ಣನನ್ನು ಜೈಲಿಗೆ ದಬ್ಬಲಾಗಿತ್ತು. ರಾಜಕಾರಣಿ, ಅಧಿಕಾರಿಯೊಬ್ಬನ ನಡುವಿನ ಕಿತ್ತಾಟ ಈಗ ಎರಡು ಜಾತಿಗುಂಪುಗಳ ಕಿತ್ತಾಟವಾಗಿ ಮಾರ್ಪಟ್ಟಿದೆ. ಯಂಕಣ್ಣ ಪರ ಗೊಲ್ಲ ಸಮಾಜ ಮತ್ತು ಅಧಿಕಾರಿ ದೇವೇಶ್ ಪರ ಆರ್ಯ ಸಮಾಜ ಪ್ರತಿಭಟನೆ ಮಾಡಿವೆ. ನಿತ್ಯ ಹೇಳಿಕೆಗಳ ಸಮರ ನಡೆದೇ ಇದೆ.

ರಾಯಚೂರು

ಗುಂಡೆತ್ತುತ್ತಿದ್ದ ಯಂಕ ಪಾಲಿಟಿಕ್ಸ್‌ನಲ್ಲಿ ಎಬ್ಬಂಕ!

ರಾಯಚೂರಿನ ತಿಮ್ಮಾಪುರ ಓಣಿಯ ಬಡ ಕಾರ್ಮಿಕರ ಮಗನಾದ ಯಂಕಣ್ಣ ಉಡಾಳ ಹುಡುಗರ ತಂಡ ಕಟ್ಟಿಕೊಂಡು ಶಾಲೆಗೆ ಚಕ್ಕರ್ ಹೊಡೆಯುತ್ತಾ ಪುಂಡನಾದ. ಓಣಿಯಲ್ಲಿ ನಡೆಯುತ್ತಿದ್ದ ಗುಂಡು ಎತ್ತುವ ಸ್ಪರ್ಧೆಗಳಲ್ಲಿ ಗೆದ್ದು 'ಧಾಡಸಿ ಸಣ್ಮಗ' ಅನಿಸಿಕೊಂಡುಬಿಟ್ಟ. ಧಾಡಸಿ ಹೆಳ್ಳಿದಂತೆ ಭಾನಗಡಿಗಳು ಹೆಚ್ಚಿದವು. ಅಲ್ಲಲ್ಲಿ ಇಕ್ಕಿಸಿಕೊಂಡ. ಅದ್ಹೇಗೋ ಕಾಂಗ್ರೆಸ್ ಹೊಕ್ಕ. ನಗರ ಯುವ ಘಟಕದ ಪದಾಧಿಕಾರಿಯೂ ಆದ. ಬುಲೆಟ್ ಏರಿ ದರ್ಪದಿಂದ ತಿರುಗುತ್ತಾ, ತನ್ನ ಕರಾಳ ಕೆಲಸಗಳಿಗೆ ಸರ್ಕಾರಿ ವಿದ್ಯಾರ್ಥಿ ಹಾಸ್ಟೆಲ್‌ಗಳನ್ನು ಸೆಂಟರ್ ಪಾಯಿಂಟ್ ಮಾಡಿಕೊಂಡ.

ಅದ್ಯಾವ್ಯಾವ ಕಾಲು ನೆಕ್ಕಿದನೋ ಈ ಯಂಕ, ರಾಜ್ಯ ಯುವ ಕಾಂಗ್ರೈ ಪ್ರಧಾನ ಕಾರ್ಯದರ್ಶಿಯೂ ಆಗಿಬಿಟ್ಟ. ದಡಕ್ಕನೆ ಬಂಗಲೆ ಎಬ್ಬಿಸಿಯೇ ಬಿಟ್ಟ.



ವೆಂಕಣ್ಣ ಯಾದವ್

ರಾಯಚೂರಿಗೆ ಯಾರೇ ರಾಜಕಾರಣಿ ಬರಲಿ, ಫಸ್ಟ್ ಇವನೇ ಇನ್ವೈಟ್ ಮಾಡಬೇಕಂತೆ! ಅದಕ್ಕಾಗಿ ಒಂದು ಪಡ್ಡೆ ಟೀಮ್ ಕಟ್ಟಿಕೊಂಡು ರಾಯಚೂರಿನ ಹೊರವಲಯದ ಸಾತ್‌ಮೈಲ್ ಕ್ರಾಸ್, ಗಿಲ್ಲೆಸ್ಗೂರುಗಳಲ್ಲಿ ಹೂವಿನ ಹಾರ ಹಿಡಿದು ನಿಲ್ಲತೊಡಗಿದ. ಹಿಂದೆ ರಾಜ್ಯ ಯುವ ಕಾಂಗ್ರೈ ಅಧ್ಯಕ್ಷನಾಗಿದ್ದ ಆರ್. ಮಂಜುನಾಥ್ ರಾಯಚೂರಿಗೆ ಬಂದಾಗ ಆಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿದ್ದ ಈಗಿನ ಮಾನ್ವಿ ಶಾಸಕ ಬೋಸರಾಜನನ್ನೇ ಎಳೆದಾಡಿ ಹಲ್ಲೆ ಮಾಡಿದ್ದ ಭೂಪ ಈ ಯಂಕಣ್ಣ! 1996 ರಲ್ಲಿ ಕಾಂಗ್ರೈನ ಜಿಲ್ಲಾ ಪಂಚಾಯ್ತಿ ಟಿಕೆಟ್ ತಪ್ಪಿ ಪಕ್ಷೇತರನಾಗಿ ಧುಮುಕಿ, ಕಂಡ ಕಂಡವರಿಗೆ 'ಓಟು ಕೊಡಲೆ' ಎಂದು ಹೊಡೆದು ಮತದಾನದ ಸಂದರ್ಭದಲ್ಲಿ ಗದ್ದಲ ಎಬ್ಬಿಸಿ ಎಲ್ಲೋ ಓಡಿ ಹೋಗಿಬಿಟ್ಟಿದ್ದ. 2001 ರಲ್ಲಿ ಕಾಂಗ್ರೈ ಟಿಕೆಟ್ ಪಡೆದು ದೇವಸ್ಗೂರ ಜಿ.ಪಂ. ಕ್ಷೇತ್ರದಿಂದ ಸ್ಪರ್ಧಿಸಿ ಮಾಜಿ ಸಚಿವ ಮುನಿಯಪ್ಪ ಮುದ್ದಪ್ಪನ ಮಗ ವಿಜಯ ಭಾಸ್ಕರನನ್ನು ಸೋಲಿಸಿದ್ದ. ಅಂದೇ ಶುರುವಾಯ್ತು ನೋಡಿ ನುಂಗಾಟ. ಮಂತ್ರಾಲಯ ರಸ್ತೆಯಲ್ಲೊಂದು ಬಾರ್ & ರೆಸ್ಟೋರೆಂಟ್ ಆರಂಭಿಸಿದ. ಮತ್ತೊಂದು ಹೊಸ ಬಂಗಲೆ, ಟಾಟಾ ಸುಮೋ, ಮಾರುತಿ ಕಾರ್‌ಗಳ ಒಡೆಯನಾದ. ಕಳೆದ ಜಿಲ್ಲಾ ಪಂಚಾಯ್ತಿ ಎಲೆಕ್ಷನ್ನಿನಲ್ಲಿ ಹೇಳ ಹೆಸರಿಲ್ಲದಂತೆ ಮೂಲೆ ಪಾಲಾದ.

ಆಸ್ಪತ್ರೆಗೆ ಸಿಮೆಂಟಂತೆ!

ಹಿಂದೆ ಹೊಡೆದ ಹಡೆಬೆ ದುಡ್ಡಿನಲ್ಲಿ ಈಗ ಆಸ್ಪತ್ರೆ ಕಟ್ಟಿಸುತ್ತಿದ್ದಾನೆ. ಅದಕ್ಕೇ ಸಿಮೆಂಟ್ ಬೇಕೆಂದು ಕೃಷಿ ಸಹಾಯಕ ದೇವೇಶ್‌ಗೆ ಆರ್ಡರ್ ಮಾಡಿದ್ದಾನೆ. ದೇವೇಶ್ ಇಲ್ಲ ಎಂದಿದ್ದಕ್ಕೆ ಯಂಕಣ್ಣ 'ಶಿಕ್ಷೆ' ಕೊಟ್ಟಿದ್ದಾನೆ! ಜೈಲಿಂದ ಹೊರಬಂದಿರುವ ಯಂಕಣ್ಣ ಪುಂಡ ಹುಡುಗರನ್ನು ಛೂ ಬಿಟ್ಟು ತನ್ನ ಪರ ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದಾನೆ. ಇತ್ತ ಆರ್ಯ ವೈಶ್ಯರೂ ದೇವೇಶ್ ಪರ ಯಂಕನ ವಿರುದ್ಧ ಮೆರವಣಿಗೆ ಮಾಡುತ್ತಿದ್ದಾರೆ. ಆದರೆ ಯಂಕನ ಸಕಲ ಗುಣ ಬಲ್ಲ ರಾಜಕಾರಣಿಗಳು, ಅಧಿಕಾರಿಗಳು ಖುಷಿ ಗೊಂಡು 'ಯಂಕನಿಗೆ ಸರಿಯಾಗಿ ಆಯ್ತು' ಎಂದು ನಗುತ್ತಿದ್ದಾರೆ.

ಅದೆಲ್ಲ ಇರಲಿ, ಈ ಯಂಕನಿಂದಾಗಿ ಆರ್ಯವೈಶ್ಯ, ಗೊಲ್ಲ (ಯಾದವ) ಸಮಾಜಗಳು ಕಿತ್ತಾಡಿಕೊಂಡು ಎಡವಟ್ಟು ಮಾಡಿಕೊಳ್ಳದಿರಲಿ.

–ವರದಿಗಾರ

ಇವನನ್ನು ಪತ್ರಕರ್ತ ಎನ್ನಲು ಅಸಹ್ಯವಾಗುತ್ತದೆ. ಕುಖ್ಯಾತ ರೌಡಿ ಎಂದರೆ ಅದು ಭೂಗತ ಜಗತ್ತಿಗೆ ಮಾಡಿದ ಅವಮಾನದಂತೆ ಕಾಣುತ್ತದೆ. ಆದರೂ ಇವನಿಗೊಂದು ಪತ್ರಿಕೆಯಿತ್ತು, ಭೂಗತಲೋಕದ ಸಂಪರ್ಕವಿತ್ತು, ಸಾಕಷ್ಟು ಜನ ಇವನಿಗೆ ಹೆದರುತ್ತಿದ್ದರು. ಇವನಿಂದ ಎಷ್ಟೋ ಜನ ಊರು ಬಿಟ್ಟರು, ಪ್ರಾಣ ಬಿಟ್ಟರು, ಮಾನ ಕಳೆದುಕೊಂಡರು. ಇಂತಹ ಅನಾಹುತಕಾರಿ ಕ್ರಿಮಿನಲ್, ಬ್ಲಾಕ್‌ಮೇಲರ್ ಆಗಸ್ಟ್ 21 ರಂದು ರಾತ್ರಿ ವಿರೋಧಿ ಗುಂಪಿನ ಮಚ್ಚೇಟಿಗೆ ಸಿಕ್ಕಿ ಬೀದಿನಾಯಿಗಿಂತ ಕಡೆಯಾಗಿ ಪತ್ನಿಯೆದುರೇ ಮೋರಿಯಲ್ಲಿ ಬಿದ್ದು ಪ್ರಾಣ ಬಿಟ್ಟಿದ್ದಾನೆ.


ಹಿತೇಂದ್ರ ಪ್ರಸಾದ್!

ಉಡುಪಿಯ ಹೊಸಬೆಟ್ಟು ಪ್ರದೇಶದ ಮಾಜಿ ಮುನಿಸಿಪಲ್ ಕೌನ್ಸಿಲರ್ ಸುಲೋಚನ ದಾಮೋದರ್ ಎಂಬುವರ ಪುತ್ರ. ಈತನ ಸಂಪೂರ್ಣ ಇತಿಹಾಸವೇ ಉಡುಪಿ ಮತ್ತು ಮಂಗಳೂರು ಅವಳಿ ಜಿಲ್ಲೆಗಳ ಜನರಿಗೆ ಗೊತ್ತು.

ಬ್ಲಾಕ್‌ಮೇಲರ್, ಬ್ಲೂಫಿಲಂ ಮೇಕರ್

ಬೀದಿ ಹೆಣವಾದ ಹಿತೇಂದ್ರ

ಫೋಟೋಗ್ರಾಫರ್ ಆಗಿ ವೃತ್ತಿ ಆರಂಭಿಸಿದ ಈತ ತನ್ನ ಪ್ರತಿಭೆಯನ್ನು ಬಳಸಿಕೊಂಡಿದ್ದು ಅಶ್ಲೀಲ ಚಿತ್ರಗಳನ್ನು ತೆಗೆಯುವುದಕ್ಕೆ. ಅಲ್ಲಿಂದ ಪ್ರಮೋಷನ್ ಪಡೆದು ಬ್ಲೂಫಿಲಂ ತಯಾರಿಕೆಗೂ ಇಳಿದುಬಿಟ್ಟ. ಕೆಲವು ಲಾಡ್ಜ್ ಕೆಲಸಗಾರರನ್ನು ಬುಕ್ ಮಾಡಿಕೊಂಡು, ಅವರ ಮೂಲಕ ರೂಂಗಳಲ್ಲಿ ರಹಸ್ಯವಾಗಿ ವಿಡಿಯೋ ಕ್ಯಾಮರಾಗಳನ್ನು ಅಳವಡಿಸಿ, ಲಾಡ್ಜ್‌ಗೆ ಕದ್ದುಮುಚ್ಚಿ ಬರುವ ಪ್ರೇಮಿಗಳ ಸಲ್ಲಾಪಗಳನ್ನು ಚಿತ್ರಿಸಿಕೊಂಡು ಅವರನ್ನು ಬ್ಲಾಕ್‌ಮೇಲ್ ಮಾಡುವುದು ಇವನ ಧಂದೆಯಾಗಿ ಹೋಯ್ತು. ಇವನ ಇಂತಹ ಕೊಳಕು ಕೃತ್ಯಕ್ಕೆ ದಂಪತಿಗಳೂ ಸಹ ಬಲಿಯಾಗಿದ್ದಾರೆ.


ದೇವಿ ಪ್ರಸಾದ್

ಇಂತಹ ಕೃತ್ಯಗಳಿಗೆ ಇವನ ಬೆನ್ನೆಲುಬಾಗಿ ನಿಂತವರು, ಬ್ಲೂಫಿಲಂ ಸುಬ್ಬರಾವ್ ಎಂಬ ಕುಖ್ಯಾತ ನಡೆಸುತ್ತಿದ್ದ 'ಕರಾವಳಿ ಮಾರುತ' ಸಂಜೆ ದಿನಪತ್ರಿಕೆ. ನಂತರ ಈತ ಆಲೆವೂರು ಪ್ರಭಾಕರ ಆಚಾರ್ಯ ಎಂಬ ಚಿನ್ನದ ಸ್ಮಗ್ಲರ್ ಬೆನ್ನಿಗೆ ಬಿದ್ದ. ಉಡುಪಿಯ ಸಮಸ್ತ ಭೂಗಳ್ಳರ ಅಧಿನಾಯಕನಾಗಿದ್ದ ಪ್ರಭಾಕರ ಆಚಾರ್ಯನಿಗೆ ಮುಂಬೈ ಭೂಗತರ ಸಂಪರ್ಕವಿತ್ತು. ಅಲ್ಲಿ ಹಿತೇಂದ್ರ ಅನಾಹುತಕಾರಿಯಾಗಿ ಬೆಳೆದುಬಿಟ್ಟ. ಆದರೆ ಐದು ವರ್ಷದ ಹಿಂದೆ ಪ್ರಭಾಕರ ಆಚಾರ್ಯನನ್ನೇ ಮುಂಬೈನ ಶಾರ್ಪ್‌ಶೂಟರ್‌ಗಳು ಗುಂಡಿಕ್ಕಿ ಕೊಂದುಬಿಟ್ಟರು. ಆಚಾರ್ಯ ಹೋಗಿದ್ದೆ ತಡ, ಹಿತೇಂದ್ರನ ಕಾಟದಿಂದ ಬೇಸತ್ತಿದ್ದ ಇತರೆ ಪತ್ರಿಕೆಗಳು ಅವನ ಅವ್ಯವಹಾರಗಳ ವಿರುದ್ಧ ಬರೆದು ಬೆತ್ತಲು ಮಾಡಲಾರಂಭಿಸಿದವು. ಇಂತಹ ಪತ್ರಿಕೆಗಳ ವಿರುದ್ಧ ಸಮರ ಹೂಡಲು ಆಗ ಹಿತೇಂದ್ರ ಆರಂಭಿಸಿದ್ದೇ 'ಹಾಯ್ ಮಾರುತ' ಎಂಬ ಕಾಮಾಲೆ ಪತ್ರಿಕೆ. ಈ ಪತ್ರಿಕೆ ಆರಂಭವಾದ ನಂತರವಂತೂ ಹಿತೇಂದ್ರನ ಪಾಲಿಗೆ ನಿಜಕ್ಕೂ ಮಾರುತಿಯ ಅರ್ಥಾತ್ ಕೋತಿಯ ಬಾಲ ಬಂದಂತಾಯ್ತು.

ಮಂಗಳೂರು

ಹೇಳಿಕೇಳಿ ಫೋಟೋಗ್ರಫಿಯಲ್ಲಿ ಎಕ್ಸ್‌ಪರ್ಟು. ಯಾರೋ ಹೆಣ್ಣುಮಗಳ ಬೆತ್ತಲೆ ದೇಹ, ಅದಕ್ಕೆ ಇನ್ನಾರದೋ ತಲೆ, ಚಿತ್ರಕ್ಕೊಂದು ಅಶ್ಲೀಲವಾದ ಹೆಡ್ಡಿಂಗು ನೀಡಿ ಊರ ಮರ್ಯಾದಸ್ಥರ ಮಾನವನ್ನೆಲ್ಲಾ ಬೀದಿಯಲ್ಲಿ ಹರಾಜಿಗಿಡಲಾರಂಭಿಸಿದ.


ಹಿತೇಂದ್ರ ಪ್ರಸಾದ್

ಇವನ ಉಪಟಳ ಎಷ್ಟಾಯಿತೆಂದರೆ, ಹಿತೇಂದ್ರ ಫೋನ್ ಮಾಡಿ ದುಡ್ಡಿಗೆ ಡಿಮ್ಯಾಂಡ್ ಮಾಡಿದರೆ ಸಾಕು, ಸರ್ಕಾರಿ ಅಧಿಕಾರಿಗಳು ಅವನು ಕೇಳಿದಷ್ಟು ಕೊಟ್ಟು ಕೈ ಮುಗಿದು ತೆಪ್ಪಗಾಗುತ್ತಿದ್ದರು. ಇಲ್ಲವಾದರೆ ಇವನ 'ಮಾರುತ'ದಲ್ಲಿ ಸದರಿ ಸರ್ಕಾರಿ ಅಧಿಕಾರಿ ಯಾವುದೋ ಹೆಣ್ಣಿನೊಂದಿಗೆ ಮಲಗಿರುವ ಚಿತ್ರ, ಇಲ್ಲವೆ ಪೊಲೀಸ್ ಸ್ಟೇಷನ್‌ನಲ್ಲಿ ಸ್ಲೇಟ್ ಹಿಡಿದಿರುವ ಚಿತ್ರ ಪ್ರಕಟವಾಗುವುದು ಖಚಿತ. (ಇದೆಲ್ಲ ಫೋಟೊಗ್ರಾಫಿ ಮತ್ತು ಕಂಪ್ಯೂಟರ್ ಕರಾಮತ್ತಿನ್ನಿ) ಆದರೆ ಹೋದ ಮಾನ ಬರುವುದೆಲ್ಲಿಂದ?

ಇಷ್ಟಾದರೂ ಹಿತೇಂದ್ರನ ಮೇಲೆ ಕೆಲವು ಧೈರ್ಯಸ್ಥರು ದೂರು ನೀಡಿದ್ದರು. ಒಟ್ಟು 23 ಮೊಕದ್ದಮೆಗಳು ಹಿತೇಂದ್ರನ ವಿರುದ್ಧ ದಾಖಲಾಗಿದ್ದವು. ಆದರೆ ಉಡುಪಿ ಜಿಲ್ಲೆಯ ಹಿಂದಿನ ಎಸ್ಪಿ ಮುರುಗನ್ ಎಂಬ ಬೆದರು ಬೊಂಬೆ ಹಾಗೂ ಶ್ಯಾಂಭಟ್ ಎಂಬ ಜಿಲ್ಲಾಧಿಕಾರಿಯ ಅಂತರಂಗವನ್ನು ಅರೆದು ಕುಡಿದಿದ್ದ ಹಿತೇಂದ್ರ ಅವರಿಬ್ಬರ ಶ್ರೀರಕ್ಷೆಯಲ್ಲಿ ಸುರಕ್ಷಿತವಾಗಿ ಸುಭಿಕ್ಷವಾಗಿ ಬೆಳೆದಿದ್ದ. ಈಗ ಜಿಲ್ಲಾ ಎಸ್ಪಿಯಾಗಿ ಮುರುಗನ್ ಅರ್ಥಾತ್ ಆತನ ಮತ್ತೊಂದು ನಾಮಧೇಯವಾದ ಸುಬ್ರಮಣೇಶ್ವರ ರಾವ್ ಎಂಬುವರು ಎಸ್ಪಿಯಾಗಿ ಕೂತಿದ್ದಾರೆ. ಹಿತೇಂದ್ರ ಕೊಲೆಯಾದ ಜಾಗಕ್ಕೂ ಈ ಎಸ್ಪಿ ಸುಬ್ರಮಣೇಶ್ವರ ಸಾಹೇಬರು ವಿಸಿಟ್ ಮಾಡಿಲ್ಲವೆಂದರೆ ಅವರ ಕಾರ್ಯದಕ್ಷತೆ ಎಷ್ಟಿರಬಹುದು.


ಪೆಟ್ಟ ನಾಗೇಶ್

ಹಿತೇಂದ್ರ ಪ್ರಸಾದನ ಕೊಲೆ ಆದ ಸನ್ನಿವೇಶ ಮತ್ತು ಸಂದರ್ಭ ಈಗ ಎಲ್ಲರಿಗೂ ತಿಳಿದಿದೆ. ಇತ್ತೀಚೆಗೆ ಮಣಿಪಾಲ್‌ನಲ್ಲಿ ರೋಹಿತ್‌ಕುಮಾರ್ ಕಟಿಲ್ ಎಂಬುವರು ಆರಂಭಿಸಿದ್ದ ತಲ್ಲುರ್ಸ್ ಲೈವ್‌ಬ್ಯಾಂಡ್‌ನಿಂದ ಹಫ್ತಾ ವಸೂಲಿ ಮಾಡುವ ವಿಚಾರದಲ್ಲಿ ಹಿತೇಂದ್ರ ಪ್ರಸಾದ್ ಮತ್ತು ಉಡುಪಿ ಜಿಲ್ಲಾ ಜಾತ್ಯತೀತ ಜನತಾದಳದ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ (ಅಂಡಾರು ಅಲ್ಲ) ಗುಂಪು ಕಟ್ಟಿಕೊಂಡು ಗಲಾಟೆಗೆ ಹೋಗಿದ್ದಾರೆ. (ಇದನ್ನು ಹಿತೇಂದ್ರ ಮತ್ತು ದೇವಿಪ್ರಸಾದ್ ಗುಂಪು, ಬ್ಯಾಂಡ್ ಮುಚ್ಚುವಂತೆ ಪ್ರತಿಭಟಿಸಲು ಹೋಗಿದ್ದೆವು ಎಂದು ವಿವರಿಸುವವರಿದ್ದಾರೆ.) ಅಲ್ಲಿ ಮಾತಿಗೆ ಮಾತು ಬೆಳೆದು, ಹಿತೇಂದ್ರ ಮೊಬೈಲ್ ತೆಗೆದು ತಾನು ಎಸ್ಪಿಗೆ ಫೋನ್ ಮಾಡುತ್ತೇನೆಂದು ಹೇಳಿ ಬ್ಯಾಂಡ್ ಕಟ್ಟಡದ ಹಿಂಭಾಗಕ್ಕೆ ಹೋಗಿದ್ದಾನೆ.

ಅಲ್ಲಿ ಅಡಗಿದ್ದಾರೆ ಹಂತಕರು

ಯಾವಾಗ ಹಿತೇಂದ್ರ ಒಂಟಿಯಾಗಿ ಗುಂಪಿನಿಂದ ಹೊರಬಂದನೊ, ಮಚ್ಚು ತಲವಾರ್‌ಗಳಿಂದ ಅವನ ಮೇಲೆ ಆಕ್ರಮಣ ನಡೆಸಿದ ಹಂತಕರು ತಲೆ ಬುರುಡೆ ಬಿಚ್ಚಿಕೊಳ್ಳುವಂತೆ ಕೊಚ್ಚಿ ಪರಾರಿಯಾಗಿದ್ದಾರೆ. ಇದನ್ನು ಯಾರೂ ಗಮನಿಸಿಲ್ಲ. ದೇವಿಪ್ರಸಾದ್ ಶೆಟ್ಟಿ ಕರೆತಂದಿದ್ದ ಕೆಲವು ಹುಡುಗರು ಹದಿನೈದು ನಿಮಿಷಗಳ ನಂತರ ಕಟ್ಟಡದ ಹಿಂದಿನ ಪೊದೆಯ ಸಮೀಪದ ಮೋರಿಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಹಿತೇಂದ್ರನನ್ನು ಕಂಡು ಶೆಟ್ಟಿಗೆ ಸುದ್ದಿ ತಿಳಿಸಿದ್ದಾರೆ. ತಕ್ಷಣವೇ ಶೆಟ್ಟಿ ಕಾರನ್ನು ತಿರುಗಿಸಿಕೊಂಡು ಪರಾರಿಯಾಗಿದ್ದಾನೆ. ಇತ್ತ ಹಿತೇಂದ್ರ ಬಂದಿದ್ದ ಕಾರಿನಲ್ಲಿ ಆತನ ಪತ್ನಿ ಶೋಬಿತ ಕೂತಿದ್ದಳಂತೆ, ಆ ಕಾರನ್ನು ಶೋಬಿತ ಸಮೇತ ಗಣೇಶ ಎಂಬ ಮತ್ತೊಬ್ಬ ಪುಡಿ ಪತ್ರಕರ್ತ ಚಲಾಯಿಸಿಕೊಂಡು ಹೋಗಿದ್ದಾನೆ.

ಎಂ.ಎಸ್. ಸತೀಶ್

ಅಲ್ಲಿಗೆ ದೇವಿಪ್ರಸಾದ್ ಶೆಟ್ಟಿಯ "ಲೈವ್‌ಬ್ಯಾಂಡ್ ವಿರೋಧಿ ಪಡೆ" ಕ್ಷಣಾರ್ಧದಲ್ಲಿ ನಾಪತ್ತೆಯಾಗಿದೆ. ಘಟನೆ ನಡೆದು ಒಂದೂವರೆ ಗಂಟೆಯ ನಂತರ ಸ್ಥಳಕ್ಕೆ ಆಗಮಿಸಿದ ಪೊಲೀಸರು ಹಿತೇಂದ್ರನ ಶವವನ್ನು 'ಚಿಕಿತ್ಸೆಗಾಗಿ' ಕೆಎಂಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಪೊಲೀಸರೇನೋ ಈ ಕೊಲೆ ಪ್ರಕರಣದಲ್ಲಿ ತಲ್ಲುರ್ಸ್ ಲೈವ್‌ಬ್ಯಾಂಡ್ ಮಾಲೀಕ ರೋಹಿತ್‌ಕುಮಾರ್ ಕಟಿಲ್, ಕಾರ್ಕಳ ಬಿಜೆಪಿ ಯುವ ಮೋರ್ಛಾದ ಅಧ್ಯಕ್ಷ ಭವಾನಿ ಶೆಟ್ಟಿ, ತಲ್ಲುರ್ಸ್ ಬಾರ್ ಮಾಲೀಕ ಶಿವರಾಮಶೆಟ್ಟಿ, ಅವರ ಅಳಿಯ ಸುನಿಲ್ ಶೆಟ್ಟಿ, ರೌಡಿ ಪೆಟ್ಟ ನಾಗೇಶನ ಸಂಬಂಧಿ ರಾಘವೇಂದ್ರನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಆದರೆ ಕೊಲೆಯ ಪ್ರಮುಖ ಆರೋಪಿ ಎಂದು ಶಂಕಿಸಲಾದ ಪೆಟ್ಟ ನಾಗೇಶ ತಲೆ ಮರೆಸಿಕೊಂಡಿದ್ದಾನೆ.

ಪ್ರತ್ಯಕ್ಷ ಸಾಕ್ಷಿಗಳು ಹೇಳುವ ಪ್ರಕಾರ ಲೈವ್‌ಬ್ಯಾಂಡ್, ಸಿಂಗಲ್ ನಂಬರ್ ಮತ್ತು ಜಿಲ್ಲೆಯ ಸಮಸ್ತ ದೋ ನಂಬರ್ ಧಂದೆಗಳಿಂದ ಹಫ್ತಾ ವಸೂಲಿ ಮಾಡುತ್ತಿದ್ದ ಹಿತೇಂದ್ರ-ಶೆಟ್ಟಿ ಜೋಡಿಗಳು, 'ತಲ್ಲುರ್ಸ್'ನಿಂದಲೂ ತಲಾ 50 ಸಾವಿರ ಪಡೆದಿದ್ದರು. ಇಷ್ಟಕ್ಕೇ ಇವರ ದಾಹ ಇಂಗಲಿಲ್ಲ, ಮಣಿಪಾಲದ ಶ್ರೀರಾಮ ಸೇನೆಯನ್ನು ಬಿಟ್ಟು ಲೈವ್‌ಬ್ಯಾಂಡ್ ಮುಚ್ಚಲು ಒತ್ತಾಯಿಸಿ ಚಳವಳಿ ನಡೆಸಲು ಕುಮ್ಮಕ್ಕು ನೀಡಿದ್ದರು. ಆದರೆ ಕೇವಲ 25 ಸಾವಿರಕ್ಕೆ ರಾಮರಸ ಕುಡಿದಷ್ಟೇ ತೃಪ್ತರಾದ ಶ್ರೀರಾಮ ಭಕ್ತರು ಜೈ ಎಂದು ಚಳವಳಿ ಹಿಂದಕ್ಕೆ ಪಡೆದಿದ್ದರು.


ಆಗ ಖುದ್ದು ತಾವೇ ಚಳವಳಿಗೆ ಇಳಿಯುವುದು ದೇವಿಪ್ರಸಾದ್ ಶೆಟ್ಟಿ ಮತ್ತು ಹಿತೇಂದ್ರನಿಗೆ ಅನಿವಾರ್ಯ


ಹಿತೇಂದ್ರನ ಬ್ಲಾಕ್‌ಮೇಲ್ ತಂತ್ರ

ಹಿತೇಂದ್ರ ಪ್ರಸಾದನ ಬ್ಲಾಕ್‌ಮೇಲ್ ತಂತ್ರಕ್ಕೆ ಇದೊಂದು ಉದಾಹರಣೆ ಸಾಕು. ಈತ ಪ್ರಕಟಿಸುತ್ತಿದ್ದ 'ಹಾಯ್ ಮಾರುತ' ಎಂಬ ಪತ್ರಿಕೆಯ ಮೇಲಿನ ಎರಡು ಮುಖಪುಟಗಳನ್ನು ಗಮನಿಸಿ. ಎರಡೂ ಮುಖಪುಟಗಳಲ್ಲಿ ಸಂಪುಟ 5, ಸಂಚಿಕೆ 16, ಆಗಸ್ಟ್ 16-31; 2006 ಎಂದು ಮುದ್ರಿಸಲಾಗಿದೆ. ಅಂದರೆ ಎರಡೂ ಸಂಚಿಕೆಗಳು ಏಕಕಾಲಕ್ಕೆ ಬಿಡುಗಡೆಯಾಗಿರುವುದು ನಿಸ್ಸಂದೇಹ.


ಅಂಡಾರು ದೇವಿ

ಆದರೆ ಪತ್ರಿಕೆಯ ಮುಖಪುಟದ ಮೇಲಿರುವ ಹೆಡ್ಡಿಂಗ್‌ಗಳನ್ನು ಓದಿ. ಒಂದು ಪತ್ರಿಕೆಯ ಮೇಲೆ 'ಬ್ಯಾಂಡ್ ಹುಡುಗಿಯರು ಅಂಡರ್‌ವೇರ್'ನಲ್ಲಿ"! ಎಂದಿದ್ದು, ಮೇಲ್ಭಾಗದಲ್ಲಿ "ಕ್ಯಾಚ್ ರೆಡ್ ಹ್ಯಾಂಡೆಡ್" ಎಂದಿದೆ. ಅದೇ ದಿನಾಂಕದ ಮತ್ತೊಂದು ಸಂಚಿಕೆಯಲ್ಲಿ ಹೆಡ್‌ಲೈನ್ "ಅಂಡಾರು ದೇವಿ ಅಂಡರ್‌ವೇರ್‌ನಲ್ಲಿ!" ಮತ್ತು "ಅಂಡಾರು ಕ್ಯಾಚ್ ರೆಡ್ ಹ್ಯಾಂಡೆಡ್!" ಎಂದು ಬದಲಿಸಲಾಗಿದೆ.





ಒಂದೇ ದಿನಾಂಕದ ಎರಡು ಬ್ಲಾಕ್‌ಮೇಲ್ ಸಂಚಿಕೆಗಳು

ಇದರ ಹಿಂದಿನ ಸಂಚು, ಹಿತೇಂದ್ರ ಪ್ರಸಾದನ ಹುನ್ನಾರ ಇಷ್ಟೇ. ಮಂಗಳೂರು ಮತ್ತು ಉಡುಪಿ ನಗರಗಳಲ್ಲಿ ಲೈವ್‌ಬ್ಯಾಂಡ್‌ಗಳು ನಿಷೇಧವಾದ ನಂತರ, ಲೈವ್‌ಬ್ಯಾಂಡ್‌ಗಳು ಗ್ರಾಮಾಂತರದ ರಿಸಾರ್ಟ್‌ಗಳಿಗೆ ಶಿಫ್ಟ್ ಆಗಿದ್ದವು. ಉಲ್ಲಾಳದ ಬೀಚ್ ಸಮೀಪದಲ್ಲಿರುವ ಆರ್.ವಿ. ಗೆಸ್ಟ್ ಹೌಸ್ ಮೇಲೆ ಆಗಸ್ಟ್ 13 ರಂದು ಪೊಲೀಸರು ದಾಳಿ ನಡೆಸಿದಾಗ ಇಂತಹ ಒಂದು ಅನಧಿಕೃತ ಲೈವ್‌ಬ್ಯಾಂಡ್ ಅಲ್ಲಿ ನಡೆಯುತ್ತಿತ್ತು, ಆಗ ಅಲ್ಲಿ ಸಿಕ್ಕಿಬಿದ್ದ ಹುಡುಗಿಯರು ಮತ್ತು ಗಿರಾಕಿಗಳಲ್ಲಿ ಅಂಡಾರು ದೇವಿ ಪ್ರಸಾದ ಶೆಟ್ಟಿಯೂ ಒಬ್ಬ.

ಅಂಡಾರು ದೇವಿಪ್ರಸಾದ್ ಶೆಟ್ಟಿ ಉಡುಪಿಯ 'ಚಿನ್ನ' ಆಭರಣ ಮಳಿಗೆಯ ಮಾಲೀಕ. ಬೆಂಗಳೂರಿನ ಮಣಿಪಾಲ್ ಸೆಂಟರಿನಲ್ಲೂ ಈತನ 'ಚಿನ್ನ' ಶೋ ರೂಂ ಇದೆ. ಆಗರ್ಭ ಶ್ರೀಮಂತ, ಅದಕ್ಕೆ ತಕ್ಕ ಖಯಾಲಿಗಳೂ ಇವೆ. ಇಂತಹ ಚಿನ್ನದ ಮೊಟ್ಟೆ ಇಡುವ ಕೋಳಿ ಲೈವ್‌ಬ್ಯಾಂಡ್ ಅಡ್ಡೆಯಲ್ಲಿ ಸಿಕ್ಕಿಬಿದ್ದಿದ್ದಾನೆಂದು ಕೇಳಿದಾಕ್ಷಣ, ಬ್ಲಾಕ್‌ಮೇಲರ್ ಹಿತೇಂದ್ರ ಪ್ರಸಾದ್ ಮೈಕೊಡವಿ ಎದ್ದು ಅಂಡಾರುವಿನ ಹಿಂದೆ ಬಿದ್ದಿದ್ದಾನೆ.

ಜಿಲ್ಲೆಯ ಜಾತ್ಯತೀತ ಜನತಾದಳದ ನಾಯಕ, ಮಹಾನ್ ದೈವಭಕ್ತ ಮತ್ತು ದಾನಿ ಎಂದೆಲ್ಲಾ ಕೀರ್ತಿ ಪಡೆದಿರುವ ಅಂಡಾರುವಿಗೆ ಹಿತೇಂದ್ರನ ಬೆದರಿಕೆ ಆರಂಭವಾಗಿದೆ. 'ನೀನು ಲೈವ್‌ಬ್ಯಾಂಡ್‌ನಲ್ಲಿ ಕುಡಿದು ಕುಣಿಯುತ್ತಿರುವ ಫೋಟೋ ತೆಗೆದಿದ್ದೇನೆ, ಅದನ್ನು ನನ್ನ ಪೇಪರ್‌ನಲ್ಲಿ ಹಾಕಿದರೆ ನೀನು ನಿನ್ನ ಸಂಸಾರ, ಮರ್ಯಾದೆ ಏನಾಗುತ್ತದೆ ಎಂದು ಯೋಚಿಸು' ಎಂದು ಗಡುವು ನೀಡಿದ್ದಾನೆ. ಮರ್ಯಾದೆಗೆ ಹೆದರಿದ ಅಂಡಾರು 50 ಸಾವಿರ ಕೊಟ್ಟು ಕೈ ತೊಳೆದು ಕೊಂಡಿದ್ದಾನೆ. ಆದರೆ ಹಿತೇಂದ್ರನ ದಾಹ ತಗ್ಗಲಿಲ್ಲವಲ್ಲ, ಐದು ಲಕ್ಷ ಡಿಮ್ಯಾಂಡ್ ಮಾಡಿದ್ದಾನೆ. ಆದರೆ ಅಂಡಾರು ಅಷ್ಟು ಮೊತ್ತಕ್ಕೆ ಒಪ್ಪದಿದ್ದಾಗ ಮತ್ತೊಂದು ಸಂಚಿಕೆ ಬಿಡುಗಡೆಯಾಗಿದೆ.

"ಅಂಡಾರು ದೇವಿ ಅಂಡರ್‌ವೇರ್ ನಲ್ಲಿ". ತಮಾಷೆ ಎಂದರೆ ಇಂತಹ ರೋಚಕ ಹೈಡ್‌ಲೈನ್ ಹೊತ್ತ ಪತ್ರಿಕೆಯ ಬುಡದಿಂದ ತಲೆಯವರೆಗೆ ಹುಡುಕಿದರೂ ಅಂಡರ್‌ವೇರ್‌ನಲ್ಲಿರುವ ಅಂಡಾರುವಿನ ಚಿತ್ರವಿಲ್ಲ, ಕನಿಷ್ಠ ಪ್ಯಾಂಟು, ಪಂಚೆ ಧರಿಸಿರುವ ಚಿತ್ರವೂ ಇಲ್ಲ, ಇದು ಹಿತೇಂದ್ರನ ಬ್ಲಾಕ್‌ಮೇಲ್ ವರಸೆ, ಹಿತೇಂದ್ರನ ಕೊಲೆಯ ನಂತರ ಸಹಜವಾಗಿ ಅಂಡಾರುವಿನ ಮೇಲೆ ಅನುಮಾನ ಮೂಡಿತಾದರೂ, ಅಸಲಿ ವಿಚಾರ ಎಲ್ಲರಿಗೂ ಗೊತ್ತಿದೆ.

ಸ್ತ್ರೀಯರ ಸಣ್ಣ ತಪ್ಪುಗಳನ್ನು ಮನ್ನಿಸಲಾರದವರು ಅವರ ಹಿರಿಯ ಸದ್ಗುಣಗಳ ಸವಿ ಎಂದೂ ನೋಡಲಾರರು

ಬ್ಲಾಕ್‌ಮೇಲ್ ಹಿತೇಂದ್ರ, ಫೋರ್ಜರಿ ಸೂರ್ಯಕಾಂತ


ಸರ್ಕಾರಿ ನೌಕರನಾಗಿ ಬೇನಾಮಿ ಹೆಸರಿನಲ್ಲಿ ... ರುವ ಈ ಫಾರ್ಮಸಿಸ್ಟ್ ಸೂರ್ಯಕಾಂತ ಪ್ರಭು, ಜೈಲಿನಲ್ಲಿರಲು ಲಾಯಕ್ಕಾದ ವ್ಯಕ್ತಿ.

ಕ್ರಿಮಿ ಹಿತೇಂದ್ರನ ಕೊಲೆಯ ಹಿನ್ನೆಲೆಯಲ್ಲಿ ಅವನ ಪತ್ರಿಕೆಯ ಅಜ್ಞಾತ ಬರಹಗಾರ, ಮತ್ತೊಬ್ಬ ಬ್ಲಾಕ್‌ಮೇಲರ್, ಫೋರ್ಜರಿ ಎಕ್ಸ್‌ಪರ್ಟ್ ಸೂರ್ಯಕಾಂತ ಪ್ರಭುಗೆ ಈಗ ಜೀವಭೀತಿ ಉಂಟಾಗಿದೆ. ಹಿತೇಂದ್ರ ಪ್ರಸಾದ್ ನೀಡುತ್ತಿದ್ದ ವಿಕೃತ ಮಾಹಿತಿಗಳನ್ನು ಅಕ್ಷರ ರೂಪಕ್ಕೆ ಇಳಿಸುತ್ತಿದ್ದುದೇ ಈ ಸೂರ್ಯಕಾಂತ. ಸೂರ್ಯಕಾಂತನ ಕೆಲಸ ಇಷ್ಟಕ್ಕೆ ಸೀಮಿತವೆಂದು ಭಾವಿಸಬೇಡಿ. ಈತ ಹಿತೇಂದ್ರ ಪ್ರಸಾದ್‌ನ ಸಮಸ್ತ ಪಾತಕಗಳಲ್ಲೂ ಪಾಲುದಾರ. ಅಷ್ಟೇ ಅಲ್ಲ, ಸರ್ಕಾರಿ ಇಲಾಖೆಗಳಿಂದ ವಿವಿಧ ಕಾಂಟ್ರಾಕ್ಟ್‌ಗಳನ್ನು ಪಡೆದು ಹೇಗೆ ದೋಚಬಹುದೆಂಬ ದಾರಿ ತೋರಿದವನೇ ಸೂರ್ಯಕಾಂತ ಪ್ರಭು.

ಕಾರಣ ಈತ, ಸರ್ಕಾರಿ ಆಸ್ಪತ್ರೆಯಲ್ಲಿ ಫಾರ್ಮಸಿಸ್ಟ್. 25 ವರ್ಷದ ಹಿಂದೆ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ನಡೆದ ಹಣ ದುರುಪಯೋಗ ಪ್ರಕರಣದಲ್ಲಿ ವಜಾ ಆದವನು. ನಂತರ ಆತ ಸರ್ಕಾರಿ ನೌಕರಿ ಸೇರಿದ. ಸದರಿ ಸೂರ್ಯಕಾಂತ ಸರ್ಕಾರಿ ನೌಕರಿಯಲ್ಲಿದ್ದುಕೊಂಡೇ 'ಸಾಯಿ ಸೆಕ್ಯುರಿಟೀಸ್', 'ವೀ ಹೆಲ್ಪ್', 'ಹೆಲ್ಪ್‌ಲೈನ್', 'ಅಜಂತ ಅಸೋಸಿಯೇಟ್ಸ್' ಎಂಬ ಸಂಸ್ಥೆಗಳನ್ನು, ಎಸ್.ಎಸ್. ಕುಂಜಾಲ್, ಜಯಸೂರ್ಯ ಹಾಗು ಅನಂತಮೂರ್ತಿ ಎಂಬ ನಕಲಿ ಹೆಸರುಗಳನ್ನು ಬಳಸಿ ನಡೆಸುತ್ತಿದ್ದಾನೆ. ಅದೇ ಹೆಸರಿನಲ್ಲಿ ಸಹಿ ಮಾಡಿ ಬ್ಯಾಂಕು, ಇತರೇ ವಹಿವಾಟುಗಳನ್ನು ನಡೆಸುತ್ತಾನೆ.

ಇಂತಹ ನಕಲಿ ಸಂಸ್ಥೆಗಳ ಮೂಲಕ ಸೂರ್ಯಕಾಂತ್ ಮೆಸ್ಕಾಂ, ಬಿ.ಎಸ್.ಎನ್.ಎಲ್. ಮತ್ತು ಕೆ.ಆರ್.ಇ.ಸಿ. ಸಂಸ್ಥೆಗಳ ಸೆಕ್ಯುರಿಟಿ ಗುತ್ತಿಗೆಯನ್ನು ಪಡೆದಿದ್ದಾನೆ. ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಅಷ್ಟು ಸರ್ಕಾರಿ ಆಸ್ಪತ್ರೆಗಳ ಕ್ಲೀನಿಂಗ್ ಕಾಂಟ್ರಾಕ್ಟ್ ಇವನ ಅಜಂತ ಎಂಟರ್‌ಪ್ರೈಸಸ್ ಹೆಸರಿನಲ್ಲಿದೆ. ಒಂದೇ ಕಾಂಟ್ರಾಕ್ಟಿಗೆ ತನ್ನದೇ ನಾಲ್ಕು ಸಂಸ್ಥೆಯಿಂದ ಪ್ರತ್ಯೇಕ ಟೆಂಡರ್ ಸಲ್ಲಿಸಿ ಅದರಲ್ಲಿ ಒಂದನ್ನು ದಕ್ಕಿಸಿಕೊಳ್ಳುವುದು ಇವನ ತಂತ್ರ. ಆ ತಂತ್ರ ಫಲಿಸದಿದ್ದಾಗ ಹಿತೇಂದ್ರನ ಪ್ರವೇಶವಾಗುತ್ತದೆ.

ಹಿತೇಂದ್ರನದು ಅದೇ ಮಾಮೂಲಿ ಬ್ಲಾಕ್‌ಮೇಲ್ ತಂತ್ರ. ಸಂಬಂಧ ಪಟ್ಟ ಅಧಿಕಾರಿಯ ವೀಕ್‌ನೆಸ್ ತಿಳಿದುಕೊಳ್ಳುವುದು, ಹಣ, ಹೆಂಡ, ಹೆಣ್ಣಿನ ಆಮಿಷ ಒಡ್ಡುವುದು. ಅಧಿಕಾರಿ ಇದ್ಯಾವುದಕ್ಕೂ ಬಗ್ಗುವ ಆಳಲ್ಲ ಎಂದು ತಿಳಿದರೆ, ಆಗ ಆರಂಭವಾಗುತ್ತದೆ ಫೋಟೋಗ್ರಫಿ-ಕಂಪ್ಯೂಟರ್ ಟ್ರಿಕ್. ಅಧಿಕಾರಿಯ ವೈಯಕ್ತಿಕ ಮಾಹಿತಿಯನ್ನು ಸೂರ್ಯಕಾಂತ ಪೂರೈಸುತ್ತಾನೆ. ಅಗತ್ಯವಾದ ಫೋಟೋ (ಅವರ ಕುಟುಂಬದವರೂ ಸೇರಿದಂತೆ)ಗಳು ಹಿತೇಂದ್ರನ ಕೈ ಸೇರುತ್ತವೆ. ಹಾಯ್ ಮಾರುತದಲ್ಲಿ ಇವರಿಬ್ಬರೇ ಸೃಷ್ಟಿಸಿದ, ಚಿತ್ರಿಸಿದ ಕಪೋಲಕಲ್ಪಿತ ವರದಿಗಳು ಧಾರವಾಹಿಯಂತೆ ಪ್ರಕಟವಾಗಲಾರಂಭಿಸುತ್ತವೆ.


ಹಿತೇಂದ್ರನ ಇನ್ನೊಂದು ಮುಖ

ಇದನ್ನು ನೋಡಿದ ಸದರಿ ಅಧಿಕಾರಿಯ ಕುಟುಂಬ ಒಂದೋ ವರ್ಗಾ ಮಾಡಿಸಿಕೊಳ್ಳಬೇಕು, ಇಲ್ಲ ಆತ್ಮಹತ್ಯೆ ಮಾಡಿಕೊಳ್ಳಬೇಕು ಅಥವಾ ಇವನ ಡಿಮ್ಯಾಂಡಿಗೆ ಒಪ್ಪಬೇಕು. ಅಂತಹ ನರಕ ನಿರ್ಮಿಸಿ ಬಿಡುತ್ತಾರೆ ಈ ಹಿತೇಂದ್ರ ಮತ್ತು ಸೂರ್ಯಕಾಂತ.

ನೇತ್ರಾವತಿ ಬ್ಯಾಂಕಿನ ಮಂಗಳೂರು ಶಾಖೆಯ ಮ್ಯಾನೇಜರ್‌ಗೆ ಸ್ವಲ್ಪ ಸೆರಗಿನ ಹುಚ್ಚು, ಇದನ್ನು ಪತ್ತೆಹಚ್ಚಿದ ಸೂರ್ಯಕಾಂತ, ಹಿತೇಂದ್ರನನ್ನು ಮ್ಯಾನೇಜರ್ ಮೇಲೆ ಛೂ ಬಿಟ್ಟ. ಮ್ಯಾನೇಜರ್ ಸ್ನೇಹ ಬೆಳೆಸಿದ ಹಿತೇಂದ್ರ ಅವನನ್ನು ಉಪಾಯವಾಗಿ ಲಾಡ್ಜೊಂದಕ್ಕೆ ಕರೆದೊಯ್ದು ತಾನು ಪಳಗಿಸಿದ್ದ ಹೆಣ್ಣೊಬ್ಬಳನ್ನು ಆತನ ತೆಕ್ಕೆಗೆ ಬಿಟ್ಟುಬಿಟ್ಟ. ಆದರೆ ತನ್ನ ಈ ಸಲ್ಲಾಪ ರಹಸ್ಯ ಕಿಂಡಿಯಿಂದ ಚಿತ್ರಣವಾಗುತ್ತಿದೆ ಎಂಬ ಅರಿವು ರಸಿಕ ಮ್ಯಾನೇಜರ್‌ಗೆ ಇರಲಿಲ್ಲ. ಇದಾದ ನಂತರ ಆರಂಭವಾಯ್ತು ನೋಡಿ ಹಿತೇಂದ್ರ, ಸೂರ್ಯಕಾಂತರ ಹಿಕ್ಮತ್ತು.

ನೇತ್ರಾವತಿ ಬ್ಯಾಂಕಿನ ಶಾಖೆಯಲ್ಲೊಂದು ಅಕೌಂಟ್ ತೆರೆದ ಸೂರ್ಯಕಾಂತ ಮತ್ತು ಹಿತೇಂದ್ರ, ಅಲ್ಲೊಂದಿಷ್ಟು ಚಿಲ್ಲರೆ ದುಡ್ಡು ಡಿಪಾಸಿಟ್ ಮಡಗಿ ಚೆಕ್ ಬುಕ್ ಪಡೆದರು. ಆರಂಭಿಸಿದರು ನೋಡಿ ಟ್ರಾನ್ಸಾಕ್ಷನ್. ಅವರ ಅಕೌಂಟ್‌ನಲ್ಲಿ ಹಣ ಇರಲಿ-ಬಿಡಲಿ ಚೆಕ್ ಪಾಸ್ ಆಗಬೇಕು. ಇಲ್ಲದಿದ್ದರೆ "ಲಾಡ್ಜು ಕ್ಯಾಸೆಟ್ಟು"!. ಅವರು ಕೇಳಿದಾಗ ಓಡಿ ಸೌಲಭ್ಯ, ಇಲ್ಲದಿದ್ದರೆ ಕ್ಯಾಸೆಟ್ಟು, ಸಾಲ್ವೆನ್ಸಿ ಸರ್ಟಿಫಿಕೇಟು. ಹೀಗೆ ಮ್ಯಾನೇಜರ್‌ನನ್ನು ಅಕ್ಷರಶಃ ಹಿರಿದು ನುಂಗಿದ ಜೋಡಿಯಲ್ಲಿ ಈಗ ಒಬ್ಬ ಕೊಲೆಯಾಗಿದ್ದಾನೆ. ಸೂರ್ಯಕಾಂತ ಪ್ರಭು ಮುಖ ಮುಚ್ಚಿಕೊಂಡು ಓಡಾಡುತ್ತಿದ್ದಾನೆ. ಬ್ಯಾಂಕ್ ಮ್ಯಾನೇಜರ್ ಕೆಲಸ ಕಳೆದುಕೊಳ್ಳುವ ಸ್ಥಿತಿ ತಲುಪಿದ್ದಾನೆ.

ಕಳೆದ ಅಕ್ಟೋಬರ್‌ನಲ್ಲಿ ಲೋಕಾಯುಕ್ತ ವೆಂಕಟಾಚಲಾರವರು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯ ಮೇಲೆ ದಾಳಿ ಮಾಡಿದಾಗ 50 ಲಕ್ಷ ರೂಪಾಯಿ ಮೌಲ್ಯದ ಅಡಗಿಸಿಟ್ಟಿದ್ದ ಔಷಧಗಳು ಪತ್ತೆಯಾಯ್ತು. ಅದರಲ್ಲೂ ಇದೇ ಸೂರ್ಯಕಾಂತನ ಕೈವಾಡವಿತ್ತು. ಆದರೆ ಹಿತೇಂದ್ರ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಧಮಕಿ ಹಾಕಿ ಗೆಣೆಕಾರರನ್ನು ಬಚಾವ್ ಮಾಡಿಬಿಟ್ಟ.

ಹಿತೇಂದ್ರನ ಕೊಲೆಯ ನಂತರ ಸೂರ್ಯಕಾಂತ ಹಿಂಡಿನಿಂದ ದಿಕ್ಕುತಪ್ಪಿದ ಕುರಿಯಂತಾಗಿದ್ದಾನೆ. ಇವನು ತಿನ್ನುತ್ತಿದ್ದ ಎಂಜಲಿಗೆ ಪಾಲುದಾರರಾಗಿದ್ದ ಸತೀಶ್ ಭಟ್ಟ, ವಾಮನಬಾಳಿಗ ಅಲಿಯಾಸ್ ಕುಡುಕ ಬಾಳಿಗ, ಪ್ರಕಾಶ್ ಪೂಜಾರಿ ಮತ್ತು ಸುರೇಶ್ ಹೆಬ್ರಿ ಸಹ ಹಿತೇಂದ್ರ ಕೊಲೆಯಾದ ದಿನ ಅವನೊಂದಿಗೆ ತಲ್ಲೂರ್ಸ್ ಲೈವ್‌ಬ್ಯಾಂಡ್ ಮೇಲಿನ ದಾಳಿಗೆ ಹೋಗಿದ್ದರು. ಈಗ ನಿರಾಶ್ರಿತರಂತೆ ಮನೆ ಸೇರಿ ಮಕಾಡೆ ಮಲಗಿ ಬಿಟ್ಟಿದ್ದಾರೆ.

ಕಂಡಕಂಡ ಅಧಿಕಾರಿಗಳ ಮೇಲೆಲ್ಲಾ ಲೋಕಾಯುಕ್ತಕ್ಕೆ ದೂರು ನೀಡಿ ಅವರ ಮೇಲೆ ದಾಳಿ ನಡೆಸಿ, ಅದನ್ನು ಹಿತೇಂದ್ರನ ಮೂಲಕ ಫೋಟೋ, ವಿಡಿಯೋ ತೆಗೆಸಿ ಮರ್ಯಾದೆ ಹರಾಜು ಹಾಕುತ್ತಿದ್ದ ಸೂರ್ಯಕಾಂತನ ಅವ್ಯವಹಾರಗಳ ಬಗ್ಗೆಯೇ ಈಗ ತನಿಖೆ ನಡೆಯಬೇಕಿದೆ.

ಹಿತೇಂದ್ರ ಪಿಶಾಚಿಯಾಗಿ ಕಾಡುವನೆ?

ನರಕ್ರಿಮಿ ಹಿತೇಂದ್ರ ನೆಗೆದುಬಿದ್ದು ಶಿವನ ಪಾದ ಸೇರಿದ ಮೇಲೆ ಆತ ಕಾಯಿಯಾಗಿರುವುದು ಮಂಗಳೂರು ಮತ್ತು ಉಡುಪಿ ಎರಡೂ ಜಿಲ್ಲೆಯ ಜನರಿಗೆ ಸಾಕಷ್ಟು ನೆಮ್ಮದಿ ತಂದಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅವನ ಬೆಂಬಲಿಗರು (ಬಹುಶಃ ಆತ ಸತ್ತ ಮೇಲೆ ಅದರೆಲ್ಲ ನ್ಯೂಟ್ರಲ್) ಮತ್ತು ಬೆಂಬಲಿಸುವ ವಿಜಯಕಿರಣ ಪತ್ರಿಕೆಯ ಪ್ರಕಾಶ್ ಪಾಂಡೇಶ್ವರನಂತಹ ಮತ್ತೊಬ್ಬ ಪಾತಕಿಗೆ ಹಿತೇಂದ್ರನ ಸಾವು ವೀರ ಮರಣವಾಗಿಯೂ, ಆತ ಸ್ವರ್ಗಸ್ಥನೆಂದಾಗಿಯೂ ಕಾಣಬಹುದು, ಬರೆಯಲೂ ಬಹುದು.

ಆದರೆ ಇಲ್ಲೂ ಬ್ರಾಹ್ಮಣರ ಲೆಕ್ಕಾಚಾರ ನೋಡಿ. ಮಂಗಳೂರಿನ ಮಂಗಳ ದೇವಿ ದೇವಸ್ಥಾನದಲ್ಲಿ ದಿನಪತ್ರಿಕೆಯೊಂದನ್ನು ಹಿಡಿದು ಕೂತಿದ್ದ ವಿಪ್ರೋತ್ತಮರ ನಡುವೆ ಹಿತೇಂದ್ರ ಪ್ರಸಾದ್ ಕೊಲೆಯ ವಿಶ್ಲೇಷಣೆ ಹೀಗೆ ಸಾಗುತ್ತದೆ.

"ಇಂತಹ ರಾಕ್ಷಸ ಸತ್ತ ದಿನ ಗಮನಿಸಿದಿರ? ಸಾಮಾನ್ಯವಾಗಿ ನಮ್ಮ ಧರ್ಮದ ನಂಬಿಕೆಯಂತೆ, ಅಮವಾಸ್ಯೆಯ ದಿನ, ಹುಣ್ಣಿಮೆಯ ದಿನ ಜನಿಸಿದರೆ ಉತ್ತಮ. ಅಮವಾಸ್ಯೆಯಂದು ಸತ್ತರೆ ಪರಿಪೂರ್ಣ ಆಯಸ್ಸು. ಅದೇ ರೀತಿ ಅಮಾವಾಸ್ಯೆಯ ಹಿಂದಿನ ದಿನ ಅಂದರೆ ಚತುರ್ದಶಿಯಂದು ಸತ್ತರೆ ಖಂಡಿತವಾಗಿ ರಾಕ್ಷಸರೇ ಸರಿ. ನರಕಾಸುರನನ್ನು ಕೊಂದಿದ್ದು ಚತುರ್ದಶಿಯಂದು ತಾನೆ?

ಮೊನ್ನೆ ಹಿತೇಂದ್ರ ಕೊಲೆಯಾದಾಗ, ಅದು ತ್ರಯೋದಶಿಯಾಗಿದ್ದರೂ ಸುಮಾರು ಎರಡು ಗಂಟೆ ಕಾಲ ನರಳಿ, ನರಳಿ ಚತುರ್ದಶಿ ಕಾಲಿಟ್ಟ ಕೂಡಲೆ ಅವನು ಪ್ರಾಣ ಬಿಟ್ಟ! ಆವನು ಬದುಕಿದ್ದಾಗಲೂ ರಾಕ್ಷಸನಾಗಿ ಪೀಡಿಸಿದ, ಸತ್ತಾಗಲೂ ರಾಕ್ಷಸನ ಸಾವೇ ಸತ್ತ" ಹೀಗೇ ಮುಕ್ತಾಯ ಗೊಳ್ಳುತ್ತದೆ ವಿಪ್ರೋತ್ತಮರ ಚರ್ಚೆ.

ಸತ್ತಿರುವ ಹಿತೇಂದ್ರ ಪಿಶಾಚಿಯಾಗಿ ಬಂದು ನಮ್ಮನ್ನು ಮತ್ತೆ ಕಾಡದಿರಲಿ ಎಂದು ಇವರೆಲ್ಲಾ ಸೇರಿ ಕಟಿಲು ದುರ್ಗಾಪರಮೇಶ್ವರಿ ಸನ್ನಿಧಿಯಲ್ಲಿ ವಿಶೇಷ ಯಜ್ಞ ಮಾಡಿಸಿದರೂ ಆಶ್ಚರ್ಯವಿಲ್ಲ! ■

ವಾಯಿತು. ಶೆಟ್ಟಿ ಜೆಡಿಎಸ್ ಅಧ್ಯಕ್ಷನ ಕೆಪ್ಯಾಸಿಟಿಯಲ್ಲಿ ಲೈವ್‌ಬ್ಯಾಂಡಿಗೆ ಮುತ್ತಿಗೆ ಹಾಕಿದರೆ, ಅದನ್ನು ವರದಿ ಮಾಡುವ ನೆಪದಲ್ಲಿ ಹಿತೇಂದ್ರ ಅಲ್ಲಿಗೆ ಬರುವುದೆಂದು ಮಾತಾಯ್ತು. ಅದರಂತೆ ಎಲ್ಲರೂ ಸ್ಥಳಕ್ಕೆ ಹೋಗಿದ್ದಾರೆ. ಆದರೆ ಅಲ್ಲಿ ಕೇಸ್ ಉಲ್ಟಾ ಆಗಿದೆ. ಇವರ ದಾಳಿಯ ಬಗ್ಗೆ ಮಾಹಿತಿ ಇದ್ದ ರೋಹಿತ್ ಕುಮಾರ್ ತಮ್ಮ ರಕ್ಷಣೆಗೆ ಇನ್ನೂರು ಹುಡುಗರನ್ನು ನಿಲ್ಲಿಸಿಕೊಂಡಿದ್ದರು. ದೇವಿಪ್ರಸಾದ್ ಶೆಟ್ಟಿ ಕಾರಿನಿಂದ ಇಳಿಯಲೇ ಇಲ್ಲ, "ಪ್ರತಿಭಟನೆ", ಅದರ "ವರದಿ" ಎರಡೂ ನಿಭಾಯಿಸುವ ಜವಾಬ್ದಾರಿ ಹಿತೇಂದ್ರ ಪ್ರಸಾದ್ ತಲೆಗೇ ಬಂತು. ರೋಹಿತ್‌ಕುಮಾರ್ ಏನು ಸುಮ್ಮನಿರಲಿಲ್ಲ, "ನಾವು ಲೈವ್‌ಬ್ಯಾಂಡ್ ಓಪನ್ ಮಾಡಿ ಇನ್ನೂ ತಿಂಗಳಾಗಿಲ್ಲ ಆಗಲೇ ನಿಮಗೆ ಒಂದು ಲಕ್ಷ ಕೊಟ್ಟಾಗಿದೆ. ಈಗ ಮತ್ತೆ ಮೂರು ಲಕ್ಷ ಕೊಡಿ ಎಂದರೆ ಎಲ್ಲಿಂದ ಕೊಡುವುದು?" ಎಂದು ಬಹಿರಂಗವಾಗಿ ಕೇಳಿಬಿಟ್ಟ.



ರೋನಿ

ಈ ಸತ್ಯ ಹಿತೇಂದ್ರ ಪ್ರಸಾದನನ್ನು ಕೆರಳಿಸಿಬಿಟ್ಟಿತು. ಆಗಲೇ ಆತ 'ನಿನ್ನ ಲೈವ್‌ಬ್ಯಾಂಡನ್ನೇ ಮುಚ್ಚಿಸಿ ಬಿಡುತ್ತೇನೆ' ಎಂದು ಎಸ್ಪಿಗೆ ಫೋನ್ ಮಾಡಲು ಗುಂಪಿನಿಂದ ಹೊರಬಂದು ಕೊಲೆಯಾಗಿದ್ದು. ಇಲ್ಲಿ ಒಂದು ವಿಚಾರ ನೆನಪಿರಲಿ. ರೋಹಿತ್‌ಕುಮಾರ್ ಒಬ್ಬ ಬ್ಯುಸಿನೆಸ್‌ಮ್ಯಾನ್. ಬ್ಯಾಂಡ್ ತೆರೆದು ಕೇವಲ ಒಂದು ತಿಂಗಳಾಗಿತ್ತು, ರೋಲ್‌ಕಾಲ್‌ನಂತಹ ಕ್ಷುಲ್ಲಕ ವಿಚಾರಕ್ಕೆ ... ತನ್ನ ಅಂಗಳದಲ್ಲೇ, ಒಬ್ಬನ ಕೊಲೆ ಮಾಡಿಸಿ, ಜೈಲಿಗೆ ಹೋಗಿ ಕೂರುವಂತಹ ಹುಂಬನಲ್ಲ. ಹಿತೇಂದ್ರನನ್ನು ಎತ್ತಿಸಬೇಕೆಂದಿದ್ದರೆ ಅದಕ್ಕೆ ಹಲವಾರು ದಾರಿ-ಅವಕಾಶಗಳಿದ್ದವು.

ಅವನಿಗೆ ಮತ್ತಾವುದೋ ದಿಕ್ಕಿನಿಂದ ಜೀವ ಭಯವಿದ್ದುದು ಸ್ಪಷ್ಟವಾಗುತ್ತದೆ. ಕಳೆದ ವರ್ಷವಷ್ಟೇ ಪುತ್ತೂರಿನ ಶೋಬಿತ ಎಂಬ ಯುವತಿಯನ್ನು ಹಿತೇಂದ್ರ ವಿವಾಹವಾಗಿದ್ದ. ತನ್ನ ಹೊಸಬೆಟ್ಟು ಮನೆಯ ಸುತ್ತ ಕೋಟೆಯಂತಹ ಗೋಡೆಯನ್ನು ನಿರ್ಮಿಸಿಕೊಂಡಿದ್ದ. ಅವನು ಮನೆ ಬಿಟ್ಟು ಹೊರಬರುತ್ತಿದ್ದುದೇ ಅಪರೂಪ. ಬಂದರೂ ಅವನೊಂದಿಗೆ ಅವನ ಪತ್ನಿ ಇರುತ್ತಿದ್ದಳು. ಭೂಗತ ಜಗತ್ತಿನಲ್ಲಿ ಒಂದು ನಿಯಮವಿದೆ. ಎಂತಹ ಬದ್ಧವೈರಿಯಿರಲಿ ಅವನೊಂದಿಗೆ ಪತ್ನಿ ಅಥವಾ ಮಕ್ಕಳಿದ್ದರೆ ಆತನ ಕೂದಲೂ ಕೊಂಕುವುದಿಲ್ಲ, ಇದು ಅಲಿಖಿತ ನಿಯಮ. ಇದೇ ಕಾರಣಕ್ಕಾಗಿ ಲೈವ್‌ಬ್ಯಾಂಡ್ ರೇಡ್‌ಗೂ ಆತನ ಪತ್ನಿ ಬಂದಿದ್ದಳು.

ಆದರೂ ಹಿತೇಂದ್ರ ಕೊಲೆಯಾದ. ಶಂಕಿತ ಆರೋಪಿಯೇನೋ ಪೆಟ್ಟಿ ನಾಗೇಶ. ಆದರೆ ಈತ ಯಾರಿಂದ ಪ್ರೇರಿತ ಎಂಬುದು ಈಗ ಯಕ್ಷ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಎಂದರೆ 2005 ರ ಜೂನ್ 18 ರಂದು ಉಡುಪಿಯಲ್ಲಿ ಕೊಲೆಯಾದ ಮುಂಬೈನ ಭೂಗತಲೋಕದ ಪಾತಕಿ ಸ್ಟ್ಯಾನ್ಲಿ ಲಾರೆನ್ಸ್ ಲೋಬೋ ಅಲಿಯಾಸ್ ರೋನಿ ಪ್ರಕರಣಕ್ಕೆ ಜಾರಬೇಕಾಗುತ್ತದೆ. ರೋನಿ, 1980 ರಲ್ಲಿ ಮುಂಬೈ ಅಂಡರ್ ವರ್ಲ್ಡ್‌ನಲ್ಲಿ ಕುಖ್ಯಾತನಾಗಿದ್ದ ಕೊರ್ಕ್ಕಣೆ ನರಸಿಂಹನ ಬಲಗೈ ಬಂಟ. ನರಸಿಂಹ ನಂತರ ಅಮರ್ ನಾಯ್ಕನ ಗ್ಯಾಂಗ್‌ನಿಂದ ಹತನಾದ.

ಸದರಿ ನರಸಿಂಹನ ಕೀಪ್ ಪದ್ಮಾ ಅಲಿಯಾಸ್ ಗೋಪಿ ಎಂಬಾಕೆ ಉಡುಪಿಗೆ ಬಂದು ನೆಲೆಸಿದ್ದಳು. ಇಲ್ಲಿ ಸಾಕಷ್ಟು ಆಸ್ತಿ ಖರೀದಿಸಿ ಲಕ್ಷುರಿಯಾಗಿ ಬದುಕುತ್ತಿದ್ದಳು. ಇದೇ ವೇಳೆಗೆ ಎನ್‌ಕೌಂಟರ್ ಭೀತಿಯಿಂದ ರೋನಿ ಸಹ ಉಡುಪಿಗೆ ಬಂದು ನೆಲೆ ... ಅಧಿಕೃತ) ಬೆಂಬಲ ನೀಡತೊಡಗಿದ ವಿಚಾರದಲ್ಲಿ ರೋನಿಯೊಂದಿಗೆ ಜಗಳಕ್ಕೆ ಬಿದ್ದ ಪದ್ಮ, ರೋನಿಯ ಕೊಲೆಗೆ ಸುಪಾರಿ ನೀಡಿ ಅವನನ್ನು ಮೇಲಕ್ಕೆ ಕಳಿಸೇಬಿಟ್ಟಳು.



ಆದರೆ ಮುಂಬೈನಲ್ಲೇ ಇದ್ದ ರೋನಿಯ ಮತ್ತೊಬ್ಬ ಸಹಚರ, ಭೂಗತ ಜೀವಿ ಅಶೋಕ್ ಮರಕಾಲ ಸ್ನೇಹಿತನ ಸಾವಿಗೆ ಸೇಡು ತೀರಿಸಿಕೊಳ್ಳಲು ಸಜ್ಜಾದ. ಮುಂಬೈನಿಂದ ಶಾರ್ಪ್‌ಶೂಟರ್‌ಗಳ ತಂಡ ಒಂದು ಬಂದಿಳಿಯಿತು. ರೋನಿ ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದ ಪದ್ಮ 2005 ಅಕ್ಟೋಬರ್ 10 ರಂದು ನ್ಯಾಯಾಲಯದಿಂದ ತನ್ನ ಅಣ್ಣ ಗೋಪಾಲ ಪೂಜಾರಿಯೊಂದಿಗೆ ಮಟಪಾಡಿ ಸಮೀಪ ಕಾರಿನಲ್ಲಿ ಬರುತ್ತಿದ್ದಾಗ ಮುಂಬೈ ಶಾರ್ಪ್ ಶೂಟರ್‌ಗಳ ಗುಂಡಿಗೆ ಬಲಿಯಾದಳು. ಈ ಶಾರ್ಪ್‌ಶೂಟರ್‌ಗಳಿಗೆ ಕುಂದಾಪುರದ ನವೀನ್ ಲಾಡ್ಜ್ ಹಾಗು ಉಡುಪಿಯ ಶಾರದಾ ಇಂಟರ್ ನ್ಯಾಷನಲ್ ನಲ್ಲಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಿದವನೇ ಈ ಬ್ಲಾಕ್‌ಮೇಲರ್ ಹಿತೇಂದ್ರ ಪ್ರಸಾದ್.


ಭವಾನಿ ಶೆಟ್ಟಿ

ಈ ಪ್ರಕರಣದಲ್ಲಿ ಭ್ರಮ್ಹಾವರ ಪೊಲೀಸ್ ಇನ್ಸ್‌ಪೆಕ್ಟರ್ ವಿದ್ಯಾಶಂಕರ್ ಹಿತೇಂದ್ರನನ್ನು ಬಂಧಿಸಿದ್ದರು. ಆದರೆ ಬೆದರುಬೊಂಬೆ ಮುರುಗನ್ ಎಂಬ ಎಸ್ಪಿ ಈ "ಕಾರ್ಯ ಮರೆತ ಪತ್ರಕರ್ತ"ನ ಬಗ್ಗೆ ಶಿಫಾರಸ್ಸು ಮಾಡಿ ಎರಡೇ ಗಂಟೆಯೊಳಗೆ ಬಂಧಮುಕ್ತಗೊಳಿಸಿ ಬಿಟ್ಟರು. ಕರಾವಳಿಯ ಭೂಗತ ಜಗತ್ತಿನ ಗಣಿತ ಆಗಾಗ್ಗೆ ಬದಲಾಗುತ್ತಿರುತ್ತದೆ. ಯಾವ ಬನ್ನಂಜೆ ...

ಬಿಟ್ಟಿದ್ದರು. ಊರ ತುಂಬಾ ವೈರಿಗಳು ಹುಟ್ಟಿಕೊಂಡಿದ್ದರು. ಅಲ್ಲಿ ಅಶೋಕ್ ಮರಕಾಲ, ಬನ್ನಂಜೆ, ವಿಶ್ವನಾಥ ಶೆಟ್ಟಿ ಒಂದಾಗಿದ್ದಾರೆ ಎಂಬ ಸುದ್ದಿ ಹಿತೇಂದ್ರ ಕಿವಿಗೆ ಕಾದ ಕಬ್ಬಿಣ ಸುರಿದಂತೆ ಬಂದು ಆತ ಜೀವ ಭಯದಿಂದ ನರಳುತ್ತಿದ್ದ.

ಕೆಲವು ಮೂಲಗಳ ಪ್ರಕಾರ ಒಂದು ಕಾಲದ ಮುಂಬೈ ಡಾನ್ ದಿವಂಗತ ಪಣೆಯೂರು ಸಾಧುಶೆಟ್ಟಿಯ ಬಲಗೈ ಬಂಟ, ತುಳುನಾಡು ಸೇನೆಯ ಪ್ರಧಾನ ಕಾರ್ಯದರ್ಶಿ, ಹಾಲಿ ಜೆಡಿಎಸ್ ಜಿಲ್ಲಾಧ್ಯಕ್ಷ ದೇವಿಪ್ರಸಾದ್ ಶೆಟ್ಟಿಯೇ ಹಿತೇಂದ್ರನನ್ನು ಹಂತಕರ ತೆಕ್ಕೆಗೆ ಹಾಕಿಕೊಟ್ಟನೆಂಬ ಸುದ್ದಿ ಎರಡು ಜಿಲ್ಲೆಗಳಾದ್ಯಾಂತ ದಟ್ಟವಾಗಿ ಹಬ್ಬಿದೆ. ಪದ್ಮ ಆಲಿಯಾಸ್ ಗೋಪಿಯ ಹಂತಕರಿಗೆ ಆಶ್ರಯ ನೀಡಿ ಹಿತೇಂದ್ರ ಪ್ರಸಾದ್‌ನನ್ನು ಮುಗಿಸಲು, ಪದ್ಮಾಳ ಅಣ್ಣ ಗೋಪಾಲ ಪೂಜಾರಿ, ಬನ್ನಂಜೆ ಮತ್ತು ವಿಶ್ವನಾಥ ಶೆಟ್ಟಿ ಮೊರೆ ಹೋಗಿದ್ದಾನಂತೆ. ಕೆಲಸ ಕೈಗೂಡಲು ಈ ಇಬ್ಬರು ಡಾನ್‌ಗಳು ದೇವಿಪ್ರಸಾದ್ ಶೆಟ್ಟಿಯನ್ನು ಬಳಸಿಕೊಂಡಿರಬಹುದು. ಆ ಕಾರಣಕ್ಕೇ ಪ್ರತಿಭಟನೆಯ ನಾಯಕನಾದ ಈತ ಕಾರು ಬಿಟ್ಟೇ ಇಳಿಯಲಿಲ್ಲ.


ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮುಖ್ಯಮಂತ್ರಿ ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಿ.ಟಿ. ಜಯಕುಮಾರ್ ಯಾರೇ ಜಿಲ್ಲೆಗೆ ಬಂದರೂ ಪಕ್ಕದಲ್ಲಿ ಮಿಂಚುವ ದೇವಿಪ್ರಸಾದ್ ಶೆಟ್ಟಿಗೆ ಇವತ್ತು ಮುಂಬೈ ಮತ್ತು ದುಬೈನ ಡಾನ್‌ಗಳ ಸಂಪರ್ಕವಿದೆ. ಬನ್ನಂಜೆ ಮತ್ತು ವಿಶ್ವನಾಥ ಶೆಟ್ಟಿಯ ಅಣತಿಯಂತೆ ... ■

ಜಂಟ್ಸ್ ದ್ರೌಪದಿ ವಸ್ತ್ರಾಪಹರಣ; ಗೌರವಾನ್ವಿತ ದಗಾಕೋರರಿಂದ

ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಕಾಣಸಿಗುವ ಹಲ್ಕಾತನ, ಮೋಸ, ದಗಲ್ಬಾಜಿತನ, ತಾರಾ ಡಾಂಬಿಕತೆ....ಗಳನ್ನು ಕಂಡ ಸೂಕ್ಷ್ಮ ಮನಸ್ಸಿನ ಎಲ್ಲರೂ ನೋವನುಭವಿಸುತ್ತಾರೆ. ಆದರೆ ವೃತ್ತಿಪರ ಭಾಷಣಕಾರನೊಬ್ಬನಿಗೆ ಅದು ವಸ್ತುವಾದರೆ ಪ್ರೇಕ್ಷಕರು ಜಾಗ ಖಾಲಿ ಮಾಡಬೇಕಾಗುತ್ತವೆ. ಅಳುಮುಂಜಿಗಳ ಬಾಯಲ್ಲಿ ಸಿಕ್ಕರಂತೂ ಎದುರಿನವರ ಸ್ಥಿತಿ ಶೋಚನೀಯ. ಆದರೆ ನಮ್ಮ ಎಚ್.ಎಲ್. ಕೇಶವಮೂರ್ತಿ ಅವರಂಥ ನುರಿತ ಹಾಸ್ಯ ಸಾಹಿತಿಗಳ ಕೈಯಲ್ಲಿ ಅವು ಆಕರ್ಷಕ ನಗೆಬರಹಗಳಾಗಿ ಮೂಡಿಬರುತ್ತವೆ. ಓದಿದವರು, ಕೇಳಿದವರು ಕಚಗುಳಿಗೊಳಗಾದವರ ಹಾಗೆ ನಗುತ್ತಾ ಮುಂದಿನ ಪ್ರಕರಣ ಯಾವುದು? ಅಂತ ಉಲ್ಲಾಸದ ಬುಗ್ಗೆಗಳ ಹಾಗೆ ಓದಿ ಓದಿ... ಹಗುರಾಗುತ್ತ ತಮ್ಮ ದುಗುಡಗಳನ್ನೂ ಅವುಗಳ ಜತೆ ಸಮೀಕರಿಸಿಕೊಳ್ಳುತ್ತಾ ಒಂದು ಆಪ್ತ ಸುಖವನ್ನು, ಖುಷಿಯನ್ನು ಅನುಭವಿಸುತ್ತಾರೆ. ಹಾಸ್ಯ ಬರಹಗಾರನೊಬ್ಬ ಸಾಧಿಸಬಹುದಾದ ಆತ್ಯಂತಿಕ ಗೆಲವು ಈ ಬಗೆಯದು.

ಇಂಥ 'ಗೆಲುವಾಗಿಸುವ ಅನುಭವಕ್ಕಾಗಿ' ಕಾತರಿಸುವವರು ಖಂಡಿತವಾಗಿ ಎಚ್.ಎಲ್. ಕೇಶವ ಮೂರ್ತಿ ಅವರ 'ಜಂಟ್ಸ್ ದ್ರೌಪದಿ ವಸ್ತ್ರಾಪಹರಣವು' ಹಾಗೂ 'ಗೌರವಾನ್ವಿತ ದಗಾಕೋರರು' ಕೃತಿಗಳನ್ನು ಕೈಗೆತ್ತಿಕೊಳ್ಳಬೇಕು. ಎತ್ತಿಕೊಂಡ ಮೇಲೆ ಕೆಳಗಿಡಲಾರದ ಆಕರ್ಷಣೆ ಅವರ ಬರಹದಲ್ಲಿದೆ. ಸ್ವತಃ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿದ್ದ ಲೇಖಕರು ಗ್ರಾಮ್ಯ ಸೊಗಡನ್ನು (ಅರೆ ಗೊತ್ತಾಗಿಲ್ವ ಸಾ ನಾನು?- ಥೇಟ್ ಮಂಡ್ಯದ ಮಣ್ಣಿನ ಗಡಸು ದನಿ) ಉಳಿಸಿಕೊಳ್ಳುತ್ತಲೇ ವೈಜ್ಞಾನಿಕ ಶಿಸ್ತಿನಿಂದ ಭಾಷೆಯನ್ನು ಬಳಸುತ್ತಾರೆ. ಒಂದು ಶಬ್ದ ಸಹ ಪೋಲಾಗದ ಅಚ್ಚುಕಟ್ಟಾದ ಸಂಭಾಷಣೆಗಳು, ವಿಡಂಬನೆಗೆ ಹೇಳಿ ಮಾಡಿಸಿದ ಶೈಲಿ ಅವರದ್ದು. ಕೇಶವಮೂರ್ತಿಯವರು ಎತ್ತಿಕೊಳ್ಳುವ ವಸ್ತುಗಳಾದರೋ ನಮ್ಮ ನಡುವಿನವೇ. "ಇಂಥವರನ್ನು ದಿನಾ ನೋಡ್ತೀವಲ್ವ! ಹೇಗೆ ಲೇವಡಿಗೊಳಗಾಗಿದ್ದಾರೆ ನೋಡಿ" ಎಂಬ ಖುಷಿ ಓದುಗರಿಗೆ ನಿರಾಯಾಸವಾಗಿ ದಕ್ಕುತ್ತದೆ.





'ಗೌರವಾನ್ವಿತ ದಗಾಕೋರರು'

'ಜಂಟ್ಸ್ ದ್ರೌಪದಿ ವಸ್ತ್ರಾಪಹರಣವು'

ವೈಚಾರಿಕ, ವೈಜ್ಞಾನಿಕ ಚಿಂತನಾಕ್ರಮ, ಮಾನವ ಪ್ರೀತಿಯಲ್ಲಿ ಗಾಢವಾದ ನಂಬಿಕೆ, ಸಮಾಜದ ಜನರೆಲ್ಲರ ಸ್ವಾಸ್ಥ್ಯಕ್ಕಾಗಿ ತುಡಿಯುವ ಶುದ್ಧ ಸ್ವಚ್ಛ ಸಮಾಜದ ಕನಸುಗಳನ್ನು ತುಂಬಿಕೊಂಡ, ಜಾತಿ ಲಿಂಗ ವೈಷಮ್ಯ, ಮೂಢನಂಬಿಕೆ-ಭ್ರಷ್ಟಾಚಾರಗಳಂಥ ಅನಿಷ್ಟಗಳ ಕುರಿತು ಕ್ರುದ್ಧನಾಗಿರುವ ನಿರೂಪಕ (ಲೇಖಕ) ಎಲ್ಲಿಯೂ ಕೋಪಾವೇಶದ ಕ್ರೋಧದ ಮಾತನಾಡುವುದಿಲ್ಲ. ಆದರೆ ಒಳಗಿನ ಕ್ರೋಧದ ಅನುಭವ ಓದುಗನಿಗೆ ಪರಿಣಾಮಕಾರಿಯಾಗಿ ಸಂವಹಿಸಲ್ಪಡುವುದು ಅವರ ನಗೆಪೂರಿತ ಸಂಭಾಷಣೆ, ವಿಪರೀತವೆನ್ನಿಸುವ ಆದರೆ ಅದನ್ನೆಸಗುವವ ಸಹಜವೆಂದು ಭಾವಿಸಿರುವ ವರ್ತನೆಗಳ ವರ್ಣನೆಗಳಿಂದ.

ಏನ್ ಮಾಡ್ಕಂಡಿದೀಯ ಕೆಲ್ಸ, ಗಿಲ್ಸ ಸಿಕ್ತ?


ಯಾವ ನನ್ಮಗ ಕೊಡ್ತಾನೆ ಸಾ ಕೆಲ್ಸವ?


ಇದು ಕ್ಯಾತ ಕೊಡುವ ಉತ್ತರದ ರೀತಿ. ಲೇಖಕರು ಕಂಡರಿಸಿದ ಸಮಾಜದ ಪ್ರತಿನಿಧಿ ಕ್ಯಾತ. 'ಜಂಟ್ಸ್ ದ್ರೌಪದಿ ವಸ್ತ್ರಾಪಹರಣವು' ಕೃತಿಯ ಹೆಚ್ಚಿನ ಲೇಖನಗಳಲ್ಲಿ (26 ಲೇಖನಗಳಿವೆ) ಆತ ಕಾಣಿಸಿಕೊಂಡು ಲೇಖಕರನ್ನು 'ಸಾ' ಎಂದು ಕರೆದು ಪೇಚಿಗೆ ಸಿಕ್ಕಿಸುತ್ತಾನೆ.

ಸೆಮಿನಾರಿಗಳು (ಸೆಮಿನಾರು ನಡೆಸುವುದರಲ್ಲೇ ತಮ್ಮ ಜೀವನದ ಸಾರ್ಥಕತೆ ಕಾಣುವವರು) ವಿಷಯ? ಚಲಾವಣೆಯಲ್ಲಿರುವ ಯಾವುದಾದರೂ ಆಗಬಹುದು. ಉದಾ: ಪರಿಸರ ಸಾಹಿತ್ಯ. ಹಣ ಸಾಲದೆ ಬಂದರೆ ಪರಿಸರ ಸಾಹಿತ್ಯ ಮತ್ತು ಜನಜೀವನ... ಹೀಗೆ ಸಾಗುವ ಗಾಂಪ್ರೋವಿಸ್ಕಿ ಕಾಂಪ್ರೋಸ್ಕಿ ಸಿದ್ಧಾಂತ ಲೇಖನದಲ್ಲಿ ಕ್ಯಾತ ಕೇಳುವ ಪ್ರಶ್ನೆಗಳು ನಮ್ಮ ಸ್ವಯಂಘೋಷಿತ ಬುದ್ಧಿಜೀವಿಗಳನ್ನು, ಅವರ ಢೋಂಗಿ ಪೋಸುಗಳನ್ನು ಇನ್ನಿಲ್ಲದಷ್ಟು ಸುಂದರವಾಗಿ ಲೇವಡಿ ಮಾಡಲಾಗಿದೆ. ಸಾಹಿತ್ಯ ಜಗತ್ತಿನ ದಿಗ್ಗಜಗಳನ್ನು ನೋಡಿ "ವೇದಿಕೆ ಮೇಲೆ ಕೂತವರ‍್ಯಾಕ್ಸಾ ಕೈ ಎಣ್ಣೆ ಕುಡ್ದೋರಂಗೆ ಮಕ ಮಾಡ್ಕಂಡವ್ರೆ?" ಎನ್ನುತ್ತಾನೆ ಕ್ಯಾತ.

"ಕೈ ಎಣ್ಣೆ ಮುಖ ಅಲ್ಲಪ್ಪ, ಅವರು ದೀರ್ಘ ಆಲೋಚನೇಲಿ ಮುಳುಗಿದ್ದಾರೆ."

"ಏಯ್ ಬುಡಿ ಸಾ, ಯೋಚ್ನೆ ಬಂದವೆ ಅಂತ ಹಿಂಗೆ ಮಕ ಸಿಂಡ್ರಿಸ್ಕೊಂಡು ಅಕಾಸವೇ ತಲೆ ಮ್ಯಾಲೆ ಬಿದ್ದಂಗೆ ಕುಂತ್ಗಂಡಾರ..." ಎಂದು ಕೇಳುವ ಕ್ಯಾತ ಮುಂದೆ ವಿದ್ವಾಂಸ ಕ್ಯಾತೇಗೌಡರಾಗಿ 'ಪಠ್ಯಪುಸ್ತಕಗಳ ಭಾಷೆ' ಕುರಿತ ವಿಚಾರ ಸಂಕಿರಣದಲ್ಲಿ ತನ್ನ ಗಂಪ್ರೋವಿಸ್ಕಿ ಮತ್ತು ಕಾಂಪ್ರೋಸ್ಕಿ ವರದಿಯ ಕುರಿತು ಹೇಳಿ ಸಭೆಯನ್ನು ಬೆರಗುಗೊಳಿಸುತ್ತಾನೆ. ಸ್ಯೂಡೋ ಇಂಟಲಿಕ್ಚುಯಲ್ಸ್ ಜಾತಿಯ ಜನ ತಮ್ಮನ್ನು ತಾವು ಮುಟ್ಟಿಕೊಳ್ಳುವಷ್ಟು ಕಚಗುಳಿ ಇಡುವ ಲೇಖನ ಇದು. ಹಾಗೆಯೇ ನೋಟ್ಸ್ ದುರಂಧರರ ಕಥಾನಕವು ಅಧ್ಯಾಪಕ ವರ್ಗಕ್ಕೆ ಕನ್ನಡಿ ಹಿಡಿದಿದೆ. ಎಚ್.ಎಲ್. ಕೇಶವಮೂರ್ತಿಯವರು ಸಾಂಸಾರಿಕ ಸಾಂಗತ್ಯದಲ್ಲಿ ಆರೋಗ್ಯಕರ ಹಾಸ್ಯಪ್ರಜ್ಞೆಯನ್ನು ಸೆರೆಹಿಡಿದು ಕೊಡುತ್ತಾರೆ. "ವಾಹನಗಳಿಗೆ ಶಾಕ್ ಅಬ್ಸಾರ್ಬರ್ಸ್ ಇದ್ದಂಗೆ ಇಳಿವಯಸ್ಸಿನ ದಂಪತಿಗಳು ಪರಸ್ಪರ 'ಬೈಗುಳದ ಅಬ್ಸಾರ್ಬರು'...." ಎಂಬ ತಾತ್ವಿಕ ನೆಲೆ ತಲುಪಿರುವ ಹಾಸ್ಯ ಎಲ್ಲಿಯೂ





ವಾಚ್ಯವಾಗುವುದಿಲ್ಲ. "ದೆವ್ವದ ಹಾಗೆ ಸುಮ್ಮನೆ ಕೂತಿದೀರಲ್ರಿ ಮೊದಲು ಡಾಕ್ಟ್ರಗೆ ಹೋಗಿ ತೋರಿಸಿಕೊಂಬನ್ನಿ" ಎಂದು ಗಂಡನಿಗೆ ಬೈದಂತೆ ಮಾತಾಡುವ ಹೆಂಡತಿಯ ಆಳದ ಕಾಳಜಿ ತಟ್ಟದೆ ಇರುವುದಿಲ್ಲ. (ನನಗೆ ಏನಾಗಿದೆ ಡಾಕ್ಟ್ರೆ?)

ಹಾಸ್ಯ ಲೇಖಕರಾದ ಎಚ್.ಎಲ್. ಕೇಶವಮೂರ್ತಿಯವರದ್ದು ಹಾಸ್ಯದ ಹೊದಿಕೆಯಲ್ಲಿ ಸೂಸಿಬರುವ ಅನುಕಂಪ. ಹಳ್ಳಿಯ ಹೆಂಗಳೆಯರ, ಮಧ್ಯಮ ವರ್ಗದ ನಿರುಪದ್ರವಿ ಗಂಡಂದಿರ ಕುರಿತೆಲ್ಲ ಈ ಅನುಕಂಪ ಅಲ್ಲಲ್ಲಿ ಮೂಡಿಬಂದಿದೆ.

"ಗಂಡನ ಸಾರಾಯಿ ಸಹವಾಸ ಬಿಡಿಸಲು ಹೆಂಡತಿ ಅತ್ತಳು, ರಂಪ ಮಾಡಿದಳು, ಉಪವಾಸವೂ ಕುಂತಳು."

"ಉಪವಾಸ ಅವಳಿಗೆ ಹೊಸದಲ್ಲ, ಊಟ ಇದ್ದರೆ ತಾನೆ ಉಪವಾಸದ ಪ್ರಶ್ನೆ?" ಮುಸಿ ಮುಸಿ ನಗಾಡಿದ ಅವನು (ನಮ್ಗೂ ಅವಕಾಸ ಕೊಡ್ರಿ) ಸ್ತ್ರೀಯರ ಪರವಾಗಿರುವ ಕಳಕಳಿ ಘೋಷಣೆಗಳ ರೂಪದಲ್ಲಿ ಬಂದರೆ ಎಷ್ಟು ಹಾಸ್ಯಾಸ್ಪದವಾಗುತ್ತದೆಯೋ ಗಟ್ಟಿ ಪಾತ್ರಗಳ ಪ್ರತಿಭಟನೆಯ ಚಿತ್ರಣದ ಮೂಲಕ ಬಂದರೆ ಅಷ್ಟೇ ಆಪ್ಯಾಯಮಾನವಾಗುತ್ತವೆ. ಉದಾಹರಣೆಗೆ ಚೇರ್ಮನ್ನರು ಜಾಡಮಾಲಿ ತಂತ್ರದಲ್ಲಿ ಬರುವ ಅಧ್ಯಕ್ಷೆ ಮೀಸಲಾತಿ ಆಧಾರದ ಮೇಲೆ ಬಂದವಳಾದರೂ ಸ್ವಲ್ಪ ದಿನಕ್ಕೆಲ್ಲ ಗಟ್ಟಿಗಿತ್ತಿಯಾಗಿಬಿಡುತ್ತಾಳೆ.

"ಕಳಪೆ ಕಾಮಗಾರಿಗಳ ಬಿಲ್ ಪಾಸು ಮಾಡುವು... ದಿಲ್ಲವೆಂದು" 'ಚೇರ್ಮನ್ ಬಿಲ್ನೇ ಇಡಿದು ಮಡಗವ್ಳಂತೆ' ಎಂಬ ಘನತೆ ಸಂಪಾದಿಸುತ್ತಾಳೆ. ಸೆಕ್ರೆಟರಿ ಹತ್ರ... ಅದೆಂಗಾಯ್ತು ಇದೆಂಗಾಯ್ತು ಅಂತೆಲ್ಲ ಕೊಶ್ಚನ್ ಮಾಡ್ತ... ಕುಂತ್ಕತ್ತದೆ... ಇವ್ನು ಕೇಳಿಬಿಟ್ನು ಅಂತ ಎಲ್ಲಾನೂ ತೋರಿಸಿ ಸರ್ಕಾರಕ್ಕೆ ದ್ರೋಹ ಬಗೆಯಕಾಗ್ತದ? ಎಂಬುದು ಸೆಕ್ರೆಟರಿ ವಾದ. ಅದ್ಸರಿ ಅನ್ನು... ಗೋರ್ಮೆಂಟ್ ಯವಾರ ಅಂದ್ಮೇಲೆ ತೋರಿಸೋವು ಇರ್ತವೆ, ತೋರಿಸ... ಬಾರ್ದವು (ಲೆಕ್ಕ) ಇರ್ತಾವೆ. ಅವೆಲ್ಲ ಕೇಳಕೆ ಇವಳ್ಯಾರಂತೆ ಎಂದು ಚೇರ್ಮನ್ನರ ವಾದ.

ಮಾಯಾಗುದರಿ: ಎನ್ನೋಬಲ ಕಾಂಡ


-ಬಿ. ಪೀರ್‌ಬಾಷ

ಹಿಂಗ sss
ಇತ್ತ
ಆ ಮಾಯಾಗುದರಿ
ಈ ಲೋಕದ
ಶತಮಾನಗಳ ಮೈ ಕಾವಿನಿಂದ
ಕಾಣದ, ತನ್ನಾಕಾರ ಪಡದು
ತನ ಮುಂಗಾಲಿನ್ಯಾಗ ತಕ್ಕಡಿ ಹಿಡಿದು
ಅದರೊಂದು ಪರಡಿಯಾಗ
ಇಂಡಿಯಾ ದೇಶದ ಪಾರ್ಲಿಮೆಂಟನ್ನೂ
ಇನ್ನೊಂದ್ರಾಗ ಕವಡಿ ಡಾಲರನ್ನೂ ಇಟ್ಟು
ತೂಗುತ್ತಿರಲು
ಈ ಇಂಡಿಯಾದ ತುಕಡಾ
ಕನ್ನಾಡ ಸೀಮೆಯ
ಕಬ್ಬಿಣದ ಗುಡ್ಡೆಲ್ಲ
ಮಾಯಾಗುದರಿಯ ಮುಂಗಾಲ
ಒದೆತಕ್ಕ ಧೂಳು ಧೂಳಾಗಿ
ಆ ಧೂಳಿನೊಂದೊಂದು ಕಣ ಕಣವೂ
ಕೋಟಿ ನೋಟಾಗಿ,
ಆ ನೋಟಿಗೆ ಜೀವ ಬಂದು
ಆ ಜೀವ ಪ್ರಜಾ ಎಂಬ ಪರ್ದೇಸಿಯ
ತಾಕತ್ತು
ಮತಪೆಟ್ಟಿಗೆ ಎಂಬ ಗಲ್ಲಾಪೆಟ್ಟಿಗೆಯನ್ನು
ತಪ್ನರಮನಿ ಮಾಡ್ಕಂಡು, ಹೊತ್ತೊತ್ತಿಗೆ
ಹೊರಬಂದು
ಅಸೆಂಬ್ಲಿ ಅನ್ನೋ ದರಬಾರ್ ಹಾಲನ್ನ
ಗೊಂಬೀ ಅಂಗಡಿ ಮಾಡಿ,
ಪ್ರತಿನಿಧಿ ಅನ್ನೋರನ್ನ
ಸೆಗಣಿ ಗೊಂಬೀ ಮಾಡಿ,
ಮಹಾಮಂತ್ರಿ, ಮರಿಮಂತ್ರಿಗಳನ್ನು
ಚಾವಿಗೊಂಬಿ ಮಾಡಿ
ಇಂತೀಗೊಂಬಿಗಳನ್ನು
ಮೂರುಕಾಸಿಗೊಂದರಂಗ
ಚೌಕಾಸಿ ನಡೆಸುತ್ತಿರಲು....;

ಅಲಲಲಾ... ಈ ಪರಿ
ಗದ್ದಗಿ ಅನ್ನೋ ಗದ್ದಗೀನಾ ಗಾಳಿಪಟದಂಗ
ಅಂತರಿಕ್ಷದಾಗ ಲಾಗ ಹೊಡೀತೈತಂದ್ರ
ಮಾಯಾಗುದರಿಯ ಕುಂಡಿ
ಮ್ಯಾಗಿನದೊಂದು ಕೂದ್ಲಾ
ಯಾರಾ ತಾಯತಾ ಮಾಡಕೊಂಡು
ತೋರ್ ಬೆರಳಿನ್ಯಾಗ ತೊಟಗೊಂಡಿರ್ಬೇಕು
ಅನ್ನೋ ಅನುಮಾನ, ಕನ್ನಾಡ ಕವಿಯ
ಆತ್ಮಕ ಅನಿಸಿ
ಆ ಅತ್ಮಕ ಕಣ್ಣು ಕಿವಿ ಕೈಕಾಲು ಮೂಡಿ
ಆ ಕಣ್ಣ ಬೆಳಕಿನ್ಯಾಗ ಕಂಡ ಸೋಜಿಗ
ಏನಪಾ... ಅಂದ್ರ

ಬಳ್ಳಾರಿ ಪಾರುಪತ್ಯದ ಉಸಾಬರಿ ಹಿಡಕೊಂಡ
ಕರುಣಾ-ಜನಾರ್ದನಾರೆಂಬೋ ಅಣತಮ್ಮಂದ್ರು
ಎನೋಬಲ ಕುಲಮೂಲದ ಆಂಧ್ರ
ಸೀಮ್ಯಾಗ
ತಮ್ಮ ಕಾಲು ನೆಟ್ಟು
ಕನ್ನಾಡ ಆಳ್ವಿಕೆ ತಮ್ಮ ಬೆರಳಿನ್ಯಾಗಿಟ್ಕಂಡು
ಯಡ್ಡೀ ಎಂಬ ಸೂತ್ರಾನ ಕಟ್ಟಿ
ಸಿಂಹಾಸನದ ಪಟ ಹಾರಿಸುತ್ತಿದ್ದ
ಒಳಮರ್ಮ ಏನಿರಬಹುದೆಂದು......

ಪೌಣೆಚ್ಚೇ ಕೋಟಿ ಕನ್ನಡಿಗರ
ಒಳಗಣ್ಣಾಗಿ ಹುಡುಕಿದರೆ
ಮರ್ಮದೊಳಗೊಂದು ಮರ್ಮ
ಅದೆಂತಾ ಸೂಕ್ಷ್ಮಾ ಅಂತೀರಿ
ಪೆಂಟಗಾನ್‌ನ ರಿಮೋಟ್ ಕಂಟ್ರೋಲ್‌ನ
''ಮಾಯಾಗುದರಿ''
ಚೀನಾದೇಸದ ಗಡಿ ಮುರದು
ಒಳನುಗ್ಗೋ ಹೊತ್ತು
ಜರಮನಿ ಫಾಸಿಸಪ್ಪನ ಬೀಜ ಗಾಳಿಗುಂಟ
ಬಂದು
ಸಿಂಧೂರವ್ವನ ಭೂಗರ್ಭವ ಸೇರಿ
ದಿನಾ ತುಂಬೋದ್ರೊಳಗ ವಿಕಾರದ
ಸಹಸ್ರ ಕೂಸುಗಳಾಗಿ
ಇರಬಾರದ ಜಾಗದಾಗ ಕಾಣಬಾರದ ಅಂಗ
ಮೂಡಿ
ಇಂತೀ ಕೂಸುಗಳಿಗೆರಡೆರಡು ಮಾರಿ
ಮಾರಿಗೆರಡೆರಡು ಬಾಯಿ
ಬಾಯಿಗೆರಡೆರಡು ನಾಲಗಿ
ಕೈಯಾಗ ಆಧ್ಯಾತ್ಮ ಕಾಲಾಗ ಪದಾರ್ಥ
ಹಿಂಗ... ಓಟಗಾರಿಲೆ ಓಡಾದಾರ‍್ಯಾಗ
ಉತ್ತರದಿಂದ ದಕ್ಷಿಣಕ್ಕ
ಪೂಜೆ ನೆಪದಾಗ
ತಿಜೋರಿ ಇದ್ದದ್ದ ತನ್ನ ತವರಮನೀ ಅಂತ
ಹೊಕ್ಕಂಡ
ಕಂಡವರ ಮಗಳು, ಮುತ್ತೈದಿ ವೇಷ ತೊಟ್ಟು
ಮನಿಸೊಸಿ ಸೆರಗ ಹಿಡದು
ರಂಪಾಟ, ರಾಜಕಾರಣ ಮಾಡಿ.
ಈ ಕಾರಣದ ಪರಿಣಾಮವಾಗಿ
ಎನೋಬಲವೆಂಬ ತಿಜೋರಿಗೆ ಜೀವ ಮೂಡಿ
ದಮ್ಮಡಿಗೆ ಇಮ್ಮಡಿ, ಅಸುರಶಕ್ತೀ ಧರಿಸಿ
ಈ ಎನೋಬಲಾಸುರ ರಾಜಕಾರಣದ
ರಣಮೋಡಿ ವಿದ್ಯಾಪಾರಂಗತನಾಗಿ
ಪರದೀಹಿಂದಾ ನಿಂತು, ರಂಗದ ಮ್ಯಾಲಿನ
ಧರ್ಮ, ಅಧರ್ಮರನ್ನ ಕೆಡವಿ
ಸಿದ್ಧ, ಪ್ರಸಿದ್ಧರನ್ನು ಗಾಳ್ಯಾಗ ತೂರಿ
ತನ ಹರದಾಟದ ಹೆಜ್ಜೇಗೆ ಪ್ರಕಾಶವಾಗಿದ್ದ
ಬುದ್ಧೀದೀಪಾನ ಕತ್ತಲದಾಗ ಹುಗದು
ಗೌಡಕೀಗಡದೀ ಗಮ್ಮತ್ತನ್ನ ಗಟಾರಕ್
ಒಗದು
ಕೌಮಾರ್ಯದಾ ಕೈಯಾಗ ರಾಜ್ಯದಾಳ್ವಿಕೆ
ಕೊಟ್ಟು
ಕೈಕಾಲು ಶಿರ-ಸೊಂಟಕ್ಕೆಲ್ಲ ಸೂತ್ರ ಪೋಣಿಸಿ
ಅದ್ವಾನದ ಗರಡೀಮನಿ ಪೈಲ್ವಾನ ನಾನು
ಕರುನಾಡನ್ನ ಕಡಗ ಮಾಡ್ಕಂಡು
ಮಣಿಕಟ್ಟಿಗೆ ತೊಟ್ಕಂಡು
ದಿಲ್ಲೀಕಣದಾಗ ಪರಸೀಪ್ಯೆಕಿ ಹಿಡೀತೀನಿ



ಹಾಸ್ಯ ವಿಡಂಬನೆಗಳ ಮೂಲಕ ಸಮಾಜದ ಸ್ವಾಸ್ಥ್ಯಕ್ಕಾಗಿ ಹಾರೈಸುವ ಲೇಖಕರ ಶೈಲಿ ಅನನ್ಯವಾಗಿದೆ. ಹಾಸ್ಯದ ಶಕ್ತಿಯನ್ನೂ ಅದು ಅನಾವರಣ ಮಾಡುತ್ತ ಹೋಗುತ್ತದೆ.

'ಗೌರವಾನ್ವಿತ ದಗಾಕೋರರು' ವಿಶಿಷ್ಟ ಹಾಸ್ಯ ಶೈಲಿಯ ಕಿರುಹರಟೆಗಳೆನ್ನಬಹುದಾದ ಲೇಖನಗಳ ಗುಚ್ಛ. ಚುರುಕಾದ ಭಾಷೆ, ಶೈಲಿಗಳೆರಡೂ ನಿರಾಯಾಸವಾಗಿವೆ. ಈ ಕೃತಿಯ ಮೂಲಕ ಎಚ್.ಎಲ್. ಕೇಶವಮೂರ್ತಿ ಕನ್ನಡದ ವಿಡಂಬನಾ ಸಾಹಿತ್ಯಕ್ಕೆ ಒಂದು ಅಪೂರ್ವ ಕೊಡುಗೆ ನೀಡಿದ್ದಾರೆನ್ನಬಹುದು.

ಮೂಢನಂಬಿಕೆಯ ಅತಿರೇಕದಿಂದ ಬಳಲುವ ವರ್ಗ ಒಂದು ಕಡೆಗಾದರೆ, ಆ ಮೂಢ ನಂಬಿಕೆಯನ್ನೇ ಆಧರಿಸಿ ತಮ್ಮ ಕಿಸೆ ತುಂಬಿಸಿಕೊಳ್ಳುವ ವರ್ಗ ಇನ್ನೊಂದೆಡೆಗೆ. ರಾಜಕೀಯ ಸರ್ಕಸ್ಸುಗಳ ಮೂಲಕ ಅಧಿಕಾರಕ್ಕಂಟಿ ಕೂತ ಧುರೀಣರು ಒಂದು ಕಡೆಗಾದರೆ ಅಸಹ್ಯ ಹುಟ್ಟಿಸುವ ಅವರ ಚೇಲಾಗಳು ಇನ್ನೊಂದು ಕಡೆ. ಪ್ರಚಾರಪ್ರಿಯ ನಟ-ನಟಿಯರು, ಅವರ ನಾಯಿಗಳು, ಕ್ರಿಕೆಟ್ ತಾರೆಯರ ಆದಾಯ ತೆರಿಗೆ ವಿನಾಯ್ತಿ ಪ್ರಕರಣಗಳು, ದೇವರ ರಕ್ಷಣೆಯ ಹೆಸರಿನಲ್ಲಿ ದೆವ್ವಗಳಂತಾಡುವ ಭಕ್ತರು, ಧರ್ಮಗುರುಗಳು ಮತ್ತವರ ಶಿಷ್ಯಾಧಮರು..... ಎಷ್ಟು ವೈವಿಧ್ಯಮಯ ದಗಾಕೋರರ ಪರಿಚಯವಾಗುತ್ತದೆ ಈ ಕೃತಿಯಲ್ಲಿ! ಒಬ್ಬರಿಗಿಂತ ಒಬ್ಬರು ಪ್ರಚಂಡ ದಗಾಕೋರರೇ.

ವರ್ತಮಾನದಲ್ಲಿ ಘಟಿಸುವ, ವರದಿಯಾಗುವ ಅಂದಂದಿನ ಘಟನೆಗಳನ್ನೇ ಎತ್ತಿಕೊಂಡು ಬರೆದ ಈ ಲಘುವಿಡಂಬನೆಗಳು ಯಶಸ್ವಿ **political satire** ಗಳ ಸೂಕ್ಷ್ಮಗ್ರಾಹಿತನವನ್ನು ಉಳಿಸಿಕೊಂಡೂ ಎಲ್ಲೂ ಪೀನಿಕವಾಗುವುದಿಲ್ಲ. **2000-2004** ರ ನಡುವಿನ ಅವಧಿಯಲ್ಲಿದ್ದ ಕೇಂದ್ರ, ರಾಜ್ಯ ಸರ್ಕಾರಗಳ ಪ್ರಧಾನ ಮುಖ್ಯಮಂತ್ರಿಗಳೆಲ್ಲ ಇಲ್ಲಿ ನೇರವಾಗಿ ಮೈದಳೆದಿದ್ದಾರೆ. ತಮ್ಮ ಆಷಾಡಭೂತಿತನ ಮೆರೆದಿದ್ದಾರೆ, ವೀರಪ್ಪನ್ ಹೆಸರಿನಲ್ಲಿ ನಡೆದ ನಾಟಕ ಪ್ರಹಸನಗಳು, ದಡ್ಡತನಗಳು, ಬಲು ಸೊಗಸಾಗಿ ವಿಡಂಬಿಸಲ್ಪಟ್ಟಿವೆ.

ಇಲ್ಲಿ ಪ್ರಸ್ತಾಪಿಸಲಾದ ಜೀವಂತ ಪಾತ್ರಗಳಾದ ಠಾಕ್ರೆ, ಎಸ್.ಎಂ. ಕೃಷ್ಣ ಡಿಕೆಶಿ, ವಾಜಪೇಯಿ...ಇವರೆಲ್ಲ ನಮ್ಮ ಪ್ರಜಾಪ್ರಭುತ್ವವೆಂಬ ನಾಟಕದ ಅಣಕು ಪಾತ್ರಧಾರಿಗಳಾಗಿ ಮೂಡಿಬಂದಿದ್ದಾರೆ. ಇದು ವೈಯಕ್ತಿಕ ತೇಜೋವಧೆಗಾಗಿ ಅಲ್ಲ; ನಮ್ಮ ವ್ಯವಸ್ಥೆಯ ಕಟುದರ್ಶನ ಮಾಡಿಸುವ ಪ್ರಯತ್ನ ಎಂಬುದು ವೇದ್ಯವಾದರೆ ಈ ಪಾತ್ರಗಳ ತುಟಿಯಂಚಿನಲ್ಲೂ ನಗು ಅರಳೀತು.

-ಭುವನೇಶ್ವರಿ ಹೆಗಡೆ

ಅಂತಾ ಕ್ಯಾಕೀ ಹೊಡಿಯಾ ಹೊತ್ತೀಗೆ
ಇತ್ತ ರಾಜರಾಜೇಶ್ವರಿಯ ಸುಪುತ್ರರೆಲ್ಲ
ಪ್ರಜಾಪ್ರಭುತ್ವ, ಸಂವಿಧಾನ ಅನ್ನೋ
ರೋಮಾಂಚನದಾಗ
ಕಿಸಿಕಿಸೀ ನಕ್ಕೋತ
ಅರ್ಧ ಚಾ ಹೊತ್ಯಾಗ ಲೋಕದ
ಹರಟೀ ಹೊಡ್ದು
ಹೆಂಡ್ತೀ ಮಕ್ಕಳ ಜೊತೀ
ಸಂಪಾಗಿ ಸೀರಿಯಲ್ಲು ನೋಡಿ
ಒಂದಿಷ್ಟು ಡಿಫರೆಂಟು ಮಂದೀ
ಸಾಹಿತ್ಯ-ಸಂಸ್ಕೃತಿ ಅಂತಾ ಮುತ್ತುದಿರಿಸಿ
ಹೊತ್ತು ಕಳೆಯೋ ಹೊತ್ಯಾಗ
ಎದಿಯನ್ನೋ ಪಾತಾಳಲೋಕದಾಗ
ಗೋಣ ಮುರ್‍ಕಂಡು ಬಿದ್ದಿದ್ದ ಅಂತಸ್ಸಾಕ್ಷಿ
ಮೈ ಮರತವರ ಮುಖಕ್ಕೆ ಕ್ಯಾಕರಿಸಿ ಉಗುಳಿ

ಈ ಪರಿ ಪ್ರಜಾ ಅಂಬಾನು
ಕರಿ ಬೇವಿಗಿಂತ ಕಡಿಯಾಗಿ
ಸರಕಾರ ಅಂಬೋದು ಚಿಲ್ಲರೆ
ಚೌಕಸಿಗೆ ಬಿಕರಿಯಾಗಿ
ಈ ಲೋಕದ ಪ್ರಭುತ್ವ ಅನ್ನಾದು
ಪೆಟ್ರೋಲು, ಕಂಪ್ಯೂಟರು, ಬಂದೂಕು
ಮಾರೋ ಧಣಿಗಳ ಬೆರಳಸನ್ಯಾಗ
ವೇಷ ಬದಲಾಯಿಸ್ತದಾವಲ್ಲ
ನೀಕು ಉಸಿರಾಡೋ ಹೆಣವಾಗಿರ ಬದ್ಲು
"ಕೈಯಾಗ ತಗಂಡು" ಬೆನ್ನಹತ್ತು.
ಅಂದಿದ್ಯಾ, ಒಂದ್ ಕವಿತಾ ಆದಂಗಾತು
ಎಂಬಲ್ಲಿಗೆ,
ಹರಹರಾ ಶ್ರೀಶೀರ ವಿರಚಿತ
'ಮಾಯಾಗುದರಿ'ಯೆಂಬ ಮಹಾಕಾವ್ಯದ
ಒಪ್ಪೊಬಲಕಾಂಡ
ಪರಿಸಮಾಪ್ತಿಯಾದುದು.

ತಾನಂ ತಾನಂ



ತೇಲಿ ಬಂದ ದಾರಿ ④ ಕವಿತಾ ಲಂಕೇಶ್

ನಮ್ಮ ಚಿತ್ರದ ಒಂದು ಹಾಡಿಗಾಗಿ ಬಾಲ ಗೋಪಾಲನ ಹೆಜ್ಜೆ ಗುರುತುಗಳ ರಂಗೋಲಿ ಹಾಕಬೇಕಿತ್ತು, ನಮ್ಮ ಸೆಟ್‌ಬಾಯ್ ಸೀನು ಬಲಗೈ ಮುಷ್ಠಿಯಿಂದ ಒತ್ತಿ ಪುಟ್ಟಪಾದಗಳನ್ನು ಮೂಡಿಸಲು ಯತ್ನಿಸಿದ್ದರು. ಅವು ಪುಟ್ಟ ಮಕ್ಕಳ ಪಾದಗಳಂತೆ ಕಾಣುತ್ತಲೇ ಇರಲಿಲ್ಲ. ನಂತರ ನಟ ಭಾರತಿ ಪ್ರಯತ್ನಿಸಿದರು. ತುಂಬಾ ಹತ್ತಿರ ಹತ್ತಿರಕ್ಕೆ ಪಾದಗಳ ಗುರುತುಗಳನ್ನು ಮೂಡಿಸಿದ್ದರು ಅವರು. ನಾನೂ ಒಂದು ಕೈ ನೋಡೇ ಬಿಡೋಣ ಎಂದು ಕುಳಿತೆ. ಚಿಕ್ಕವಳಿದ್ದಾಗಲೂ ನನ್ನ ಡ್ರಾಯಿಂಗ್ ಅಷ್ಟಕಷ್ಟೇ. ಡ್ರಾಯಿಂಗ್‌ನಲ್ಲೆಲ್ಲಾ ನಮ್ಮ ಗೌರಿ **expert** ಇದ್ಲು, ನನ್ನ ಡ್ರಾಯಿಂಗ್ ಅಂದ್ರೆ ಎರಡು ಗುಡ್ಡಗಳ ಮಧ್ಯೆ ಒಂದು ಸೂರ್ಯನನ್ನು ತೆಗೆಯುವುದಕ್ಕಷ್ಟೇ ಸೀಮಿತ!

ಆದರೆ ಅವತ್ತು ನನ್ನ ಕೈಯಿಂದ ಮೂಡಿದ ಬಾಲಗೋಪಾಲನ ಹೆಜ್ಜೆಯ ಗುರುತುಗಳನ್ನು ನೋಡಿ ಡ್ಯಾನ್ಸ್ ಡೈರೆಕ್ಟರ್ ಮದನ್-ಹರಿಣಿಗೆ ಆಶ್ಚರ್ಯವೋ ಆಶ್ಚರ್ಯ. ಅಷ್ಟು ಪರ್‌ಫೆಕ್ಟ್ ಆಗಿ ಚಿತ್ತಾರ ಚೆಲ್ಲಿದ್ದಳು ಈ 'ಡ್ರಾಯಿಂಗ್ ಟ್ಯಾಲೆಂಟು' ಕವಿತಾ! ಓಡೋಡಿ ಬಂದ ರಮ್ಯಾ ರೇಷ್ಮೆ ಲಂಗದಲ್ಲೇ ನೆಲದ ಮೇಲೆ ಕುಳಿತು ನನ್ನ ಕಲೆಗೆ **final touch** ಕೊಟ್ಟಳು. ವೆಸ್ಟ್-ಎಂಡ್‌ನಂತಹ ಫೈವ್‌ಸ್ಟಾರ್ ಹೋಟೆಲಿನಲ್ಲೇ ಇರುವ ಜಂಭದ ಹುಡುಗಿ ರಮ್ಯಾ ನೆಲದ ಮೇಲೆ ಕುಳಿತು ಎಲ್ಲರೊಂದಿಗೆ **enjoy** ಮಾಡಿದ್ಲು. ಒಳ್ಳೆ ಟೀಮ್ ಇದ್ದಾಗ ಹೇಗೆ ಬದಲಾಗ್ತಾರೆ ನೋಡಿ. ಚಿತ್ರೀ ಕರಣದುದ್ದಕ್ಕೂ ಹೀಗೇ ಸಾಗಿತ್ತು ನಮ್ಮ ಟೀಮ್ ವರ್ಕ್.

ಚಿತ್ತ ಚಿತ್ತಾರದ ರಂಗೋಲಿ.... ಚಿತ್ತ ಕದಿಯುವ ಡ್ಯಾನ್ಸ್ ಪೋರಿ...

'ದೇವೀರಿ' ಚಿತ್ರೀಕರಣದಲ್ಲೊಂದು ಮಜಾ ನಡೆಯಿತು. ನಂದಿತಾ ದಾಸ್ ರೊಟ್ಟಿ ತಟ್ಟಬೇಕಿದ್ದ ದೃಶ್ಯ ಚಿತ್ರೀಕರಿಸುತ್ತಿದ್ದೆ. (ಲಟ್ಟಿಸಿದರೆ ಎಫೆಕ್ಟ್ ಇರಲ್ಲ ಅಂತಾ ತಟ್ಟಲೇಬೇಕು ಅಂತಾ ಹೇಳಿದ್ದೆ). ಖ್ಯಾತ ಆರ್ಟ್ ಡೈರೆಕ್ಟರ್ ಶಶಿಧರ ಅಡಪ ಅವರು ತಣ್ಣೀರಲ್ಲಿ ಅಕ್ಕಿ ಹಿಟ್ಟು ಕಲೆಸಿ ನಂದಿತಾ ದಾಸ್ ಕೈಗಿತ್ತರು. ಅದ್ಹೇಗೆ ಬರುತ್ತೆ ರೊಟ್ಟಿ? ಅಡಪರನ್ನು ನೋಡಿ ನಕ್ಕ ನಾನು ನೀರನ್ನು ಕುದಿಸಿ ಅದರಲ್ಲಿ ಹಿಟ್ಟು ಕಲೆಸಿ, ನಾದಿ ರೆಡಿ ಮಾಡಿಕೊಟ್ಟೆ. ಪಟ್ ಪಟ್ ಅಂತಾ ತಟ್ಟಿದ ನಂದಿತಾ ದಾಸ್ ಸಲೀಸಾಗಿ ರೊಟ್ಟಿ ಮಾಡಿದ್ದಳು. ಅಡಪರು ಖುಷಿಯಾಗಿ "ಅಯ್ಯೋ, ನನಗೆ ಹೊಳೆಯಲೇ ಇಲ್ಲವೆ? ಆರ್ಟ್ ಡೈರೆಕ್ಟರ್ ಆಗಿ ನಿಮ್ಮ ಕಡೆಯಿಂದ ಅಕ್ಕಿ ರೊಟ್ಟಿ ಮಾಡಿಸಿದೆನಲ್ಲ, ಅದೊಂದು ಬೇಜಾರಿದೆ" ಎಂದರು.

ಅರೆ, ಲಾಸ್ಟ್ ವೀಕು ಐಟಂಸಾಂಗ್ ಕುರಿತು ಒಂದು ಮಜಾ ಮ್ಯಾಟರ್ ಇದೆ ಎಂದಿದ್ದೆನಲ್ಲ? **Actually** ಅದು ಐಟಂ ಸಾಂಗೇ ಅಲ್ಲ!! ಒಂದು ಝುಲಕ್ ಝುಲಕ್ ಸಾಂಗ್ ಅಷ್ಟೇ! ಇತರ ಸಿನಿಮಾಗಳ **vulgar** ಹಾಡುಗಳಂತೆ ಈ ಸಾಂಗ್ ಇಲ್ಲ ಮತ್ತು ಎಂದೂ ಅಂತಹ ಚೀಪ್ ಗಿಮಿಕ್‌ಗಳು ನನ್ನ ಚಿತ್ರದಲ್ಲಿ ಇರುವುದಿಲ್ಲ. ನಿರ್ದೇಶನ ಎಂಬ ಜವಾಬ್ದಾರಿ, ಕ್ರಿಯೇಟಿವ್ ಕೆಲಸ ಮಾಡುವಾಗ, ಅದೂ ನಾನೊಬ್ಬ ಹೆಣ್ಣಾಗಿ ಸಭ್ಯ ದೃಶ್ಯಗಳನ್ನು ಮನೆಮಂದಿಗೆಲ್ಲ ನೀಡುವುದು ನನ್ನ ಜವಾಬ್ದಾರಿ ಅಲ್ಲವೆ? ಅಂದಹಾಗೆ ಈ ಹಾಡಿಗೂ, ಅದರಲ್ಲಿನ ಹುಡುಗಿಗೂ ಕತೆಯಲ್ಲಿ ಪ್ರಾಮುಖ್ಯತೆ ಇದೆ.



ಬಾಲಗೋಪಾಲನ ಹೆಜ್ಜೆ ಗುರುತನ್ನು ಬಿಡಿಸುತ್ತಿರುವ ರಮ್ಯ, ಕವಿತಾ ಮತ್ತು ಹರಿಣಿ

ಈ ಚಿತ್ರದ ಹಲವು ಹಾಡುಗಳಿಗೆ ನೃತ್ಯ ನಿರ್ದೇಶನ ಮಾಡಿದ್ದು ಬಾಲಿವುಡ್ಡಿನಲ್ಲಿ ನೃತ್ಯ ನಿರ್ದೇಶನಕ್ಕೆ ಹೆಸರಾಗಿರುವ ರೇಖಾ ಪ್ರಕಾಶ್. ಈ ಒಂದು ಸಾಂಗ್‌ಗಾಗಿ ನೂರಾರು ಹುಡುಗಿಯರ ಸ್ಕ್ರೀನ್ ಟೆಸ್ಟ್ ಆಯ್ತೇನೊ? ಕೊನೆಗೂ ಸುಭಾಷ್ ಘಾಯ್‌ನ '36 ಚೈನಾ ಟೌನ್'ನಲ್ಲಿ ನಟಿಸಿದ ಸಂಭಾವನಾ ಎಂಬ ಮುಂಬೈ ಹುಡುಗಿ ಇರಲಿ ಎಂದುಕೊಂಡೆವು. ನಾನು ಮುಂಬೈಗೆ ಹೋದಾಗ ಸಂಭಾವನಾಗೆ ಭೇಟಿ ಆಗಲು ಹೇಳಿದೆ. ಈ ಸಂಭಾವನಾಳ ಸಂಭಾವನೆಯೇನೂ ದೊಡ್ಡದಿರಲಿಲ್ಲ. ನಾನಿನ್ನೂ ಆಕೆಯನ್ನು ನೋಡಿರದಿದ್ದರೂ ರೇಖಾ ಪ್ರಕಾಶ್ ಮಾತು ಕೇಳಿ ಒಪ್ಪಿಕೊಂಡಿದ್ದೆ. ಬಂದಳು ನೋಡಿ **some**-ಭಾವನಾ! ಕೂದಲಿಗೆಲ್ಲ ಚಿನ್ನದ ಬಣ್ಣ ಡೈ ಮಾಡಿಕೊಂಡು, ತೊಡೆ ಮರೆಗೆಂದು ಸ್ಕರ್ಟ್, ಸ್ಕರ್ಟ್‌ನಿಂದ ಮಾರುದೂರದಲ್ಲಿರುವ ಟಾಪ್! ನನಗೆ ಇಂತಹ 'ಐಟಂ' ಹುಡುಗಿ ಬೇಕಿರಲಿಲ್ಲ... ಹಳ್ಳಿಯ ಚಾಲಾಕಿ ಬೆಡಗಿಯಂತಿರುವ ಹುಡುಗಿಗಾಗಿ ಮತ್ತೆ ಶೋಧಿಸಿದಾಗ ಸಿಕ್ಕವಳು ಸೀಮಾ ಎಂಬ ಸುಂದರಿ!

ತಮಿಳಿನ 'ಕೊಕ್ಕಿ' ಚಿತ್ರದಲ್ಲಿನ ಈಕೆಯ ಐಟಂ ಸಾಂಗ್ (ಹಾಗೆ ಕರೆದರೇನೆ ಅರ್ಥವಾಗೋದು!) ಸೂಪರ್ ಹಿಟ್ ಆಗಿದೆ. ಕನ್ನಡದ 'ಗುನ್ನ' ಚಿತ್ರಕ್ಕೆ ಈಕೆ ನಾಯಕಿ. ತಮಿಳಿನಲ್ಲಿ ಐದಾರು ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ. ನಮ್ಮ ನೃತ್ಯ ನಿರ್ದೇಶಕಿ ರೇಖಾಪ್ರಕಾಶ್ ಸೀಮಾಳನ್ನು ನೋಡಿದಾಕ್ಷಣವೇ "ಫಿಗರ್ ಎಲ್ಲ ಸಖತ್ತಾಗಿದೆ. ಆದರೆ ಮೂಗೊಂದೇ ಸ್ವಲ್ಪ ಪ್ರಾಬ್ಲಮ್ಮು" ಎಂದರು. ಫೋಟೋಜೆನಿಕ್ ಮೊಗದ ಈ ಸೀಮಾ ಸ್ಟೆಪ್ಸ್ ಹಾಕುವ ಪರಿಯೇ ಮೋಹಕ, ಮಾದಕ!

ನಾನು ನನಗಿಷ್ಟವಿಲ್ಲದ ಸ್ಟೆಪ್ಸ್‌ಗಳನ್ನು ಕ್ಯಾನ್ಸಲ್ ಮಾಡುತ್ತಾ, ಮತ್ತೆ ಹೊಸ ಬಗೆಯ ಸ್ಟೆಪ್ಸ್‌ಗಳಿಗೆ ಕೇಳುತ್ತಿದ್ದೆ. ಒಂದು ಸಾರಿ ಶೂಟಿಂಗ್ ಸ್ಪಾಟಿಗೆ ಪುಟ್ಟ ಇಶಾ ಬಂದಾಗ ಒಂದೈದು ನಿಮಿಷ ಡ್ಯಾನ್ಸ್ ಕಡೆ ಗಮನ ನೀಡಿರಲಿಲ್ಲ. ಬಂದು ನೋಡ್ತೀನಿ... ಅಬ್ಬಾ ಅದೆಂತಹ ಕೆಟ್ಟ ಸ್ಟೆಪ್ಸ್! "ರೇಖಾ, ಖಂಡಿತ ಈ ರೀತಿಯ **steps** ಬೇಡವೇ ಬೇಡ. ಮೊದ್ಲು ಅದನ್ನು ಚೇಂಜ್ ಮಾಡಿ" ಎಂದೆ. ಆ ಸ್ಟೆಪ್ಸ್ ಹೇಗಿತ್ತೆಂದರೆ ಸೊಂಟ ಕುಲುಕಿಸುತ್ತಾ ಏಣಿಯಿಂದ ಸೀಮಾ ಇಳಿಯುತ್ತಿರುತ್ತಾಳೆ. ಕೆಳಗೆ ಏಣಿಯ ಪಕ್ಕ ಶ್ಯಾಮ್ ನಿಂತಿರುತ್ತಾನೆ. ಸೀಮಾಳ ಎರಡು ಕಾಲುಗಳನ್ನು ಶ್ಯಾಮ್ ಅಗಲಿಸುತ್ತಾ, ಆಕೆ ಅದನ್ನು ಜೋಡಿಸುತ್ತಿರುವ ಸ್ಟೆಪ್ಸ್ ಅದು!

"ಅಬ್ಬಾ ಕ್ಯಾಮೆರಾ ಕಣ್ಣಿಗೆ ಏನೇನು ಆಹಾರ" ಎಂದವಳೇ ಈ **steps** ಬದಲಾಯಿಸಲು ಹೇಳಿದೆ. ಈಗಿನ ಹುಡುಗಿಯರು ಹೇಗೆ ಹೇಳುತ್ತಿರೋ ಹಾಗೆ **bold** ಆಗಿ **expose** ಮಾಡ್ತಾರೆ. ಆದರೆ ಹಿಂದೆ ಹೀಗಿರಲಿಲ್ಲ. ಅಪ್ಪ 'ಅನುರೂಪ' ಚಿತ್ರ ಮಾಡುತ್ತಿದ್ದಾಗ, ಆರತಿ ಅನಂತ್‌ನಾಗ್‌ರನ್ನು ತಬ್ಬಿಕೊಳ್ಳುವ ದೃಶ್ಯ ಚಿತ್ರೀಕರಿಸುತ್ತಿದ್ದರು. ಆರತಿ "ಸರ್, ಹಾಗೇ ಕಣ್ಣಲ್ಲೇ **expression** ತೋರಿಸಿ ಪ್ರೇಮಭಾವ ಮೂಡಿಸಲೆ?" ಎಂದರು. ಅದಕ್ಕೆ ಅಪ್ಪ "ಎಲ್ಲಾ ಕಣ್ಣಿಂದಲೇ ಮಾಡುವುದಿದ್ದರೆ ಉಳಿದ ಅಂಗಗಳು ಯಾಕಿರುತ್ತಿದ್ದವು.... ಬಾ... ಬಾ... ತಬ್ಬಿಕೊ" ಎಂದು ನಕ್ಕಿದ್ದರಂತೆ! ಎಕ್ಸ್‌ಪೋಸ್ ಮಾಡಿಸಿ ಮೈ ಪ್ರದರ್ಶನ ಮಾಡೋದೇ ಸೆಕ್ಸಿ ಡ್ಯಾನ್ಸ್ ಅಲ್ಲ, ಸರಿಯಾದ ಹೆಜ್ಜೆಗಳು, ಮೋಹಕ ಭಾವ, ಕಣ್ಣಲ್ಲಿ ಮಿಂಚು ಇದ್ದರೆ ಮಾದಕತೆ ಹರಿದಿಯೇ ಹರಿಯುತ್ತೆ. ನನ್ನ 'ಪ್ರೀತಿ, ಪ್ರೇಮ, ಪ್ರಣಯ' ಚಿತ್ರದಲ್ಲಿ 'ಕಬ್ಬಿನ ಜಲ್ಲೆ' ಹಾಡಿಗೆ ನೃತ್ಯ ನಿರ್ದೇಶನ ಮಾಡಿದ್ದ ರೇಖಾಗೆ ನನ್ನ ಟೇಸ್ಟ್ ಗೊತ್ತಿದ್ದರಿಂದ ತಕ್ಷಣವೇ ಸ್ಟೆಪ್ಸ್‌ಗಳನ್ನು ಬದಲಾಯಿಸಿದರು.

ಆದರೆ ನೀವು ಖಂಡಿತ ಈ ಸಾಂಗ್ ಎಂಜಾಯ್ ಮಾಡ್ತಿರಿ. ಸೀಮಾಳ ಬಾಡಿ ಮೂವ್‌ಮೆಂಟ್ಸ್ ಅಷ್ಟು ಸೂಪರ್ಬ್ ಆಗಿವೆ! ಇನ್ನೊಂದು ಮಜ್ ಮಜಾ ಕೇಳಿ... ನಾನು ಮ್ಯಾಕ್ಸಿಮಮ್ ಅಂದ್ರೆ 3 ಟೇಕ್‌ಗಳಿಗೆ ಅವಕಾಶ ಕೊಡ್ತಿನಿ. ಶ್ಯಾಮ್ ಸೀಮಾಳ ದೇಹದ ಮೇಲಿನಿಂದ ಕೆಳಕ್ಕೆ ಎರಡೂ ಕೈಗಳಿಂದ ಸವರುತ್ತಾ ಬರುವ ದೃಶ್ಯ..... ಐದು ಟೇಕ್ ಆದರೂ **O.K.** ಆಗ್ಲಿಲ್ಲ... ಏನೀ ಶ್ಯಾಮ್ ಈ **step** ಎಂಜಾಯ್ ಮಾಡ್ತಿದ್ದಾನಾ ಎನಿಸ್ತು, "ಶ್ಯಾಮ್, ಇನ್ನೊಂದು ಟೇಕ್ ಅಷ್ಟೇ. ಇಲ್ಲಾಂದ್ರೆ ಈ ಸ್ಟೆಪ್‌ನ್ನೇ ಕ್ಯಾನ್ಸಲ್ ಮಾಡಿಬಿಡ್ತಿನಿ" ಎಂದು ನಕ್ಕೆ.



ತನ್ನ ಪಾಲಿನ ಚಿತ್ರೀಕರಣ ಮುಗಿಸಿ ಹೋದ ಸೀಮಾ ಮತ್ತೆ ಹದಿನೈದು ದಿನಕ್ಕೆ ನಮ್ಮೆದುರು ಹಾಜರ್- ಪರ್‌ಫೆಕ್ಟ್ ಡಾಲ್ ಆಗಿ! ರೇಖಾ ಪ್ರಕಾಶ್ ಹೇಳಿದ್ದಂತೆ ಮೂಗಿನ ಸರ್ಜರಿ ಮಾಡಿಸಿಕೊಂಡು **cute** ಆಗಿಬಿಟ್ಟಿದ್ದಳು. ಈಗ ನೋಡಿ, ರೇಖಾ ಪ್ರಕಾಶ್ ಮೂಲಕವೇ ಸೀಮಾಗೆ ಬಾಲಿವುಡ್ಡಿನಲ್ಲಿ ಐಟಂ ಸಾಂಗ್‌ಗೆ ಆಫರ್ ಸಿಗ್ತಿವೆ. ಸದ್ಯ ಸೀಮಾ ತಮಿಳಲ್ಲಿ ಬ್ಯುಸಿ.

ಶ್ಯಾಮ್‌ನ ಮೊದಲ ತಮಿಳು ಚಿತ್ರಕ್ಕೂ ರೇಖಾ ಪ್ರಕಾಶ್‌ರವರೇ ಡ್ಯಾನ್ಸ್ ಡೈರೆಕ್ಟರು. ಆಗ 18 ಟೇಕ್‌ಗಳಿಗೆ ಓ.ಕೆ. ಆಗುತ್ತಿದ್ದ ಶ್ಯಾಮ್, ಅಲ್ಪಾವಧಿಯಲ್ಲೇ ಇಷ್ಟು ಫಾಸ್ಟ್ ಆಗಿದ್ದನ್ನು ಮೆಚ್ಚಿದ ರೇಖಾ ಪ್ರಕಾಶ್ "ಶ್ಯಾಮ್‌ಗೆ ಒಳ್ಳೆ **future** ಇದೆ" ಎಂದರು.

ಲೋಕಲ್ ಆಗಿ ಲಭ್ಯವಿರುವ, ಆ ಭಾಗದಲ್ಲಿ ಫೇಮಸ್ ಇರುವ ವಸ್ತುಗಳನ್ನು ಚಿತ್ರಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂಬುದಕ್ಕೆ ಇಲ್ಲೊಂದು ಸ್ಯಾಂಪಲ್ ಇದೆ. ಬೋಟ್‌ಗೆ ಬಾವುಟ, ಸೀರೆ ಕಟ್ಟಿ ಸಿಂಗರಿಸಿದ್ದರು ಆರ್ಟ್ ಡೈರೆಕ್ಟರು. ಅದು ಮಂಡ್ಯದ ಹಳ್ಳಿ. ಕಬ್ಬು, ಬೆಲ್ಲಕ್ಕೆ ಪ್ರಸಿದ್ಧ. ನನಗಲ್ಲಿ ಈ ಬೆಲ್ಲ ತಯಾರಿಸುವ ದೊಡ್ಡ ತಪಾಲಿಯೊಂದು ಕಾಣಿಸಿತು. ಆಗಲೇ ಒಂದು ಐಡಿಯಾ ಹೊಳೆಯಿತು. ಆ ತಪಾಲಿಯನ್ನೇ ಸಿಂಗರಿಸಿ, ಅದರಲ್ಲಿ ನೀರು ತುಂಬಿ, ಹಚ್ಚಹಸಿರಿನ ಗದ್ದೆಯ ಮಧ್ಯ ಇಟ್ಟು ಶೂಟ್ ಮಾಡಿದೆ. ಎಷ್ಟು ಬ್ಯೂಟಿಫುಲ್ ಆಗಿದೆ ಗೊತ್ತಾ?

ಈ ಚಿತ್ರ ಬರೀ ಸಂಗೀತ ಪ್ರಧಾನ ಚಿತ್ರವಲ್ಲ. ಇಲ್ಲಿ ರಂಗಭೂಮಿ ಇದೆ, ಅದಕ್ಕೆ ಹಳ್ಳಿಯ ಕಲಾತ್ಮಕ ನಾಟಕ ಸ್ಟೇಜ್‌ಗಳಿವೆ, ಸೆಟ್ಸ್ ಇವೆ... ಜೊತೆಗೆ ಜುಳುಜುಳು ಹರಿವ ಪ್ರೇಮುಕತೆಯಿದೆ. ಮುಂದಿನ ವಾರ ವಿವರವಾಗಿ ಹೇಳ್ತೀನಿ. ಸಂಗೀತ, ರಂಗಭೂಮಿ, ಪ್ರೇಮ- ಪ್ರಣಯಗಳೆಲ್ಲ ಸೇರಿದರೆ 'ತಾನಂ ತಾನಂ' ಅಲ್ಲವೆ?

ನಿರೂಪಣೆ : ಪಿ.ಕೆ. ಮಲ್ಲನಗೌಡರ್

ರಾಜನೂ ಹಾಗೂ ಅವನ ತನಿಖಾಧಿಕಾರಿಯೂ

ಅಣಕ

ಓಂದಾನೊಂದು ಕಾಲದಲ್ಲಿ ಒಬ್ಬ ರಾಜ ಇದ್ದ. ಅವನು ಚಿಕ್ಕ ವಯಸ್ಸಿನಲ್ಲೇ ಪಟ್ಟಕ್ಕೆ ಬಂದು ಆದಾಯದ ಮೂಲಗಳನ್ನೆಲ್ಲ ಕರಗತ ಮಾಡಿಕೊಂಡಿದ್ದ. ಅವನ ರಾಜ್ಯ ಒಂದು ಸಮುದ್ರದಿಂದ ಇನ್ನೊಂದು ಸಮುದ್ರ ದವರೆವಿಗೂ ಹರಡಿತ್ತು. ದೇಶದ ಪೂರ್ವಭಾಗದಲ್ಲಿ ಒಂದು ಅರಮನೆ ಇತ್ತು. ಪಶ್ಚಿಮ ಭಾಗದಲ್ಲಿ ಒಂದು ಅರಮನೆ ಇತ್ತು. ದಕ್ಷಿಣ ಭಾಗದಲ್ಲಿಯೂ ಒಂದು ಅರಮನೆ ಇತ್ತು. ಬೇಸಿಗೆ ಕಾಲಕ್ಕೆಂದೇ ಉತ್ತರದ ಪರ್ವತದ ಮೇಲೆ ಒಂದು ಅರಮನೆ ಇತ್ತು. ಹೀಗಾಗಿ ಅತ್ಯಂತ ಪ್ರಭಾವೀ ಹಾಗೂ ಶ್ರೀಮಂತ ರಾಜ ಅನ್ನಿಸಿಕೊಂಡಿದ್ದ.

ರಾಜನ ಕಿವಿಗೆ ಇಂಪಾಗುವಂತೆ ಜೇನನ್ನೇ ಹರಿಸುವ ಪರಿವಾರ ಅವನ ಸುತ್ತ ನೆರೆದಿತ್ತು. ಅವರು ತಮ್ಮ ತಮ್ಮ ಶಕ್ತ್ಯಾನುಸಾರ ಸುಳ್ಳು, ಮೋಸ, ದಗ, ವಂಚನೆ, ದರೋಡೆ ಮಾಡುತ್ತಾ ರಾಜನನ್ನು ಅಧಿಕಾರದಲ್ಲೇ ಇರಿಸಲು ಶ್ರಮಿಸುತ್ತಿದ್ದರು. ಯಾಕೆ ಅಂದರೆ ರಾಜ ಅಧಿಕಾರದಲ್ಲಿ ಮುಂದುವರಿಯುವುದೇ ಅವರ ಜೀವನದ ಆದರ್ಶವಾಗಿತ್ತಲ್ಲ ಅದಕ್ಕೆ.

ಈ ರಾಜ ಇದ್ದನಲ್ಲ, ಬಹಳ ಪ್ರಭಾವ ಶಾಲಿ ಅಲ್ಲವಾ, ಅದಕ್ಕೇ ಅವನಿಗೆ ಸಾಮಂತ ರಾಜರು ಇದ್ದರು. ಅವರೂ ಸಹ ತಮ್ಮ ಅಂತಸ್ತಿಗೆ ಅನುಗುಣವಾಗಿ ಪ್ರಜೆಗಳಿಂದ ವಸೂಲಿ ಮಾಡಿ ಅದರಲ್ಲಿ ಒಂದು ಭಾಗ ರಾಜನಿಗೆ ಕಪ್ಪ ಒಪ್ಪಿಸಿ ಆತನ ಕೃಪಾಶೀರ್ವಾದ ಪಡೆದು ವೈಭವೋಪೇತರಾಗಿ ಮೆರೆಯುತ್ತಿದ್ದರು. ಅವನು ರಾಜನಾಗಿಯೇ ಉಳಿಯಲು ಸಹಕರಿಸುತ್ತಿದ್ದರು.


ರಾಜನಿಗೆ ಇದೆಲ್ಲ ಗೊತ್ತಿರಲಿಲ್ಲ ಅಂತ ಅಲ್ಲ, ಗೊತ್ತಿತ್ತಾದರೂ ಏನೂ ಕಾಣದವನಂತಿದ್ದ. ಅವನು ರಾಜನಾಗಿರುವುದೇ ಮುಖ್ಯ ಸಂಗತಿ ಆಗಿತ್ತಲ್ಲ ಅದಕ್ಕೆ.

ಒಟ್ಟಿನಲ್ಲಿ ಇವರೆಲ್ಲ ಸುಖ, ಸಂತೋಷ, ನೆಮ್ಮದಿಯಿಂದ ಇದ್ದರು ಅನ್ನಬಹುದು. ಇಂತಹ ಸಂದರ್ಭದಲ್ಲಿ ಅಯ್ಯೋ ಹೀಗಾಗಬೇಕೆ, ದೇಶದ ಮಣ್ಣನ್ನೇ ಮಾರುತ್ತಿರುವುದು ಬಯಲಾಗಬೇಕೆ? ಅತ್ಯಂತ ಸಾಧು, ಅಮಾಯಕರು ಅನ್ನಿಸಿದ್ದ ಪ್ರಜೆಗಳಿಗೂ ಇದು ಅತಿಯಾಯಿತು ಅನ್ನಿಸಿತು. ಆಡಳಿತದ ವಿರುದ್ಧ ಅಸಂತೋಷದ ಮಾತುಗಳನ್ನು ವ್ಯಕ್ತಪಡಿಸಿದರು.

ಆಡಳಿತದ ವಿರುದ್ಧ ಜನರ ಆಕ್ರೋಶ ಮುಗಿಲು ಮುಟ್ಟುತ್ತಿದೆ ಎಂದು ತಿಳಿದಾಗ ರಾಜ ಭ್ರಷ್ಟಾಚಾರವನ್ನು ಬುಡಮಟ್ಟ ಕಿತ್ತು ಬಿಸಾಕುತ್ತೇನೆ ಎಂದು ಬಹಿರಂಗವಾಗಿ ಸಾರಿದ. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರನ್ನು ಗಡೀಪಾರು ಮಾಡುತ್ತೇನೆ ಎಂದು ಬಹಿರಂಗ ಪಡಿಸಿದ. ಇದರತ್ತ ಕಾರ್ಯೋನ್ಮುಖನಾಗಿ ತನ್ನ ಆಸ್ಥಾನದಲ್ಲಿದ್ದ ದಕ್ಷ, ಪ್ರಾಮಾಣಿಕ ಅಧಿಕಾರಿಯನ್ನು ಗುರುತಿಸಿದ. 'ನಮಗೆ, ನಮ್ಮ ಆಡಳಿತದ ಗೌರವಕ್ಕೆ ಧಕ್ಕೆ ತಂದಿರುವ ಅಪಮಾನಕಾರಿ ಸಂಗತಿಯಿಂದ ನೊಂದಿದ್ದೇವೆ. ಆತ ಯಾರು ಎಂಬುದನ್ನು ಕಂಡುಹಿಡಿಯಲು ಸಂಪೂರ್ಣ ಅಧಿಕಾರ ನೀಡಿದ್ದೇವೆ,' ಎಂದು ಹೇಳಿದ.

'ಮಹಾಸ್ವಾಮಿ, ಹಾಗಾದರೆ ಆಸ್ಥಾನದ ಯಾರನ್ನೇ ಆದರೂ ನಾನು ತನಿಖೆಗೆ ಒಳಪಡಿಸಬಹುದೆ' ಕೇಳಿದ? ತನಿಖಾಧಿಕಾರಿ.

'ಮತ್ತೇನು, ನಮ್ಮನ್ನೇನೆಂದು ತಿಳಿದಿರುವಿರಿ ತನಿಖಾಧಿಕಾರಿಗಳೇ. ನಮ್ಮ ಪವಿತ್ರ ನಾಡಿನಲ್ಲಿರುವ ದುಷ್ಟಶಕ್ತಿಯನ್ನು ಕಂಡುಹಿಡಿಯಲು ಅಡ್ಡಬರುವ ರಾಜರು ನಾವೆಂದು ತಿಳಿದಿರುವಿರಾ? ನಾವು ಹಿಂದಿನ ರಾಜರುಗಳಂತಲ್ಲವು. ಯಾರನ್ನಾದರೂ ತನಿಖೆಗೆ ಒಳಪಡಿಸಿ' ಎಂದ ರಾಜ ಭರವಸೆಯ ದನಿಯಲ್ಲಿ.



ರಾಜ ನೀಡಿದ ಆಶ್ವಾಸನೆಯಿಂದ ತನಿಖಾಧಿಕಾರಿಯ ಮನಸ್ಸು ನಿರಾಳ ಆಯಿತು. ತನಿಖೆ ಆರಂಭಿಸಿದ. ಆಶ್ಚರ್ಯದ ಸಂಗತಿ ಎಂದರೆ ಒಂದೇ ವಿಷಯದ ಬಗೆಗೆ ನೂರಾರು ಪುಕಾರು, ಕಥೆಗಳು ಕೇಳಿಬಂದವು. ಒಂದಕ್ಕೊಂದು ತಾಳೆಯೇ ಆಗುತ್ತಿರಲಿಲ್ಲ, ಯಾವುದು ಸತ್ಯ ಯಾವುದು ಅಲ್ಲ ಅನ್ನುವುದನ್ನು ಹೇಳಲೇ ಕಷ್ಟ ಆಗಿತ್ತು. ತನಿಖಾಧಿಕಾರಿಯ ಮಿದುಳು ಗೊಂದಲದ ಗೂಡು ಆಯಿತು.

ತನಿಖಾಧಿಕಾರಿ ರಾಜನ ಬಳಿಗೆ ಹೋಗಿ 'ರಾಜನ್, ನಾನು ತನಿಖೆಯನ್ನು ಮುತುವರ್ಜಿಯಿಂದಲೇ ಮಾಡುತ್ತಿದ್ದೇನೆ. ಆದರೆ....' ಎಂದ.

'ಆದರೇ ಎಂದು ಏಕೆ ರಾಗ ಎಳೆಯುತ್ತಿರುವಿರಿ ತನಿಖಾಧಿಕಾರಿಗಳೆ?' ರಾಜ ಕೇಳಿದ.

'ಏಕೆಂದರೆ ರಾಜನ್, ಒಂದೇ ಕಥೆಯ ಹಲವು ರೂಪುಗಳನ್ನು ನಾನು ಕೇಳಿಸಿಕೊಂಡೆ. ಇದರಲ್ಲಿ ಯಾವುದು ಸರಿ ಎಂದು ತೀರ್ಮಾನಿಸಲು ಸರಿಯಾದ ಸಾಕ್ಷಾಧಾರಗಳು ಇಲ್ಲವಾಗಿವೆ.'

'ಸಾಕ್ಷಾಧಾರಗಳು ಇಲ್ಲವೆಂದರೇನು ಅರ್ಥ? ಅವನ್ನು ಒದಗಿಸಲಾರದ ನೀವೆಂತಹ ತನಿಖಾಧಿಕಾರಿಗಳು' ಕೋಪೋದ್ರಿಕ್ತನಾಗಿದ್ದ ರಾಜ ಅಬ್ಬರಿಸಿದ.

'ಆದರೆ.... ಆದರೆ.... ಸಾಕ್ಷಾಧಾರಗಳು ಯಾರ ಬಳಿ ಇವೆ ಎಂಬುದು ತಿಳಿದಿದೆ ಮಹಾಸ್ವಾಮಿ' ಎಂದ ಭಯದಿಂದ.

'ಅವನನ್ನು ಇಲ್ಲಿಗೆ ಎಳೆದು ತನ್ನಿ. ಅವನ ಹೆಬ್ಬೆರಳ ಉಗುರು ಕೀಳಿಸಿ ಬಾಯಿಬಿಡಿಸಿ' ಅಬ್ಬರಿಸಿದ ರಾಜ.

'ಅದು ಕಠಿಣ ಮಹಾಸ್ವಾಮಿ' ಎಂದ ತನಿಖಾಧಿಕಾರಿ ರಾಜನ ಹೆಬ್ಬರಳನ್ನೇ ದೃಷ್ಟಿಸುತ್ತಾ.

'ನಮಗೆ ಕಠಿಣವೆ' ಉದಾಸೀನದ ನಗೆ ಬೀರಿದ ರಾಜ.

'ತಮಗೆ ಅಸಾಧ್ಯವಾದುದೇನು ಅಲ್ಲ ಮಹಾಪ್ರಭು'

'ಹಾಗೆ ಹೇಳಿ' ಎಂದು ತನ್ನ ಸಾಮರ್ಥ್ಯದ ಬಗ್ಗೆ ಗೌರವ ಮೂಡಿಸಿಕೊಂಡು ಹೆಮ್ಮೆಯಿಂದ ಬೀಗುತ್ತಾ 'ಆ ನೀಚ ಯಾರು ಹೇಳಿ, ಈಗಲೇ ಎಳೆದು ತರಿಸುವೆನು' ಅಂದ.

'ಮಹಾಸ್ವಾಮಿ ಸಾಕ್ಷಾಧಾರಕ್ಕೆ ಬೇಕಿರುವುದು ಮನುಷ್ಯ ಅಲ್ಲ, ತಮ್ಮ ಸಂದೂಕ.'

ಬೆಚ್ಚಿಬಿದ್ದರು ಮಹಾಸ್ವಾಮಿಗಳು. ತಮ್ಮ ಆರ್ಥಿಕ ವ್ಯವಹಾರಗಳನ್ನೆಲ್ಲ ಬರೆದು ಇಡಲಾಗಿದೆ ಅಲ್ಲಿ ಅದನ್ನೇ ಕೇಳುತ್ತಿದ್ದಾನೆ ಇವನು!

'ನಿಮಗೆ ಬುದ್ಧಿಭ್ರಮಣೆ ಆಗಿದೆಯಾ?' ಅರುಚಿದ ರಾಜ. 'ನಾನು ಈ ನಾಡಿನ ರಾಜ. ನನ್ನ ಸಂದೂಕವನ್ನು ಯಾರೂ ನೋಡುವ ಅಧಿಕಾರ ಇಲ್ಲ, ಅದು ನನ್ನೊಡನೆಯೇ ಸಮಾಧಿ ಸೇರುತ್ತದೆ'

'ಹಾಗಾದರೆ ತಪ್ಪಿತಸ್ಥನನ್ನು ಕಂಡು ಹಿಡಿಯಲು ನನಗೆ ಸಾಧ್ಯವಿಲ್ಲ ಮಹಾಸ್ವಾಮಿ' ಎಂದ ತನಿಖಾಧಿಕಾರಿ ದೃಢ ಸ್ವರದಲ್ಲಿ.

'ಎಲವೋ ಮೂರ್ಖ ಶಿಖಾಮಣಿಯೇ ಇದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸು. ಪ್ರಜೆಗಳಿಗೆ ಅಸಮಾಧನವಾಗಿದೆ. ಭ್ರಷ್ಟಾಚಾರಿಗೆ ಶಿಕ್ಷೆ ವಿಧಿಸದೆ ಇದ್ದರೆ ಅದು ಆಸ್ಫೋಟಿಸಿ ನಮ್ಮನ್ನೇ ಅಧಿಕಾರದ ಗದ್ದುಗೆಯಿಂದ ಕಿತ್ತೊಗೆಯಬಹುದು.'

'ಸಂದೂಕ ನೋಡಲು ಅವಕಾಶ ನೀಡದಿದ್ದರೆ ನಾನು ಅಸಹಾಯಕ ಮಹಾಸ್ವಾಮಿ. ನನ್ನಿಂದ ತಪ್ಪಿತಸ್ಥನನ್ನು ಗುರುತಿಸಲು ಅಸಾಧ್ಯ.'

'ಒಂದು ನಿಮಿಷ ನಾವು ಯೋಚಿಸಲು ಬಿಡು' ಎಂದ ರಾಜ ಆಲೋಚನೆಯಲ್ಲಿ ಮುಳುಗಿದ. ಸಂದೂಕ ನೋಡಲು ಅವಕಾಶ ನೀಡಲಿಲ್ಲ ಎಂದರೆ ಮಹಾರಾಜರೇ ತಪ್ಪಿತಸ್ಥರಿಗೆ ಆಶ್ರಯ ನೀಡುತ್ತಿದ್ದಾರೆ ಎಂಬ ಅಪವಾದ ಬರುತ್ತದೆ. ಸಂದೂಕ ನೋಡಲು ಅನುಮತಿ ನೀಡಿದರೆ ಇದುವರೆಗಿನ ವಹಿವಾಟುಗಳೆಲ್ಲ ಬಯಲಾಗಿ ನಾವೇ ತಪ್ಪಿತಸ್ಥರು ಎಂದು ಬಹಿರಂಗವಾಗುತ್ತದೆ. ಇಂತಹ ನೋವಿನ ಸಂದಿಗ್ಧ ಪರಿಸ್ಥಿತಿ ಯಾರಿಗೂ ಬರಬಾರದು. ಇಂತಹ ಸಂಕಟದ ಸ್ಥಿತಿಯಲ್ಲಿ ರಾಜರು ಇರುವಾಗ....

'ಮಹಾಸ್ವಾಮಿ, ತಮ್ಮ ಅಂತಿಮ ತೀರ್ಮಾನವೇನು?'

'ಅನ್ಯಥಾಮಾರ್ಗವೇ ಇಲ್ಲ' ಎಂದು ನೋವಿನಿಂದ ಹೇಳಿದ ರಾಜ 'ಯಾರಲ್ಲಿ' ಎಂದ. ಭಟರು ಬಂದು ನಿಂತರು. 'ಕತ್ತಲಕೋಣೆಗೆ ಎಳೆದೊಯ್ದು ಈತನ ರುಂಡವನ್ನು ಚೆಂಡಾಡಿ' ಆಜ್ಞಾಪಿಸಿದ.

'ನನ್ನ ತಲೆನಾ' ಎಂದು ಭಯಭೀತನಾಗಿ ತೊದಲಿದ ಬಡಪಾಯಿ. 'ನಾನು ಮಾಡಿದ ಅಪರಾಧವಾದರೂ ಏನು? ನನಗೇಕೆ ಈ ಶಿಕ್ಷೆ' ಎಂದು ಗೋಳಾಡಿದ.

'ತನಿಖಾಧಿಕಾರಿಗಳಿಗೆ ಈ ನಾಡಿನಲ್ಲಿ ಬರ ಇಲ್ಲ, ಮತ್ತೊಬ್ಬ ಈ ಸ್ಥಾನ ತುಂಬುತ್ತಾನೆ' ಎಂಬ ಉತ್ತರ ಬಂದಿತು. 'ಆದರೆ ಈ ನಾಡಿನ ಪ್ರಜೆಗಳು ಬೇರೊಬ್ಬ ರಾಜನನ್ನು ಎಲ್ಲಿಂದ ತರಬಲ್ಲರು?'

(ಪ್ರೇರಣೆ: ಆರ್ಟ್ ಬಕ್‌ವಾಲ್ಡ್ ಅವರ ಲೇಖನ)

-ಎಚ್.ಎಲ್. ಕೇಶವಮೂರ್ತಿ

ಜಾರ್ಜ್ ಬುಷ್ ಪಕ್ಕ ನಮ್ಮ ರಾಜಕಾರಣಿಗಳು!

'ಕಂಡಹಾಗೆ' ಅಂಕಣದಲ್ಲಿ ಬಂದ 'ಬಿಸಿ ನೀರಿನೊಳಗಿನ ಕಪ್ಪೆ' ತುಂಬಾ ಚೆನ್ನಾಗಿದ್ದು ಪ್ರತಿಯೊಬ್ಬ ನಾಗರಿಕರೂ ಓದುವಂತಹದ್ದಾಗಿತ್ತು. ಆಲ್ ಗೋರ್ ನಿಜವಾಗಲೂ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅಧಿಕಾರ, ಹುದ್ದೆ ಎಂದೆಲ್ಲ ಹಪಹಪಿಸುವ ಬದಲಾಗಿ ಅಮೆರಿಕದ ಈ ಮಾಜಿ ಉಪಾಧ್ಯಕ್ಷ ಮುಂದೊಂದು ದಿನ ಇಡೀ ಜಗತ್ತಿಗೇ ಎದುರಾಗಲಿರುವ ಘೋರ ಅನಾಹುತದ ಬಗ್ಗೆ ಎಲ್ಲಡೆ ಎಚ್ಚರ ಮೂಡಿಸಲು ಪಡುತ್ತಿರುವ ಶ್ರಮ ಶ್ಲಾಘನೀಯ.



ನಮ್ಮ ರಾಜಕಾರಣಿಗಳೂ ಇರುತ್ತಾರೆ... ದೇವೇಗೌಡರನ್ನೇ ತೆಗೆದುಕೊಳ್ಳಿ, ಇಷ್ಟೊಂದು ವರ್ಷ ತಾನು ಮಣ್ಣಿನ ಮಗ, ರೈತ ಎಂದೆಲ್ಲ ಹೇಳುತ್ತಾ ಬಂದಿರುವ ಅವರು ಇವತ್ತು ರೈತ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಎಂದಾದರೂ ಅರ್ಥಪೂರ್ಣವಾಗಿ ಮಾತನಾಡಿದ್ದುಂಟ? ಸೂಕ್ತ ಪರಿಹಾರವನ್ನು ಸೂಚಿಸಿದ್ದುಂಟ?

'ಒಂದು ಅನಾನುಕೂಲ ಸತ್ಯ'ದಂತಹ ಚಿತ್ರ ಮಾಡಿದ ಆಲ್‌ಗೋರ್‌ರವರಿಗೂ, ಅದರ ಬಗ್ಗೆ ನಮಗೆ ಹೇಳಿದ ಗೌರಿಯವರಿಗೂ ನಮ್ಮ ಧನ್ಯವಾದಗಳು.

ಅದೇ ಸಂಚಿಕೆಯಲ್ಲಿ ಎಚ್.ಎಲ್. ಕೇಶವಮೂರ್ತಿ ಯವರ 'ಅಣಕ' ಅಂಕಣ ಓದಿ ಐದು ನಿಮಿಷ ಸತತವಾಗಿ ನಗೆ ಉಕ್ಕಿ, ಉಕ್ಕಿ ಬಂತು. ಹಾಗೆ ನಕ್ಕ ಮೇಲೆ ಎರಡು ತಾಸು ಚಿಂತನೆಗೆ ಹಚ್ಚಿತು. ಎಚ್.ಎಲ್.ಕೆ ಅವರು ನಗೆ ಚಟಾಕಿ ಹಾರಿಸುತ್ತಲೇ ಮಹಾನ್ ವ್ಯಕ್ತಿಗಳ ಗುಟ್ಟುಗಳನ್ನೆಲ್ಲಾ ರಟ್ಟು ಮಾಡುತ್ತಾರೆ. ನಮ್ಮ ಹಳ್ಳಿಗಳಲ್ಲಿ ಹೇಳುವ ಗಾದೆ ಮಾತು "ಬ್ಯಾನಿ ಇಲ್ಲದಂಗ ಬರೆ ಇಡ್ತಾರೆ" ಎಂಬಂತಿರುತ್ತದೆ ಅವರ ಬರಹಗಳು. ಪ್ರಚಲಿತ ವಿದ್ಯಮಾನಗಳನ್ನು ನಗು ಬರುವಹಾಗೆ ವಿಶ್ಲೇಶಿಸಿ ನಮ್ಮಂತಹವರಲ್ಲಿ ಹಾಸ್ಯಪ್ರಜ್ಞೆ ಮೂಡಿಸುತ್ತಿರುವ ಕೇಶವಮೂರ್ತಿಯವರಿಗೂ ನನ್ನ ಧನ್ಯವಾದಗಳು.

ಬಿ.ಎಸ್. ಇಮ್ಮಾನುವೇಲ,
ಮಸರಕಲ

'ಲಂಕೇಶ್'ನಲ್ಲಿ ಮೂಡಿಬಂದ ಹಸನ್ ನಸರುಲ್ಲಾರವರ ಸಂದರ್ಶನ "ಸಾಮ್ರಾಜ್ಯಶಾಹಿಗಳು ಇರುವ ತನಕ ನಮ್ಮ ಹೋರಾಟ ನಿರಂತರ" ಎಂಬ ಮಾತು ಸಂಪೂರ್ಣವಾಗಿ ಸತ್ಯದ ಮಾತಾಗಿದೆ. ಇವತ್ತು ಅಮೆರಿಕ ತನ್ನ ಶಸ್ತ್ರಾಸ್ತ್ರಗಳ ಬಲ ಪ್ರಯೋಗಿಸಿ ಜಗತ್ತಿನ ಹಲವು ದೇಶಗಳ ಮೇಲೆ ದಾಳಿ ಮಾಡುತ್ತಿದ್ದರೆ, ಅದನ್ನು ವಿರೋಧಿಸಬೇಕಿದ್ದ ನಮ್ಮ ಭಾರತದ ಸರಕಾರ ಅಮೆರಿಕಾದ ಮುಂದೆ ಸಾಷ್ಟಾಂಗ ನಮಸ್ಕಾರ ಹಾಕುತ್ತಿದೆ.



ಇವತ್ತು ನೆರೆಯ ಅಫಘಾನಿಸ್ತಾನ ಮತ್ತು ಇರಾಕ್ ಮೇಲೆ ಅಮೆರಿಕ ಬಾಂಬ್ ಹಾರಿಸುತ್ತಿದ್ದರೆ, ನಮ್ಮ ರಾಜಕೀಯ ನಾಯಕರು ಜಾರ್ಜ್ ಬುಷ್ ಪಕ್ಕ ನಿಂತು ಫೋಟೊ ತೆಗೆಸಿಕೊಳ್ಳಲು ಹಾತೊರೆಯುತ್ತಿದ್ದಾರೆ. ಇವರಿಗೆ ನಾಚಿಕೆ, ಮಾನ, ಮರ್ಯಾದೆ ಎಂಬುದು ಇದೆಯೆ? ಇವರಿಗೆಲ್ಲ ಬುದ್ಧಿ ಬರುವುದು ಭಾರತದ ಮೇಲೆಯೇ ಬುಷ್ ಬಾಂಬ್ ಹಾಕಿದ ನಂತರವೇ ಅನ್ನಿಸುತ್ತಿದೆ.

- ಮುತ್ತಣ್ಣಪೂಜಾರ್,
ಕದಲಬಾಳು

ಹೊಗಳಿ ತೆಗಳಿ

ಒಂದೆಡೆ ಮಂಡ್ಯದ ರೌಡಿಗಳು ಬಾಳೆ ಗಿಡದಂತೆ ಉತ್ತರಿಸಿ ಹೋಗುತ್ತಿದ್ದರೆ; ಇವರ ಉಪಟಳದಿಂದ ಬೇಸತ್ತಿದ್ದ ಜನತೆ ಹರ್ಷ ಪಡುತ್ತಿದ್ದಾರೆ. ಮಂಡ್ಯದ ಜನತೆಗೆ, ಅದರಲ್ಲೂ ಸಣ್ಣ ಪುಟ್ಟ ವ್ಯವಹಾರ ಮಾಡುತ್ತಾ ಬದುಕುತ್ತಿರುವ ಅಮಾಯಕರಿಗೆ ಇದು ಒಳ್ಳೆಯ ಸುದ್ದಿ ಎನ್ನದೆ ಅನ್ಯ ಮಾರ್ಗವಿಲ್ಲ.



ಮಂಡ್ಯದ ನಡುಬೀದಿಗಳಲ್ಲಿ ಒಂದರ ಮೇಲೆ ಒಂದು ಹೆಣ ಬೀಳುತ್ತಿದ್ದರೂ ರೌಡಿಗಳು ಎಚ್ಚೆತ್ತುಕೊಳ್ಳದಿರುವುದು ವಿಷಾದದ ಸಂಗತಿಯಾಗಿದೆ. ಹೆತ್ತವರನ್ನು, ಸೋದರ-ಸೋದರಿಯರನ್ನು, ಕೊನೆಗೆ ಕಟ್ಟಿಕೊಂಡ ಹೆಂಡತಿ, ನಂಬಿಕೊಂಡ ಮಕ್ಕಳನ್ನು ಅನಾಥರನ್ನಾಗಿಸಿ ಭೀಕರವಾಗಿ ಸಾಯುತ್ತಿರುವ ರೌಡಿಗಳಿಗೆ ಅದೆಂದು ಜ್ಞಾನೋದಯವಾಗುತ್ತದೋ ಗೊತ್ತಿಲ್ಲ.

ರೌಡಿಗಳ ಹತ್ಯೆ ಮಾತು ಬದಿಗಿರಲಿ, ಹತ್ಯೆ ಆಗುತ್ತಿರುವವರು, ಹತ್ಯೆ ಮಾಡುತ್ತಿರುವವರು ಬಹುತೇಕ ಮೂವತ್ತರ ಆಸು ಪಾಸಿನವರು ಎಂಬುದು ದುಃಖದ ಮಾತು. ಉತ್ತರಿಸಿ ಹೋಗುತ್ತಿರುವ ರೌಡಿಗಳ ವಿದ್ರಾವಕ ಸ್ಥಿತಿ, ಇತರ ರೌಡಿಗಳ ಕಣ್ತೆರಿಸಲಿ ಎಂಬುದು 'ಲಂಕೇಶ್' ಓದುಗನಾದ ನನ್ನ ಆಶಯ.


- ಅನಾರ್ಕಲೀ ಸಲೀಂ,
ಶ್ರೀರಂಗಪಟ್ಟಣ

ನಮ್ಮ ಇಡೀ ರಾಜಕೀಯ ವ್ಯವಸ್ಥೆ ಭ್ರಷ್ಟಾಚಾರದಲ್ಲಿ, ಹಗರಣಗಳಲ್ಲಿ ಮುಳುಗಿದ್ದರೆ ನಮ್ಮ ರಾಜ್ಯದ ದೈನಿಕ ಪತ್ರಿಕೆಗಳು ತಮ್ಮ ಪತ್ರಿಕಾ ಧರ್ಮ ಪರಿಪಾಲನೆಯನ್ನು ಮರೆತು ಕೂತಿವೆ. ಆದರೆ 'ಲಂಕೇಶ್' ವಾರಪತ್ರಿಕೆ ಮಾತ್ರ ಪ್ರತಿ ಸಂಚಿಕೆಯಲ್ಲಿ ಉಗಿದುಗಿದು ಬರೆಯುತ್ತಿದೆ. ಆದರೂ ನಮ್ಮನ್ನಾಳುತ್ತಿರುವ ನಾಯಕರು ಯಾವ ಮುಜುಗರವೂ ಇಲ್ಲದೆ ತಮ್ಮ ಕುರ್ಚಿಗಳಿಗೆ ಅಂಟಿಕೊಂಡು ಕೂತಿದ್ದಾರೆ. ಮುರೂ ಬಿಟ್ಟವರು ಊರಿಗೆ ದೊಡ್ಡವರು ಅಂದರೆ ಇವರೇನಾ? ಎಂಬಂತಾಗಿದೆ.

- ಆರ್.ಎನ್. ಸತ್ಯನಾರಾಯಣರಾವ್,
ಬೆಂಗಳೂರು

ಪ್ರಜಾಪ್ರಭುತ್ವದಲ್ಲಿ ಮಾರ್ಗದರ್ಶಿಯಾಗಿ ಜನರನ್ನು ಎಚ್ಚರಿಕೆಯಿಂದ ಮುನ್ನಡೆಸುವ ಮಹತ್ಕಾರ್ಯವನ್ನು 'ಲಂಕೇಶ್' ವಾರಪತ್ರಿಕೆ ಮಾಡುತ್ತಿರುವುದಕ್ಕೆ ಅಭಿನಂದನೆಗಳು. ಇವತ್ತಿನ ರಾಜಕೀಯ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತಿದೆ. ಅಂತಹ ಸರ್ವಾಧಿಕಾರದಿಂದ ಸರ್ವನಾಶ ಖಂಡಿತ. ಆರೋಗ್ಯಪೂರ್ಣ ಸಮಾಜ ರಚನೆಯ ಕಾರ್ಯವನ್ನು ಪತ್ರಿಕೆ ಸದಾ ಮುಂದುವರಿಸಲಿ ಎಂದು ಹಾರೈಸುವ.....

ಗಣೇಶ್. ಎನ್. ತುರುವನೂರು



ನಾನೂ ಯಾಕೆ ಸಿನಿಮಾದಲ್ಲಿ ನಟಿಸಬಾರದು?


ಮುರಳಿ ನಟಿಸಿದ ಚಿತ್ರ ಹಿಟ್ ಆದ ಕೂಡಲೇ ನನ್ನ ಗೆಳೆಯರೆಲ್ಲಾ ನನ್ನ ಮೇಲೆ ಹೆಚ್ಚು ಒತ್ತಡವನ್ನು ಹೇರಲು ಶುರು ಮಾಡಿದರು. ನನಗೂ ಹಾಗೇ.... ನನಗರಿವಿಲ್ಲದೆ ಸಿನಿಮಾ ಬಗ್ಗೆ ಹೆಚ್ಚು ಹೆಚ್ಚು ಕ್ರೇಜ್ ಮತ್ತು ಕುತೂಹಲ ಶುರುವಾಯಿತು. ನಾನೂ ಯಾಕೆ ಸಿನಿಮಾದಲ್ಲಿ ನಟಿಸಬಾರದು ಎಂಬ ಆಸೆ ಹೆಚ್ಚಾಯಿತು.

ಆಸ್ಪತ್ರೆಯಲ್ಲಿ ನಾನು ಮಲಗಿಕೊಂಡಿದ್ದಾಗ ಗೆಳೆಯರೆಲ್ಲಾ ನನ್ನನ್ನು ನೋಡಲು ಬರುತ್ತಿದ್ದದ್ದು ನನ್ನ ಮನಸ್ಸನ್ನು ತುಂಬಾ ಹಗುರವಾಗಿಸುತ್ತಿತ್ತು. ಹಲವು ದಿನಗಳ ನಂತರ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಮನೆಗೆ ಬಂದರೂ ನಾನು ಕೂಡಲೇ ಕಾಲೇಜಿಗೆ ಹೋಗುವಂತಿರಲಿಲ್ಲ. ಯಾಕೆಂದರೆ ನನ್ನ ಕಾಲು ಸಂಪೂರ್ಣವಾಗಿ ಗುಣವಾಗಿರಲಿಲ್ಲ.

ಆದರೂ ಆಗ ನಂಬಿಯಾರ್ ಸ್ವಾಮಿಯವರ ಜೊತೆ ಶಬರಿಮಲೆಗೆ ಹೊರಟುನಿಂತೆ. ಯಾಕೆಂದರೆ ನಂಬಿಯಾರ್ ಸ್ವಾಮಿ ಜೊತೆ ಶಬರಿಮಲೆಗೆ 1975ರಿಂದಲೂ ಪ್ರತಿ ವರ್ಷ ಹೋಗುವುದು ಒಂದು ರೀತಿಯಲ್ಲಿ ನಮ್ಮ ಸಂಪ್ರದಾಯವಾಗಿತ್ತು. ವಾಸ್ತವವಾಗಿ ನಂಬಿಯಾರ್ ಸ್ವಾಮಿಯವರೇ ನಮಗೆಲ್ಲ ಪೂಜೆ, ವ್ರತ ಮಾಡುವುದನ್ನು ಕಲಿಸಿಕೊಟ್ಟದ್ದು. ಸುಮಾರು 14 ವರ್ಷಗಳ ಕಾಲ ನಿರಂತರವಾಗಿ ಮಕರ ಸಂಕ್ರಾಂತಿಯ ಸಮಯದಲ್ಲಿ ಶಬರಿಮಲೆಗೆ ಯಾತ್ರೆ ಹೋದಾಗ ನಮ್ಮ ಜೊತೆ ಅಪ್ಪಾಜಿ ಮತ್ತು ಮುತ್ತುರಾಮನ್ ಸರ್ ಕೂಡ ಬರುತ್ತಿದ್ದರು. ಅವರ ಮಗನಾದ ಮುರಳಿ ನನ್ನ ಗೆಳೆಯ. ಆತನೂ ಶಬರಿಮಲೆಗೆ

ನಿರೂಪಣೆ: ಸದಾಶಿವ ಶೆಣೈ

17




ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಬರುತ್ತಿದ್ದ. ಮುಂದೆ ಈತನೇ ಕಾರ್ತಿಕ್ ಎಂಬ ಹೆಸರಿನಲ್ಲಿ ತಮಿಳುನಾಡಿನಲ್ಲಿ ದೊಡ್ಡ ನಟನಾಗಿ ಬೆಳೆದ.

ಆ ವರ್ಷ ನಾವು ಶಬರಿಮಲೆಗೆ ಹೋಗುವ ಮುನ್ನ ಕಾರ್ತಿಕ್ ನಟಿಸಿದ ಮೊದಲ ಚಿತ್ರ 'ಅಪೂರ್ವ ರಾಗಂಗಳ್' ಬಿಡುಗಡೆಯಾಗಿತ್ತು. ಅದರಲ್ಲಿ ಕಾರ್ತಿಕ್ ಬಹಳ ಚೆನ್ನಾಗಿ ನಟಿಸಿದ್ದ. ನಾನು ಚಿತ್ರವನ್ನು ನೋಡಿ ಆತನನ್ನು ಮನಸ್ಸಾರೆ ಹೊಗಳಿದ್ದೆ. ಅಪ್ಪಾಜಿ ಕೂಡ ಚಿತ್ರ ನೋಡಿ ಆತನನ್ನು ಆಶೀರ್ವದಿಸಿದ್ದರು. ಕಾಲೇಜಿನಲ್ಲಿ ನನ್ನ ಗೆಳೆಯರೆಲ್ಲರೂ ಕಾರ್ತಿಕ್‌ನ ಸಿನಿಮಾವನ್ನು ನೋಡಿ 'ಪುಟ್ಟಸ್ವಾಮಿ, ನಿನ್ನ ಫ್ರೆಂಡ್ ಮುರಳಿ ಸಿನಿಮಾ ನೋಡಿದ್ದ್ಯಾ, ಆತ ತುಂಬಾ ಚೆನ್ನಾಗಿ ನಟಿಸಿದ್ದಾನೆ' ಎಂದು ಹೇಳಿದ್ದು ಇನ್ನೂ ನೆನಪಿನಲ್ಲಿದೆ.

ಮುರಳಿ ನಟಿಸಿದ ಚಿತ್ರ ಹಿಟ್ ಆದ ಕೂಡಲೇ ನನ್ನ ಗೆಳೆಯರೆಲ್ಲಾ ನನ್ನ ಮೇಲೆ ಹೆಚ್ಚು ಒತ್ತಡವನ್ನು ಹೇರಲು ಶುರು ಮಾಡಿದರು. ನನಗೂ ಹಾಗೇ.... ನನಗರಿವಿಲ್ಲದೆ ಸಿನಿಮಾ ಬಗ್ಗೆ ಹೆಚ್ಚು ಹೆಚ್ಚು ಕ್ರೇಜ್ ಮತ್ತು ಕುತೂಹಲ ಶುರುವಾಯಿತು. ನಾನೂ ಯಾಕೆ ಸಿನಿಮಾದಲ್ಲಿ ನಟಿಸಬಾರದು ಎಂಬ ಆಸೆ ಹೆಚ್ಚಾಯಿತು. ಇದಕ್ಕೆಲ್ಲ ಮುರಳಿ ನಟಿಸಿದ್ದ ಚಿತ್ರ ಹಿಟ್ ಆಗಿದ್ದೂ ಒಂದು ಕಾರಣವಾಗಿತ್ತು.



ಶಬರಿಮಲೆಗೆ ಹೋದಾಗ ನನಗೆ ಒಂದು ರೀತಿಯ ದೈವಿಕ ಅನುಭವ ಆಗುತ್ತಿತ್ತು; ಸಮಾಧಾನ ಮತ್ತು ಮನಃಶಾಂತಿ ಸಿಗುತ್ತಿತ್ತು. ಅದೊಂದು ಡಿವೈನ್ ಪವರ್! ಅದನ್ನು ನಾನು ಇಲ್ಲಿ ವರ್ಣಿಸಲು ಸಾಧ್ಯವೇ ಇಲ್ಲ. ಆದರೆ ಒಂದನ್ನು ಹೇಳಲೇಬೇಕು. ನಾನು ಅಲ್ಲಿಗೆ ಹೋಗುವ ಮುನ್ನ ಎಲ್ಲ ಪೂಜೆ ಮತ್ತು ವ್ರತಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೆನಾದ್ದರಿಂದ ನನ್ನ ತುಂಟಾಟಗಳು ತಾತ್ಕಾಲಿಕವಾಗಿ ಬಂದ್ ಆಗುತ್ತಿದ್ದವು.

ಆ ವರ್ಷ ನಂಬಿಯಾರ್ ಸ್ವಾಮಿ ಜೊತೆ ಶಬರಿಮಲೆಗೆ ಹೋಗಿದ್ದು ಕಡೇ ಬಾರಿ. ಯಾಕೆಂದರೆ ಆ ನಂತರ ನಾವು ಮದರಾಸಿನಿಂದ ಬೆಂಗಳೂರಿಗೆ ಶಿಫ್ಟ್ ಆದೆವು. ಅದಾದ ಬಳಿಕ ನಾನು ಅಪ್ಪಾಜಿ ಜೊತೆ ಶಬರಿಮಲೆಗೆ ಹೋಗುತ್ತಿದ್ದೆ. ಆಗೆಲ್ಲ ಅಪ್ಪಾಜಿ ತೀರ್ಥಯಾತ್ರೆ ಮಾಡುವ ಉದ್ದೇಶವನ್ನು ವಿವರಿಸುತ್ತಿದ್ದರು. ಈ ಶಬರಿಮಲೆಯ ವೈಶಿಷ್ಟ್ಯವನ್ನು ಅವರ ಬಾಯಲ್ಲೇ ಕೇಳಬೇಕಿತ್ತು, ಅವರು ಆ ದೇವರ ಬಗ್ಗೆ ಅಷ್ಟು ಚೆನ್ನಾಗಿ ಹೇಳುತ್ತಿದ್ದರು. ನಾನು ಸಂಪೂರ್ಣವಾಗಿ ಅವರ ಮಾತಿನಲ್ಲೇ ಮುಳುಗಿಬಿಡುತ್ತಿದ್ದೆ.

ಹೀಗೆ ಒಂದೆಡೆ ಗೆಳೆಯರೊಂದಿಗೆ ಡಿಸ್ಕೋಗೆ ಹೋಗುತ್ತಿದ್ದ ನಾನು ಇನ್ನೊಂದೆಡೆ ಜನವರಿ ತಿಂಗಳಲ್ಲಿ ಅದನ್ನೆಲ್ಲ ಮರೆತು ಸಂಪೂರ್ಣವಾಗಿ ಅಯ್ಯಪ್ಪಸ್ವಾಮಿ ಭಕ್ತನಾಗಿಬಿಡುತ್ತಿದ್ದೆ! ಹಾಗೆಯೇ ಮತ್ತೊಂದೆಡೆ ಒಡಿಸ್ಸಿ ನೃತ್ಯವನ್ನು ಕಲಿಯುತ್ತಿದ್ದ ನಾನು ಗೆಳೆಯರ ಜೊತೆ ಅಡ್ಡಗಳಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದೆ. ಇದೆಲ್ಲದರ ಮಧ್ಯೆ ದೇವರ ಕತೆ, ಪೌರಾಣಿಕ ಕತೆ, ಸಿನಿಮಾ ಕತೆ, ನಮ್ಮ ರಾಜ್ಯದ ಐತಿಹಾಸಿಕ ವ್ಯಕ್ತಿಗಳ ಕತೆ...... ಎಲ್ಲವನ್ನೂ ಕೇಳಿ ತಿಳಿದುಕೊಳ್ಳುತ್ತಿದ್ದೆ.

ಅಂದಹಾಗೆ, ಶಬರಿಮಲೆಗೆ ಹೋಗುವುದರಿಂದ ಬರೀ ಆಧ್ಯಾತ್ಮ ಮಾತ್ರವಲ್ಲ, ಅವರೊಂದಿಗೆ ವಾಸ್ತವ ಬದುಕಿನ ಬಗ್ಗೆ ಹಲವು ಪಾಠಗಳನ್ನೂ ಕಲಿತೆ. ಅದೇನೆಂದರೆ, ಎಲ್ಲ ವರ್ಗದ ಜನರೊಂದಿಗೆ ಬದುಕುವ ಕಲೆ. ನಿಮಗೆ ಗೊತ್ತು, ಶಬರಿಮಲೆಗೆ ಶ್ರೀಮಂತರಿಂದ ಹಿಡಿದು ಕಡುಬಡವರೂ ಬರುತ್ತಾರೆ. ಅವರೆಲ್ಲರೂ ಜೊತೆಯಾಗಿ ಯಾತ್ರೆ ಮಾಡಿ ಜೊತೆಯಾಗಿ ಪೂಜೆ ಸಲ್ಲಿಸುತ್ತಾರೆ. ಅದನ್ನು ನೋಡಿ ಅನುಭವಿಸಿದ್ದರಿಂದ ನಾನು ನನ್ನ ಕಾಲೇಜಿನಲ್ಲಿದ್ದ ಶ್ರೀಮಂತರು ಮತ್ತು ಬಡವರು ಎಲ್ಲರೊಂದಿಗೆ ಯಾವ ಭೇದ ಭಾವವಿಲ್ಲದೆ ಬೆರೆಯುತ್ತಿದ್ದೆ.

ನಾನು ಕಾಲು ನೋವಿನಿಂದ ಸುಧಾರಿಸಿಕೊಂಡು ಫೈನಲ್ ಇಯರ್ ಓದುತ್ತಿದ್ದಾಗ ಮತ್ತೊಂದು ದುರ್ಘಟನೆ ನಡೆಯಿತು. ಊಟಿಯಲ್ಲಿ ಅಪ್ಪಾಜಿ 'ಯಾರಿವನು?' ಚಿತ್ರದಲ್ಲಿ ನಟಿಸುತ್ತಿದ್ದಾಗ ನಡೆದ ಆ ದುರ್ಘಟನೆಯಿಂದಾಗಿ ಕನ್ನಡ ಮತ್ತು ತಮಿಳು ಜನರ ನಡುವೆ ಅನಗತ್ಯವಾಗಿ ಮನಸ್ತಾಪ ಹುಟ್ಟಿಕೊಂಡಿತು.

ಆ ಗಲಾಟೆ ಎರಡು ಭಾಷೆಯ ಜನರ ನಡುವೆ ಮಾತ್ರವಲ್ಲ, ಎರಡು ರಾಜ್ಯಗಳ ನಡುವೆಯೂ ವಿವಾದವನ್ನು ಹುಟ್ಟುಹಾಕಿದಾಗ ಅಪ್ಪಾಜಿಗೆ ತುಂಬಾ ಬೇಸರವಾಯಿತು. ಆದರೂ ಅಂಥಾ ಸಂದರ್ಭದಲ್ಲಿ ಅವರು ತಮ್ಮ ಮನಸ್ಸಿನ ಹತೋಟಿಯನ್ನು ಕಳೆದುಕೊಳ್ಳದೇ ಶಾಂತಚಿತ್ತರಾಗಿ ಪರಿಸ್ಥಿತಿಯನ್ನು ಎದುರಿಸಿದರು. ಆ ವಿವಾದವನ್ನು ಅವರು ಎದುರಿಸಿದ ರೀತಿ ನೋಡಿ ಅಪ್ಪಾಜಿಯ ಬಗ್ಗೆ ನಮ್ಮಲ್ಲಿ ಇನ್ನಷ್ಟು ಗೌರವ ಮೂಡಿತು.

ಆ ಗಲಾಟೆ ಶುರುವಾದ ಕೂಡಲೇ ನಾವು ನಮ್ಮ ವಾಸಸ್ಥಾನವನ್ನು ಮದರಾಸಿನಿಂದ ಬೆಂಗಳೂರಿಗೆ ವರ್ಗಾಯಿಸಲು ನಿರ್ಧರಿಸಿದೆವು. ಆದರೆ ಈ ನಿರ್ಧಾರದಿಂದ ಅಲ್ಲಿಯ ತಮಿಳರಿಗೆ ತುಂಬ ಬೇಸರವಾಯಿತು. "ನೀವು ಯಾವುದೇ ಕಾರಣಕ್ಕೂ ಮದರಾಸು ಬಿಟ್ಟು ಬೆಂಗಳೂರಿಗೆ ಹೋಗಬಾರದು" ಎಂದು ನಮ್ಮ ಮನೆಗೆ ನಿತ್ಯವೂ ತಮಿಳರು ಬಂದು ಅಪ್ಪಾಜಿಯವರ ಮನವೊಲಿಸಲು ಪ್ರಯತ್ನಿಸುತ್ತಿದ್ದರು. ಕಾಲೇಜಿನಲ್ಲಿದ್ದ ನನ್ನ ತಮಿಳು ಸ್ನೇಹಿತರು ಕೂಡ ಆ ಘಟನೆಯಿಂದ ಸಿಕ್ಕಾಪಟ್ಟೆ ಬೇಸರಗೊಂಡಿದ್ದರು. ಅವರಿಗೆಲ್ಲಾ ಎಷ್ಟು ಸಿಟ್ಟು ಬಂದಿತ್ತೆಂದರೆ "ನಾವೆಲ್ಲಾ ಊಟಿಗೆ ಹೋಗಿ ನಮ್ಮ ಅಪ್ಪಾಜಿಗೆ ರಕ್ಷಣೆ ಕೊಡುತ್ತೇವೆ. ನಮ್ಮ ಅಪ್ಪಾಜಿಯ ಮೈ ಮುಟ್ಟುವ ಧೈರ್ಯ ಯಾರಿಗಿದೆ ನೋಡೋಣ?" ಎಂದು ಆರ್ಭಟಿಸುತ್ತಿದ್ದರು.



ಆಗ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಎಂ.ಜಿ. ರಾಮಚಂದ್ರನ್‌ರವರೂ ನಮ್ಮ ಮನೆಗೆ ಬಂದು ಅಪ್ಪಾಜಿಗೆ ಸಾಂತ್ವನ ಹೇಳಿದ್ದರು. ಅಷ್ಟೇ ಅಲ್ಲ, ನಮ್ಮ ಮನೆಗೆ ಪೊಲೀಸ್ ಬಂದೋಬಸ್ತನ್ನು ನೀಡಿ, ನಮಗೆಲ್ಲಾ ಮನೆಯಿಂದ ಕಾಲೇಜಿಗೆ ಹೋಗುವಾಗ ಪೊಲೀಸ್ ರಕ್ಷಣೆಯನ್ನು ನೀಡಿದ್ದರು. ಯಾವುದೇ ಕಾರಣಕ್ಕೂ ಯಾರೂ ನಮಗೆ ಕಿರುಕುಳ ನೀಡದಂತೆ ಸ್ವತಃ ಎಂ.ಜಿ.ಆರ್‌ರವರು ಮುತುವರ್ಜಿ ವಹಿಸಿದ್ದರು.

ಅದೇ ಸಂದರ್ಭದಲ್ಲಿ ಎವಿಎಂ ಸ್ಟುಡಿಯೋದವರು ಕೂಡಾ ನಮ್ಮ ಮನೆಗೆ ಬಂದರು. ಅಲ್ಲಿಯ ವರ್ಕರ್ಸ್ ಕೂಡ ಬಂದು "ಅಪ್ಪಾಜಿ ನೀಂಗಳ್ ಎಂದ ಕಾರಣತ್ತಿಕ್ಕೂ ಇಂಗೆತ್ತಿಲೆಂದ್ ಪೋಗಕೂಡಾದ್. ನಾಂಗಳೆಲ್ಲಾ ಉಂಗಳೈ ರೊಂಬ ನೇಸಿಕ್ಕಿರೋಂ" ಎಂದು ಹೇಳಿದ್ದರು. ನಿಜ ಹೇಳಬೇಕೆಂದರೆ, ತಮಿಳರು ನಮ್ಮನ್ನು ಎಷ್ಟು ಪ್ರೀತಿಸುತ್ತಿದ್ದರು ಎಂಬ ಸತ್ಯ ನನಗೆ ಅರಿವಾಗಿದ್ದೇ ಆಗ.

ಆದರೂ ಬೇರೆ ದಾರಿಯಿಲ್ಲದೆ ಕೊನೆಗೆ ಮದರಾಸು ಬಿಟ್ಟು 'ಮರಳಿ ಮನೆಗೆ' ಅನ್ನುತ್ತಾರಲ್ಲಾ, ಹಾಗೆ ಕರ್ನಾಟಕಕ್ಕೆ ಮರಳಿದೆವು. ಒಂದೇ ಒಂದು ಅಸಮಾಧಾನ ಏನೆಂದರೆ, ಈ ದುರ್ಘಟನೆಯ ನಂತರ ನಾನು ಮತ್ತು ನನ್ನ ತಮ್ಮ ರಾಘು ಮತ್ತೆ ಕಾಲೇಜಿಗೆ ಹೋಗಲಾಗಲೇ ಇಲ್ಲ. ಅದಕ್ಕೊಂದು ಬಲವಾದ ಕಾರಣವೂ ಇದೆ. ಅದೇನೆಂಬುದನ್ನು ನಿಮಗೆ ಖಂಡಿತವಾಗಿ ಮುಂದಿನವಾರ ಹೇಳುತ್ತೇನೆ....

ನೀ ಹೇಳಿದ್ರ ಚೆಂದ್ರ ಮುಳುಗೊಲ್ಲ....

ಶಾಟ್ ಕಟ್

ಕಣ್ಣು ಕುಕ್ಕುವಂತೆ ಮಾಡುತಾಳ ನೋಡಿ ಈ ಸುಂದರಿ... ಇನ್ನೂ ಹರೆಯದ ಹಂಗಾಮು ಪುಟಿಯುತ್ತಿದೆ.... ಅದರಗಳು ಆಹ್ವಾನಿಸುತ್ತಿವೆ. ಕಣ್ಣುಗಳಲ್ಲಿ ಕೋಲ್ಮಿಂಚು ಹರಿಯುತ್ತಿದೆ... Oh, ಶಬಾನಾ ಮೇರಿ ಜಾನ್....



ಮುಘಲ್ ಬಾರ್ಡರ್ ಇರುವ ಕಪ್ಪು ಜಾರ್ಜೆಟ್ ಸೀರೆ, ಟೈಟಾದ ಸೆಕ್ಸಿ ಬ್ಲೌಸು.... ಭುಜ ಆವರಿಸಿ ತಲೆ ಏರಿರುವ ಪಶ್ಮಿನಾ ಶಾಲ್, ಹಣೆಯಂಚಲಿ ಇಳಿಬಿದ್ದಿರುವ ಮಿಂಚಿನ ನೆಕ್ಲೆಸ್.... ಇಷ್ಟೆಲ್ಲ ಝಲಕ್ ಮಧ್ಯೆ ಈ ಮಿಂಚುಳ್ಳಿ ಅದೆಷ್ಟು ಲವ್ಲಿಯಾಗಿದ್ದಾಳೆ ನೋಡಿ...

ತುಮ್ ಜೋ ಕಹೆ ದೊ ತೊ
ಆಜ್ ಕಿ ರಾತ್
ಚಾಂದ್ ಡೂಬೆಗಾ ನಹಿ
ಚಾಂದ್ ಕೊ ರೋಕ್ ಲೊ.....
ಈ ಹಾಡು ನೆನಪಾಗುತ್ತಿದೆಯಲ್ಲವೆ?

ನಂದಿತಾ ದಾಸ್: ಸಂಬಂಧ ಮುರೀತಾ?



ನಂದಿತಾ ದಾಸ್ ಮತ್ತು ಸೌಮ್ಯ ಸೇನ್ ನಡುವಿನ ವೈವಾಹಿಕ ಸಂಬಂಧದಲ್ಲಿ ಬಿರುಕು ಮೂಡಿರುವ ಸುದ್ದಿ ಹರಡಿದೆ. ಇಬ್ಬರ ನಡುವೆ ಹಲವಾರು ತಿಂಗಳಿಂದ ಭಿನ್ನಾಭಿಪ್ರಾಯಗಳು ಮೂಡಿರುವುದೇ ಇದಕ್ಕೆ ಕಾರಣವಂತೆ.

ಈ ಹಿಂದೆ ಫ್ರೆಂಚ್ ಜರ್ನಲಿಸ್ಟ್ ಒಬ್ಬನ ಜೊತೆ ನಂದಿತಾ ದಾಸ್ ಹೆಸರು ತೇಲಿ ಬಂದಿತ್ತು. ಹಾಗೆಯೇ ಬಾಲಿವುಡ್‌ನ ಖ್ಯಾತ ನಟನೊಬ್ಬನ ಜೊತೆಗೂ ಫ್ರೆಂಡ್‌ಶಿಪ್ ಗಾಢವಾಗಿತ್ತು ಎಂಬ ಗಾಸಿಪ್ಪೂ ಹರಡಿತ್ತು.

ಈಗ ಡೈವೋರ್ಸ್‌ನತ್ತ ನಂದಿತಾ ದಾಸ್ ಎಂಬ ಸುದ್ದಿ ಬಂದಿದೆ. ಒಟ್ಟಲ್ಲಿ ಪ್ರತಿಭಾವಂತೆ ನಂದಿತಾ ಸದಾ ನಗುತಿರಲಿ.

ಪಂಚ್‌ಲೈನೊ, ಪಿಂಚ್ ಲೈನೊ?



ಕನ್ನಡ ಚಿತ್ರಗಳ ನಿರ್ದೇಶಕರು, ನಿರ್ಮಾಪಕರು ಅದೆಷ್ಟು 'ಕ್ರಿಯಾಶೀಲ'ರಾಗಿದ್ದಾರೆ ಎನ್ನುವುದಕ್ಕೆ ಇತ್ತೀಚೆಗೆ ಚಿತ್ರಗಳ ಟೈಟಲ್ ಕೆಳಗೆ ಬರುತ್ತಿರುವ ಪಂಚ್‌ಲೈನ್‌ಗಳೇ ಸಾಕ್ಷಿ.

ಅದೇನು ಧೈರ್ಯ ಅಂತೀರಿ.... 'ಚಾರ್‌ಪಾಟ್' ಎಂಬ ಚಿತ್ರದ ಪಂಚ್‌ಲೈನ್: 'nonstop nonsense movie'. ತಮ್ಮದು ಅಂತ್ಯವಿಲ್ಲದ ಮೂರ್ಖ ಚಿತ್ರ ಎಂದು ಹೇಳಿಕೊಳ್ಳುವ ಧೈರ್ಯವನ್ನು ಮೆಚ್ಚಲೇಬೇಕು.

ಬಿಜಾಪುರದ ವಿನಾಯಕ ಜೋಶಿ ಹೀರೋ ಆಗಿರುವ 'ನನ್ನ ಕನಸಿನ ಹೂವೆ' ಚಿತ್ರದ ಪಂಚ್‌ಲೈನ್: Believe in Dreams.... ಚೆನ್ನಾಗಿದೆ. but ಬಹುಶಃ ಚಿತ್ರದ ಗೆಲುವನ್ನು ಕನಸಲ್ಲೇ ಕಾಣುತ್ತಾರೇನೋ? ಜೋಶಿಗೂ ಹೀರೋ ಆಗಿ ಮೊದಲ ಸಿನಿಮಾ.... ಒಳ್ಳೆದಾಗಲಿ...



ಮುನ್ನಿಯ ಮುಗುಳ್ನಗೆ..

"ಜೈ ಜಗದೀಶ್ ಬದಲಾಗಿದ್ದಾರೆ." ಹೀಗೆಂದು ಬೇರೆ ಯಾರಾದರೂ ಹೇಳಿದ್ದರೆ ಅದನ್ನು ಯಾರೂ ನಂಬುತ್ತಿರಲಿಲ್ಲ. ಆದರೆ ಇದನ್ನು ಜೈಜಗದೀಶ್‌ರವರ ಪತ್ನಿ ವಿಜಯಲಕ್ಷ್ಮಿ ಸಿಂಗ್ ಅಲಿಯಾಸ್ ಮುನ್ನಿಯವರೇ ಹೇಳಿದ್ದರಿಂದ ಅದನ್ನು ನಂಬಬಹುದೇನೋ!

ಮುನ್ನಿ ಪ್ರಕಾರ ಜಗ್ಗನ ಕೋಪ ಕಡಿಮೆಯಾಗಿದೆಯಂತೆ, ತಾಳ್ಮೆ ಹೆಚ್ಚಾಗಿದೆಯಂತೆ. ಅಷ್ಟೇ ಅಲ್ಲದೆ, ತಮ್ಮ ಸಿನಿಮಾಗಳಿಗೆ ಧಾರಾಳವಾಗಿ ಖರ್ಚು ಮಾಡುವುದನ್ನೂ ಕಲಿತಿದ್ದಾರಂತೆ.

"ಇದೆಲ್ಲಾ ಸಾಧ್ಯವಾಗಿದ್ದು ಜೈಜಗದೀಶ್ ನಿರ್ದೇಶನಕ್ಕೆ ಇಳಿದ ನಂತರ. ಅದಕ್ಕೂ ಮುನ್ನ ಅವರು ನಿರ್ಮಾಪಕರಾಗಿದ್ದಾಗ ಸಿಟ್ಟು ಮೂಗಿನ ಮೇಲೆ ಇರುತ್ತಿತ್ತು. ಖರ್ಚು ಮಾಡಲು ಹಿಂದುಮುಂದು ನೋಡುತ್ತಿದ್ದರು. ನಿರ್ದೇಶನಕ್ಕೆ ಇಳಿದ ನಂತರ ಅವರ ಮನೋಭಾವವೇ ಬದಲಾಗಿದೆ" ಎಂದರು ಮುನ್ನಿ. ಆದರೆ ಮುನ್ನಿ ಇದನ್ನೆಲ್ಲ ಹೇಳಿದ್ದು ಸ್ವಲ್ಪ 'ಮುನಿ'ಸಿನಿಂದಲೇ ಎಂಬುದು ಗಮನಾರ್ಹ!

ಅದೇನೆ ಇರಲಿ, ಪುಟ್ಟಣ್ಣನವರಿಂದ ಕನ್ನಡ ಚಿತ್ರರಂಗಕ್ಕೆ ಪರಿಚಯವಾದ ಅನೇಕ ತಾರೆಯರಂತೆ ಜೈಜಗದೀಶ್ ಕೂಡಾ ನಿರ್ದೇಶನಕ್ಕೆ ಇಳಿದದ್ದು ಸಂತೋಷ. 300 ಚಿತ್ರಗಳ ಈ ಸರದಾರನ ಮೊದಲ ನಿರ್ದೇಶನದ ಬಗ್ಗೆ ಗಾಂಧಿನಗರದಲ್ಲಿ ಸಹಜ ಕುತೂಹಲ ಇದ್ದೇ ಇದೆ.

ಡ್ರಾಪ್ ದಿ ಲಾಂಗ್

ಮಲ್ಲೇಶ್ವರಂನ 18 ನೇ ಕ್ರಾಸ್‌ನಲ್ಲಿ ದೊಣ್ಣೆ ಮಚ್ಚು, ಲಾಂಗ್ ಹಿಡಿದ 'ಗಲಭೆಕೋರರ' ಹಣೆಗೆ ಪೊಲೀಸರು ಬಂದೂಕು ಇಟ್ಟಿದ್ದರು. ಸ್ವಲ್ಪ ಹೆಚ್ಚು ಕಮ್ಮಿಯಾಗಿದ್ದರೂ ಅಂದು ದೊಡ್ಡ ಅನಾಹುತ ನಡೆದು ಹೋಗುತ್ತಿತ್ತು.

ವಾಸ್ತವವಾಗಿ ಅಂದು ನಡೆಯುತ್ತಿದ್ದದ್ದು ಭಾ.ಮ. ಹರೀಶ್ ನಿರ್ಮಾಣದ, ದೀಪು ಅಭಿನಯದ '18 ನೇ ಕ್ರಾಸ್' ಸಿನಿಮಾದ ಚಿತ್ರೀಕರಣ. ಈಗ ನಗರದಲ್ಲಿ ಎಲ್ಲೆಡೆ ಆತಂಕವಾದಿಗಳ ಕಾಟ ಇರುವುದರಿಂದ ಪೊಲೀಸರು ಸಿಕ್ಕಾಪಟ್ಟೆ ಸ್ಟ್ರಿಕ್ಟಾಗಿದ್ದಾರೆ. ಆದ್ದರಿಂದಲೇ ಲಾಂಗು, ಮಚ್ಚುಗಳನ್ನು ಹಿಡಿದಿರುವವರನ್ನು ನೋಡಿದೇಟಿಗೆ ತಮ್ಮ ಬಂದೂಕನ್ನು ತೆಗೆದು "ಡ್ರಾಪ್ ದಿ ಲಾಂಗ್ ಅಂಡ್ ಮಚ್ಚು" ಎಂದು ಬೆದರಿಸಿದರು.

ಕೊನೆಗೆ ಇವರೆಲ್ಲ ಗೂಂಡಾಗಳಲ್ಲ, ಬದಲಿಗೆ ಜೂನಿಯರ್ ಆರ್ಟಿಸ್ಟ್‌ಗಳು ಎಂದ ಮೇಲೆ ಪೊಲೀಸರು ತಮ್ಮ ಬಂದೂಕನ್ನು ಕೆಳಗಿಟ್ಟಿದ್ದಾರೆ. ಈ ಘಟನೆಯಿಂದ ಭಾ.ಮ. ಹರೀಶ್ ಒಂದೆರಡು ಗಂಟೆ ಶೂಟಿಂಗ್ ಬಿಟ್ಟು ಪೊಲೀಸರ ಹಿಂದೆ ಓಡಾಡಬೇಕಾಯಿತು.



'ತನನಂ ತನನಂ' ಸ್ಯಾಂಡಲ್‌ವುಡ್!

ಸಿನಿಮಾ ತಾರೆಯರ ಸೌಂದರ್ಯದ ಗುಟ್ಟು ಲಕ್ಸ್ ಸಾಬೂನು ಎಂದು ಇನ್ನು ಮುಂದೆ ಆ ಕಂಪನಿಯವರು ಡಂಗುರ ಬಾರಿಸುವಂತಿಲ್ಲ. ಕನಿಷ್ಠ ಕರ್ನಾಟಕದ ಮಟ್ಟಿಗಂತೂ ಅವರು ಹಾಗೆ ಸಾರುವಂತಿಲ್ಲ.

ಯಾಕೆಂದರೆ ಕನ್ನಡದ ಇಬ್ಬರು ಟಾಪ್ ನಾಯಕಿಯರಾದ ರಮ್ಯ ಮತ್ತು ರಕ್ಷಿತಾ ನಟಿಸಿರುವ 'ತನನಂ ತನನಂ' ಚಿತ್ರವನ್ನು ಈಗ ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ ಕಂಪನಿಯವರು ಪ್ರಾಯೋಜಿಸುತ್ತಿದ್ದಾರೆ.

ಇನ್ನೊಂದು ವಿಶೇಷವೆಂದರೆ ಈ ಚಿತ್ರವನ್ನು ಕವಿತಾ ಲಂಕೇಶ್ ನಿರ್ದೇಶಿಸಿರುವುದು. ಹಿರಿಯ ತಾರೆ ಭಾರತಿ ವಿಷ್ಣುವರ್ಧನ್‌ರವರಿಗೂ ಈ ಚಿತ್ರದಲ್ಲಿ ಪ್ರಮುಖ ಪಾತ್ರವಿದೆ. ಹೀಗೆ ಹಲವಾರು ಮಹಿಳಾ ಸೆಲಬ್ರಿಟಿಗಳಿರುವ 'ತನನಂ ತನನಂ' ಸಿನಿಮಾವನ್ನು ಪ್ರಾಯೋಜಿಸುವ ಮೂಲಕ ಪ್ರಸಿದ್ಧ ಸ್ಯಾಂಡಲ್ ಸೋಪನ್ನು ತಯಾರಿಸುವ ಕೆ.ಎಸ್.ಡಿ.ಎಲ್ ಸಂಸ್ಥೆ ತನ್ನ ಹೊಸ ಸಾಬೂನಿಗೆ ಹೆಚ್ಚು ಪ್ರಚಾರ ಸಿಗುವಂತೆ ಮಾಡಿದ್ದಾರೆ. ಇದನ್ನು ಸಿನಿಮಾ-ಸಾಬೂನಿನ ಹೊಸ ನಂಟು ಎಂದು ಕರೆಯೋಣವೇ?!

ರಿಯಲ್ ರೋಮ್ಯಾನ್ಸ್


ದರ್ಶನ್ ಅಭಿಮಾನಿಗಳಿಗೊಂದು ವಿಶೇಷ ಸುದ್ದಿ ಇಲ್ಲಿದೆ. ಅದೇನೆಂದರೆ ಅಪ್ಪಟ ಪ್ರೇಮ ಕತೆಯಾದ 'ಜೊತೆ ಜೊತೆಯಲಿ' ಸಿನಿಮಾಕ್ಕೆ ಸ್ಫೂರ್ತಿ ಸಿಕ್ಕಿದ್ದೇ ದರ್ಶನ್ ಮತ್ತು ಅವರ ಪತ್ನಿಯ ನಡುವಿನ ಸರಸವಂತೆ. ಹಾಗಂತ ಹೇಳಿದ್ದು ಬೇರೆಯಾರೂ ಅಲ್ಲ, ಸ್ವತಃ ಅದರ ನಿರ್ದೇಶಕ ದಿನಕರ್. ಇವರು ಬೇರೆ ಯಾರೂ ಅಲ್ಲ, ದರ್ಶನ್‌ರವರ ಸಹೋದರ!

"ಶೂಟಿಂಗ್ ಮುಗಿಸಿ ಮನೆಗೆ ಬಂದ ನಂತರ ಅಣ್ಣ ಮತ್ತು ಅತ್ತಿಗೆ ಓಡಾಡುವುದನ್ನು, ರೊಮ್ಯಾನ್ಸ್ ಮಾಡುವುದನ್ನು ನೋಡಿಯೇ ನಾನು ಈ ಕಥೆ ಬರೆದದ್ದು" ಎಂದು ದಿನಕರ್ ಮೊನ್ನೆಯ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. "ಹಾಗಾದರೆ ಇದು ದರ್ಶನ್ ದಂಪತಿಗಳ ಕಥೆಯೇ?" ಎಂದು ಪತ್ರಕರ್ತರು ಕೇಳಿದಾಗ, "ಇಲ್ಲ... ಅದು ಸ್ಫೂರ್ತಿ ಮಾತ್ರ, ವಿರಾಮದ ನಂತರ ಕಥೆ ಸಂಪೂರ್ಣ ಬೇರೆ" ಎಂದು ಉತ್ತರಿಸಿದರು. ಅಂದರೆ, ಮೊದಲನೆ ಭಾಗ ರಿಯಲ್, ಎರಡನೆ ಭಾಗ ರೀಲ್!

ಬಿಸಿಬಿಸಿ ಕಸಿವಿಸಿ

"ಕನ್ನಡ ಚಿತ್ರಗಳೆಂದರೆ 'ಬಿಸಿಬಿಸಿ' ಚಿತ್ರಗಳು ಮಾತ್ರವೇ?" ಎಂದು ನಟನೆಗೆ ರಾಷ್ಟ್ರಪ್ರಶಸ್ತಿ ಪಡೆದಿರುವ ದತ್ತಣ್ಣ ಮೊನ್ನೆ ದೂರದರ್ಶನದ ನಿರ್ದೇಶಕ ಮಹೇಶ್ ಜೋಷಿಯವರನ್ನು ಸಮಾರಂಭವೊಂದರಲ್ಲಿ ತರಾಟೆಗೆ ತೆಗೆದುಕೊಂಡರು.


ಅವರ ಈ ಕೋಪಕ್ಕೆ ಕಾರಣ ಇಷ್ಟೇ.... ಈ ಹಿಂದೆ ದೂರದರ್ಶನದಲ್ಲಿ ಮಧ್ಯಾಹ್ನ ಒಂದೂವರೆ ಗಂಟೆಗೆ ಕನ್ನಡ ಚಿತ್ರಗಳು ಪ್ರಸಾರವಾಗುತ್ತಿದ್ದವು. ಆದರೆ ಈಗ ಅವುಗಳನ್ನು ರಾತ್ರಿ ಹನ್ನೊಂದರವರೆಗೆ ಪ್ರಸಾರಮಾಡಲಾಗುತ್ತಿದೆಯಲ್ಲದೆ, 'ಬಿಸಿಬಿಸಿ' ಸಿನಿಮಾಗಳನ್ನೇ ತೋರಿಸುತ್ತಿದ್ದಾರಂತೆ.



"ದಯವಿಟ್ಟು ಮೊದಲಿನಂತೆ ಮಧ್ಯಾಹ್ನವೇ ಒಳ್ಳೆಯ ಕನ್ನಡ ಚಿತ್ರಗಳು ಪ್ರಸಾರವಾಗುವಂತೆ ನೋಡಿಕೊಳ್ಳಿ" ಎಂದು ದತ್ತಣ್ಣ ಮನವಿ ಮಾಡಿಕೊಂಡರು. ಅವರ ಈ ಮನವಿಗೆ ಜೋಷಿಯವರು ತಲೆ ಅಲ್ಲಾಡಿಸಿದರು.

ಆದರೂ, ಮುಂದೆ ಏನಾಗುತ್ತದೆಂದು ಕಿರುಪರದೆಯ ಮೇಲೆ ಕಾದು ನೋಡಬೇಕಾಗಿದೆ.

ರಾಡಿ ರಮೇಶ್‌ಗೆ ನೋ ಪನಿಶ್‌ಮೆಂಟ್



ಉದಯ ಟಿವಿಯ 'ಬಂಗಾರದ ಬೇಟೆ' ಕಾರ್ಯಕ್ರಮಕ್ಕೆ ಮುಂದಿನ ವಾರದಿಂದ ಹೊಸ ನಿರೂಪಕಿ ಬರಲಿದ್ದಾಳೆ.

ಈ ಕಾರ್ಯಕ್ರಮದ ನಿರ್ದೇಶಕ ರಮೇಶನ ಕಿರುಕುಳವನ್ನು ಸಹಿಸಲಾರದೆ ಆತ್ಮಹತ್ಯೆಗೆ ಪ್ರಯತ್ನಿಸಿದ ವಿಜಯಲಕ್ಷ್ಮಿಯನ್ನು 'ಬೇಟೆ' ತಂಡ ಈಗ ಕೈಬಿಟ್ಟಿದೆ. ವಿಜಯಲಕ್ಷ್ಮಿ ಸ್ಥಾನಕ್ಕೆ ಕನ್ನಡದ ಮತ್ತೊರ್ವ ನಟಿ ತಾರಾ ಆಯ್ಕೆಯಾಗಿದ್ದಾಳೆ.

ನಮ್ಮ ಸಿನಿಮಾ, ಟಿವಿಗಳ ವ್ಯವಹಾರ ಹೇಗಿರುತ್ತೆ ನೋಡಿ... ಆತ್ಮಹತ್ಯೆಗೆ ಪ್ರಯತ್ನಿಸಿದ ಮಹಿಳೆಗೇ ಕಾರ್ಯಕ್ರಮದಿಂದ ಗೇಟ್ ಪಾಸ್. ಆದರೆ ಆಕೆಗೆ ಕಿರುಕುಳ ಕೊಟ್ಟು ಆತ್ಮಹತ್ಯೆಗೆ ದೂಡಿದ 'ಗಂಡಸಿ'ಗೆ ಮಾತ್ರ ಯಾವ ಶಿಕ್ಷೆಯೂ ಇಲ್ಲ. ಅಷ್ಟೇ ಅಲ್ಲ, ಹೀಗೆ ಅನ್ಯಾಯವಾಗಿ ದೂಡಿಸಿಕೊಂಡ ಮಹಿಳೆಯ ಜಾಗಕ್ಕೆ ಯಾವ ಮುಲಾಜೂ ಇಲ್ಲದೆ ಮತ್ತೊರ್ವ ಮಹಿಳೆ ಬರುತ್ತಾಳೆ.



ಅಂದರೆ ಇಷ್ಟೇ ಅರ್ಥ: ಮಹಿಳೆ ಟಿವಿಯಲ್ಲಿ 'ಬೇಟೆ' ಎಂಬ ಕಾರ್ಯಕ್ರಮ ನಡೆಸಿಕೊಡಬಹುದು. ಆದರೆ ವಾಸ್ತವವಾಗಿ ಆಕೆ ಎಂದೆಂದಿಗೂ ಪುರುಷನ 'ಬೇಟೆ'ಗೆ ಗುರಿಯಾಗಿರುವ ವಸ್ತು.



'ತನನಂ ತನನಂ' ಚಿತ್ರದಲ್ಲಿ ರಮ್ಯಾ



PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44